ಸಂಪುಟ: 21, ಸಂಚಿಕೆ: 213, ಪುಟಗಳು: 8, ಭಾನುವಾರ, 12 ಮೇ 2024 RNI NO. KARKAN/2002/08054
epaper: www.sanjemugilu.com

ಸುದ್ದಿಗಳ ಹೊನಲು

# ಸಂಜೆ ಮುಗಿಲು

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ



ವೇಣು ಸಾರಥ್ಯದಲ್ಲಿ...

**ಸುಭಾಷಿತ**

ಸಾರ್ವಜನಿಕವಾಗಿಯಾಗಲೀ
ವೈಯಕ್ತಿಕವಾಗಿಯಾಗಲೀ
ಒಂದೇ ರೀತಿಯ ವ್ಯಕ್ತಿತ್ವವನ್ನು
ಕಾಪಾಡಿಕೊಂಡು ಒಂದೇ ತರನಾದ
ವ್ಯಕ್ತಿಯಾಗಿರಿ

• ಗೌತಮ ಬುದ್ಧ

**ಪಂಚಾಂಗ**

(ಭಾನುವಾರ 12, ಮೇ-2024)

- ಸಂವತ್ಸರ: 1946, ಕ್ರೋಧಿ
- ಋತು: ವಸಂತ
- ಅಯನ: ಉತ್ತರಾಯಣ
- ಮಾಸ: ವೈಶಾಖ • ಪಕ್ಷ: ಶುಕ್ಲ
- ತಿಥಿ: ಪಂಚಮೀ • ನಕ್ಷತ್ರ: ಆರ್ದ್ರಾ
- ರಾಹುಕಾಲ: 05:01 ರಿಂದ 06:36
- ಗುಳಿಕಕಾಲ: 03:26 ರಿಂದ 05:01
- ಯಮಗಂಡಕಾಲ: 12:15 ರಿಂದ 01:51

# 10 ಮನೆಗಳಿಗೆ ಹಾನಿ

**ಚಿತ್ರದುರ್ಗ:** ಮಳೆಯಿಲ್ಲದೆ ಬರಡಾಗಿದ್ದ ಕೋಟೆನಾಡಲ್ಲಿ ಧಾರಾಕಾರವಾಗಿ ಸುರಿದ ಮಳೆ ಭಾರೀ ಅವಾಂತರ ಸೃಷ್ಟಿಸಿದೆ. ತೀವ್ರಗಾಳಿ ಮಳೆಯಿಂದ 10 ಮನೆಗಳಿಗೆ ಹಾನಿಯಾಗಿದ್ದು, ಐವರು ಗ್ರಾಮಸ್ಥರು ಗಾಯಗೊಂಡು ಆಸ್ಪತ್ರೆ ಸೇರಿದ್ದಾರೆ.

ಬಿಸಿಲ ಬೇಗೆಯಿಂದ ಬಸವಳಿದಿದ್ದ ಚಿತ್ರದುರ್ಗದ ಕೆಲವೆಡೆ ವರುಣ ತಡರಾತ್ರಿ ಆರ್ಭಟಿಸಿದ್ದಾನೆ. ಚಿತ್ರದುರ್ಗ ತಾಲೂಕಿನ ಮಲ್ಲಾಪುರ ಗ್ರಾಮದಲ್ಲಿ ತೀವ್ರ ಗಾಳಿ ಮಳೆಗೆ ಸಿಲುಕಿದ ಖಾಸಗಿ ಶಾಲೆಯ ಕಬ್ಬಿಣದ ಶೀಟಿನ ಮೇಲ್ಚಾವಣಿ ತೇಲಿ ಬಂದು ಮನೆಗಳ ಮೇಲೆ ಅಪ್ಪಳಿಸಿದೆ. ಹೀಗಾಗಿ ಗ್ರಾಮದ 10ಕ್ಕೂ ಅಧಿಕ ಮನೆಗಳಿಗೆ ಹಾನಿಯಾಗಿದೆ. ಮನೆಯ ಮೇಲ್ಚಾವಣಿ ನೆಲಕ್ಕೆ ಕುಸಿದಿವೆ. ಗುಡುಗು ಸಿಡಿಲಿನ ಅಬ್ಬರಕ್ಕೆ ಗೋಡೆಗಳು ಬಿರುಕು ಬಿಟ್ಟಿವೆ.

ಪುಟ 2

ಕೋಟೆನಾಡಲ್ಲಿ ಧಾರಾಕಾರ ಮಳೆ



# ರಾತ್ರಿ ಹಗಲೇನ್ನದೆ ರೋಗಿಗಳ ಆರೈಕೆ ಮಾಡುವ ದಾದಿಯರಿಗೊಂದು ಸಲಾಂ

**ಅ**ನಾರೋಗ್ಯದಿಂದ ಆಸ್ಪತ್ರೆ ಸೇರಿದಾಗ ಹಗಲು ರಾತ್ರಿ ಎನ್ನದೇ ನಿಮ್ಮ ಸೇವೆಯನ್ನು ಮಾಡುವವರೇ ಈ ದಾದಿಯರು. ವೈದ್ಯಕೀಯ ಕ್ಷೇತ್ರದಲ್ಲಿ ದಾದಿಯರ ಪಾತ್ರವು ದೊಡ್ಡದು. ರೋಗಿಗಳ ಯೋಗಕ್ಷೇಮ, ಸುರಕ್ಷತೆ ಮತ್ತು ಚೇತರಿಕೆಗೆ ಕಾರಣವಾಗುತ್ತಾರೆ. ಹೀಗಾಗಿ ಪ್ರತಿ ವರ್ಷ ಮೇ 12 ರಂದು ಅಂತರಾಷ್ಟ್ರೀಯ ದಾದಿಯರ ದಿನವನ್ನು ಆಚರಿಸಲಾಗುತ್ತಿದೆ.




**ಅಂತರಾಷ್ಟ್ರೀಯ ದಾದಿಯರ ದಿನದ ಇತಿಹಾಸ:** 1965 ರಲ್ಲಿ, ಇಂಟರ್ನ್ಯಾಷನಲ್ ಕೌನ್ಸಿಲ್ ಆಫ್ ನರ್ಸಸ್ ಮೇ 12 ಅನ್ನು ಪ್ರಮುಖ ದಿನಾಂಕವಾಗಿ ಆಚರಿಸಲು ಪ್ರಾರಂಭಿಸಿತು. ಮೇ 12 ರಂದು ಆಧುನಿಕ ಶುಶ್ರೂಷೆಯ ಸಂಸ್ಥಾಪಕ ಫ್ಲಾರೆನ್ಸ್ ನೈಟಿಂಗೇಲ್ ಅವರ ಜನ್ಮದಿನವಾಗಿದೆ. ಅಂತಿಮವಾಗಿ, ಜನವರಿ 1974 ರಲ್ಲಿ, ದಿನವನ್ನು ಅಧಿಕೃತವಾಗಿ ಅಂತರರಾಷ್ಟ್ರೀಯ ದಾದಿಯರ ದಿನವೆಂದು ಘೋಷಿಸಲಾಯಿತು. ಅಂದಿನಿಂದ ಪ್ರತಿ ವರ್ಷ ಮೇ 12 ರಂದು ಅಂತರಾಷ್ಟ್ರೀಯ ದಾದಿಯರ ದಿನವನ್ನು ಆಚರಿಸಲಾಗುತ್ತಿದೆ.

**ಅಂತರಾಷ್ಟ್ರೀಯ ದಾದಿಯರ ದಿನದ ಮಹತ್ವ ಹಾಗೂ ಆಚರಣೆ ಹೇಗೆ?:** ಅಂತರಾಷ್ಟ್ರೀಯ ದಾದಿಯರ ದಿನವು ಪ್ರಪಂಚದಾದ್ಯಂತದ ದಾದಿಯರ ಅಮೂಲ್ಯ ಕೊಡುಗೆಗಳನ್ನು ಗೌರವಿಸುವ ದಿನವಾಗಿದೆ. ಈ ದಿನದಂದು ದಾದಿಯರ ದಿನದ ಕಿಟ್ ಅನ್ನು ಪ್ರತಿ ವರ್ಷ ಐಸಿಎನ್ ಸಿದ್ಧಪಡಿಸಿ ವಿತರಿಸಲಾಗುತ್ತದೆ. ಈ ದಿನದಂದು ದಾದಿಯರ ನಿಸ್ವಾರ್ಥ ಸೇವೆಯ ಬಗ್ಗೆ ತಿಳಿಸಲು ಆರೋಗ್ಯ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ನಾನಾ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತವೆ.

## ಸಂಕ್ಷಿಪ್ತ ಸುದ್ದಿ

### ಮುಸ್ಲಿಂ ಯುವಕರಿಂದ ನೈತಿಕ ಪೊಲೀಸ್‌ಗಿರಿ



**ಬೀದರ್:** ಹಾವೇರಿಯ ಘಟನೆ ಮಾಸುವ ಮುನ್ನವೇ ಬೀದರನ ಬಸವಕಲ್ಯಾಣದಲ್ಲಿ ಮತ್ತೊಂದು ನೈತಿಕ ಪೊಲೀಸ್‌ಗಿರಿ ನಡೆದಿದೆ. ಬಸವಕಲ್ಯಾಣದ ಹೊರವಲಯದ ಪಾರ್ಕ್‌ನಲ್ಲಿ ಹಿಂದೂ ಧರ್ಮೀಯ ವ್ಯಕ್ತಿ ಜೊತೆ ಕುಳಿತಿದ್ದಕ್ಕೆ ಮುಸ್ಲಿಂ ಧರ್ಮೀಯ ಮಹಿಳೆ ಮೇಲೆ ಅದೇ ಧರ್ಮದ ಕೆಲ ಯುವಕರು ಹಲ್ಲೆ ಮಾಡಿದ್ದಾರೆ. ವ್ಯಕ್ತಿ ಆಟೋ ಚಾಲಕನಾಗಿದ್ದು, ಈತನ ಜೊತೆಗೆ ನೀನು ಅನೈತಿಕ ಸಂಬಂಧ ಇಟ್ಟುಕೊಂಡಿದ್ದೀಯಾ, ಮುಸ್ಲಿಮರ ಹೆಸರು ಹಾಳು ಮಾಡುತ್ತೀಯಾ ಎಂದು ಕೆಲ ಮುಸ್ಲಿಂ ಯುವಕರು ಅದೇ ಧರ್ಮದ ಮಹಿಳೆ ಮೇಲೆ ಹಲ್ಲೆ ಮಾಡಿದ್ದಾರೆ. ಸದ್ಯ ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಪುಟ 2

### ಫೇಲ್ ಆದ ವಿಚಾರ ಅಪ್ಪನಿಗೆ ತಿಳಿಯುತ್ತೆ ಎಂದು ಹೆದರಿ ಆತ್ಮಹತ್ಯೆ




**ಆನೇಕಲ್:** ಪರೀಕ್ಷೆಯಲ್ಲಿ ಫೇಲ್ ಆಗಿದ್ದಕ್ಕೆ ಕೆರೆಗೆ ಹಾರಿ ಇಂಜಿನಿಯರಿಂಗ್ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲೂಕಿನ ಜಿಗಣಿ ಬಳಿ ನಡೆದಿದೆ. ಅಮೃತೇಶ್ ಪಾಂಡೆ(21) ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ. ಬಿಹಾರ ಮೂಲದ ಅಮೃತೇಶ್ ಪಾಂಡೆ ಜಿಗಣಿ ಕೆರೆಗೆ ಹಾರಿ ಪ್ರಾಣಬಿಟ್ಟಿದ್ದಾನೆ.

ಹೇಮಲತಾ ಪಾಂಡೆ, ವಿಜಯ್ ಶಂಕರ್ ದಂಪತಿ ಪುತ್ರ ಅಮೃತೇಶ್ ಕಳೆದ ಕೆಲ ವರ್ಷಗಳ ಹಿಂದೆ ಜಿಗಣಿಗೆ ಬಂದು ನೆಲೆಸಿದ್ದ. ಮಗನಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಬೇಕೆಂದು ಕನಸು ಕಂಡಿದ್ದ ಪೋಷಕರು ಅದರಂತೆಯೇ ಮೈಸೂರು ರಸ್ತೆಯ ಆರ್.ವಿ ಕಾಲೇಜಿಗೆ ಸೇರಿಸಿದ್ರು. ಅಮೃತೇಶ್, ಪುಟ 2

## ಕುಮಾರಸ್ವಾಮಿ ಏನು ಸಾಚ ಅಲ್ಲ, ಜೈಲಿಗೆ ಹೋಗುವ ಕಾಲ ಬಂದಿದೆ

# ಶಾಸಕ ಸ್ಫೋಟಕ ಹೇಳಿಕೆ

**ಮಂಡ್ಯ:** ಕುಮಾರಸ್ವಾಮಿ ಏನು ಸಾಚ ಅಲ್ಲ. ರೇವಣ್ಣನಂತೆ ಕುಮಾರಸ್ವಾಮಿ ಜೈಲಿಗೆ ಹೋಗುವ ಕಾಲ ಹತ್ತಿರ ಬಂದಿದೆ. ಇಉಮಾರಸ್ವಾಮಿ ವಿರುದ್ಧವೂ ಮಹಿಳೆಯರು ದೂರು ಕೊಡುತ್ತಾರೆ. ಕುಮಾರಸ್ವಾಮಿ ಲೈಂಗಿಕ ದೌರ್ಜನ್ಯ ಮಾಡಿರುವ ಬಗ್ಗೆ ಕೇಳಿದ್ದೇವೆ. ರಾಧಿಕಾ ಅವರನ್ನ ಪತ್ನಿ ರೀತಿ ಕಾಣುತ್ತಿದ್ದಾರಾ ಪೆನ್‌ಡ್ರೈವ್ ಪ್ರಕರಣ ಬಳಿಕ ಕುಮಾರಸ್ವಾಮಿ ವಿರುದ್ಧವೂ ದೂರು ಕೊಡಲು ಧೈರ್ಯ ಮಾಡಲಿದ್ದಾರೆ. ಎಂದು ಮದ್ದೂರು ಕಾಂಗ್ರೆಸ್ ಶಾಸಕ ಕದಲೂರು ಉದಯ್ ಹೊಸ ಬಾಂಬ್ ಸಿಡಿಸಿದ್ದಾರೆ.

ಮಂಡ್ಯದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಮದ್ದೂರು ಕಾಂಗ್ರೆಸ್ ಶಾಸಕ ಕದಲೂರು ಉದಯ್, ಇಷ್ಟು ದಿನ ಯಾರು ಬಂದು ದೂರು ಕೊಡಲು ಧೈರ್ಯ ಮಾಡಿರಲಿಲ್ಲ. ಕುಮಾರಸ್ವಾಮಿ ಲೈಂಗಿಕ ದೌರ್ಜನ್ಯ ಮಾಡಿರುವ ಬಗ್ಗೆ ಕೇಳಿದ್ದೇವೆ. ರಾಧಿಕಾ ಅವರನ್ನ ಪತ್ನಿ ರೀತಿ ಕಾಣುತ್ತಿದ್ದಾರಾ ಈ ರೀತಿ ಬಹಳಷ್ಟು ನಡೆದಿರಬಹುದು. ಅವರ ಆಪ್ತರೆ ಹಲವಾರು ಬಾರಿ ಹೇಳಿದ್ದಾರೆ. ಕುಮಾರಸ್ವಾಮಿ ಏನು ಸಾಚಾ ಅಲ್ಲ. ಪೆನ್‌ಡ್ರೈವ್ ಪ್ರಕರಣ ಬಳಿಕ ಕುಮಾರಸ್ವಾಮಿ ವಿರುದ್ಧವೂ ದೂರು ಕೊಡಲು ಧೈರ್ಯ ಮಾಡಲಿದ್ದಾರೆ. ಯಾರಾದರೂ ದೂರು ಕೊಟ್ಟರೆ ಸರ್ಕಾರ ತನಿಖೆ ಮಾಡಲಿದೆ ಎಂದು ಹೊಸ ಬಾಂಬ್ ಸಿಡಿಸಿದರು.

ಕುಮಾರಸ್ವಾಮಿ ಏನ್ ಸಾಚಾನ ಮಗಳ ವಯಸ್ಸಿನವರನ್ನ ಪುಸಲಾಯಿಸಿ ಮಗಳು ಹುಟ್ಟಿಸಿ ರೋಡ್‌ನಲ್ಲಿ ಬಿಟ್ಟಿದ್ದಾರೆ. ಕುಮಾರಸ್ವಾಮಿ ನೀಚ ಕೆಲಸ ಮಾಡಿದ್ದಾರೆ. ಸಿಎಂ ಆಗಿದ್ದವರು ಇಂತಹ ನೀಚ ಕೆಲಸ ಮಾಡುತ್ತಾರ ಜೀವನದುದ್ದಕ್ಕೂ ಬ್ಲಾಕ್ ಮೇಲ್, ಅಪಪ್ರಚಾರ ಮಾಡುತ್ತಾ ಬಂದಿದ್ದಾರೆ. ಬೇರೆಯವರನ್ನ ಮುಳುಗಿಸಿದ್ದೆ ಕುಮಾರಸ್ವಾಮಿ ಸಾಧನೆ. ಇವರ ಮನೆ ಹೆಣ್ಣು ಮಕ್ಕಳು ಮರ್ಯಾದೆ ರೋಡ್‌ನಲ್ಲಿ ಹರಾಜಾಗಿದ್ದರೆ ಪ್ರತಿಭಟನೆ ಮಾಡ್ತಿದ್ರಾ, ಸ್ವಂತಕ್ಕೆ ಬೇಕಾಗಿರೋದನ್ನ ಮಾತ್ರ ಕುಮಾರಸ್ವಾಮಿ ಮಾಡ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಪುಟ 2





### ದೇವರಾಜೇಗೌಡಗೆ ಮತ್ತಷ್ಟು ಸಂಕಷ್ಟ

## ಹಳೇ ಕೇಸ್‌ಗಳು ರೀ ಓಪನ್

**ಹಾಸನ:** ಅತ್ಯಾಚಾರ ಆರೋಪ ಪ್ರಕರಣದಲ್ಲಿ ಬಿಜೆಪಿ ಮುಖಂಡ, ವಕೀಲ ದೇವರಾಜೇಗೌಡ ಅವರನ್ನು ಬಂಧಿಸಲಾಗಿದೆ. ವಕೀಲ ದೇವರಾಜೇಗೌಡ ವಿರುದ್ಧದ ಅತ್ಯಾಚಾರ ಪ್ರಕರಣ ಜೊತೆಗೆ ಹಲವು ಹಳೆ ಕೇಸ್ ಗಳನ್ನು ವಿಶೇಷ ತನಿಖಾ ಅಧಿಕಾರಿಗಳು ರೀ ಓಪನ್ ಮಾಡಿದ್ದಾರೆ. ದೇವರಾಜೇಗೌಡ ವಿರುದ್ಧ ಚೀಟಿಂಗ್ ಕೇಸ್ ಸೇರಿದಂತೆ 5ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಅತ್ಯಾಚಾರ ಪ್ರಕರಣ ಜೊತೆಗೆ ಹಳೇ ಪ್ರಕರಣಗಳ ತನಿಖೆಯೂ ಆರಂಭವಾಗಿದೆ. ಈ ಹಿನ್ನೆಲೆಯಲ್ಲಿ ಸದ್ಯ ನ್ಯಾಯಾಂಗ ಬಂಧನದಲ್ಲಿರುವ ದೇವರಾಜೇಗೌಡರನ್ನು ಎಸ್ ಐಟಿ ಅಧಿಕಾರಿಗಳು ಸೋಮವಾರ (ಮೇ13) ಬಾಡಿ ವಾರಂಟ್ ಮೇಲೆ ವಶಕ್ಕೆ ಪಡೆಯುವ ಸಾಧ್ಯತೆ ಇದೆ.



**ಹಳೇ ಪ್ರಕರಣಗಳು:** ಕರ್ತವ್ಯಕ್ಕೆ ಅಡ್ಡಿ ಆರೋಪದಲ್ಲಿ ಮಾರ್ಚ್ 14 ರಂದು ದೇವರಾಜೇಗೌಡ ವಿರುದ್ಧ ಜಿಲ್ಲಾಧಿಕಾರಿ ಸತ್ಯಭಾಮ ಹಾಸನ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಜಿಲ್ಲಾಧಿಕಾರಿಗಳ ದೂರು ಆಧರಿಸಿ ಹಾಸನ ನಗರ ಠಾಣೆಯಲ್ಲಿ ಕೇಸ್ ದಾಖಲಾಗಿದ್ದು, ವಿಚಾರಣೆ ನಡೆಸಲಾಗಿತ್ತು. ನಂತರ ಮಾರ್ಚ್ 29 ರಂದು ವ್ಯಕ್ತಿಯೊಬ್ಬರಿಂದ ಹೊಳೆನರಸೀಪುರ ನಗರ ಠಾಣೆಯಲ್ಲಿ ಜಾತಿನಿಂದನೆ ಪ್ರಕರಣ ದಾಖಲಾಗಿದೆ. ಕರ್ತವ್ಯಕ್ಕೆ ಅಡ್ಡಿ ಜಾತಿ ನಿಂದನೆ, ಲೈಂಗಿಕ ಕಿರುಕುಳ, ಅತ್ಯಾಚಾರ ಆರೋಪ ಸೇರಿದಂತೆ ಹಲವು ಪ್ರಕರಣಗಳ ತನಿಖೆಯನ್ನು ಪೊಲೀಸರು ನಡೆಸುತ್ತಿದ್ದಾರೆ.

**ದೇವರಾಜೇಗೌಡ ಪರಾರಿಯಾಗುತ್ತಿದ್ದು ಎಲ್ಲಿಗೆ:** ತನ್ನ ವಿರುದ್ಧ ಅತ್ಯಾಚಾರ ಆರೋಪ ಕೇಳಿ ಬರುತ್ತಿದ್ದಂತೆ ದೇವರಾಜೇಗೌಡ ರಾಜ್ಯದಿಂದ ಪರಾರಿಯಾಗಲು ಯತ್ನಿಸಿದ್ದರು. ಆದರೆ ಚಿತ್ರದುರ್ಗ ಪೊಲೀಸರು ಆತನನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಪ್ರವಾಸ ಎಂದು ಹೇಳಿ ದೇವರಾಜೇಗೌಡ ಹಿರಿಯೂರಿನಿಂದ ಪುಣೆಗೆ ತೆರಳಿ ಅಲ್ಲಿಂದ ದೆಹಲಿಗೆ ಹೋಗಲು ನಿರ್ಧರಿಸಿದ್ದನು. ದೆಹಲಿಯಲ್ಲಿ ಮಹಾನಾಯಕರ ಭೇಟಿಯಾಗಲು ಯೋಚಿಸಿದ್ದನು. ಪುಟ 2

### ಎಸ್‌ಎಸ್‌ಎಲ್‌ಸಿ ಫಲಿತಾಂಶ

## ಕೃಪಾಂಕ ನೀಡಿದರೂ 10% ರಿಸಲ್ಟ್ ಡೌನ್

**ಬೆಂಗಳೂರು:** ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಅಧ್ಯಕ್ಷೆ ಮಂಜುಶ್ರೀ ಅವರು ಗುರುವಾರ 2023-24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟಿಸಿದ್ದಾರೆ. ಈ ಬಾರಿ ಪರೀಕ್ಷೆ ಬರೆದಿದ್ದ 8.59 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳ ಪೈಕಿ 6,31,204 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಈ ಬಾರಿ ಶೇ.73.40ರಷ್ಟು ಫಲಿತಾಂಶ ದಾಖಲಾಗಿದೆ. ಕಳೆದ ವರ್ಷ ಶೇ.83.89ರಷ್ಟು ಫಲಿತಾಂಶಕ್ಕೆ ಹೋಲಿಸಿದರೆ ಶೇ.10.49ರಷ್ಟು ಕುಸಿತ ಕಂಡಿದೆ.



ವಿದ್ಯಾರ್ಥಿಗಳು ಉತ್ತೀರ್ಣರಾಗುವ ಇದ್ದ ಶೇ 35 ಅರ್ಹ ಅಂಕಗಳನ್ನು ಇಲಾಖೆ ಶೇ 25ಕ್ಕೆ ಇಳಿಸಿದೆ. ಅಲ್ಲದೆ ಈ ಬಾರಿ ಕೃಪಾಂಕವನ್ನೂ ಹೆಚ್ಚಳ ಮಾಡಲಾಗಿದೆ. ಈ ಹಿಂದೆ ಮೂರು ವಿಷಯಗಳಲ್ಲಿ 35 ಅಂಕ ಪಡೆದು ಇನ್ನುಳಿದ ಮೂರು ವಿಷಯಗಳಲ್ಲಿ ಫೇಲ್ ಆಗಿದ್ದರೆ, ಆ ವಿದ್ಯಾರ್ಥಿಗೆ ಇಲಾಖೆ 10 ಕೃಪಾಂಕ ನೀಡಿ ಪಾಸ್ ಮಾಡುತ್ತಿತ್ತು. ಪುಟ 2

## ಬಿಜೆಪಿ ನಿಲುವಿಂದ ವಿಚಲಿತನಾಗಿದ್ದೇನೆ

**ಬೆಂಗಳೂರು:** ಪದವೀಧರಕ್ಷೇತ್ರದಿಂದ ಟಿಕೆಟ್ ಕೈ ತಪ್ಪಿದ್ದಕ್ಕೆ ಮಾಜಿ ಶಾಸಕ ರಘುಪತಿ ಭಟ್ ಅಸಮಾಧಾನ ಹೊರಹಾಕಿದ್ದಾರೆ. ಶಿಕ್ಷಕರ ಕ್ಷೇತ್ರದ ಟಿಕೆಟ್ ಜೆಡಿಎಸ್‌ನ ಚಿಕ್ಕಮಗಳೂರು ಅಭ್ಯರ್ಥಿಗೆ ನೀಡಲಾಗಿದ್ದು, ಪದವೀಧರ ಕ್ಷೇತ್ರದ ಟಿಕೆಟ್ ಶಿವಮೊಗ್ಗದ ಅಭ್ಯರ್ಥಿಗೆ ನೀಡಲಾಗಿದೆ. ಈ ಮೂಲಕ ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಕೊಡಗು ಭಾಗದ ವಿದ್ಯಾವಂತ ಮತದಾರರಿಗೆ ಅನ್ಯಾಯ ಮಾಡಲಾಗಿದೆ. ಬಿಜೆಪಿಯ ಈ ನಿಲುವಿಂದ ವಿಚಲಿತನಾಗಿದ್ದೇನೆ ಪೋಸ್ಟ್ ಮಾಡಿದ್ದಾರೆ.

**ನಾಲ್ಕು ದಶಕಗಳಿಂದ ಬಿಜೆಪಿ ಸಂಪ್ರದಾಯ ಮುರಿದು ಟಿಕೆಟ್?:** ಪದವೀಧರ ಕ್ಷೇತ್ರದಿಂದ ಟಿಕೆಟ್ ಕೈ ತಪ್ಪಿದ ಹಿನ್ನೆಲೆ ಬೆನ್ನಲ್ಲೇ ಬಿಜೆಪಿಯಲ್ಲಿ ಅಸಮಾಧಾನ ಸ್ಫೋಟಗೊಂಡಿದ್ದು, ಮಾಜಿ ಶಾಸಕ ರಘುಪತಿ ಭಟ್ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಶಿಕ್ಷಕರ ಕ್ಷೇತ್ರದ ಟಿಕೆಟ್ ಜೆಡಿಎಸ್‌ನ ಚಿಕ್ಕಮಗಳೂರು ಅಭ್ಯರ್ಥಿಗೆ ನೀಡಲಾಗಿದೆ, ಪದವೀಧರ ಕ್ಷೇತ್ರದ ಟಿಕೆಟ್‌ನ್ನು ಶಿವಮೊಗ್ಗದ ಅಭ್ಯರ್ಥಿಗೆ ನೀಡಲಾಗಿದೆ. ಇದು ನಾಲ್ಕು ದಶಕಗಳಿಂದ ಬಿಜೆಪಿ ಸಂಪ್ರದಾಯ ಮುರಿದು, ಕರಾವಳಿ ಭಾಗಕ್ಕೆ ನೀಡುತ್ತಿದ್ದ ಶಿಕ್ಷಕರ ಕ್ಷೇತ್ರದ ಟಿಕೆಟ್ ನೀಡದೆ ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಕೊಡಗು ಭಾಗದ ವಿದ್ಯಾವಂತ ಮತದಾರರಿಗೆ ಅನ್ಯಾಯ ಮಾಡಿದಾಗಿದೆ. ಬಿಜೆಪಿಯ ಈ ನಿಲುವಿಂದ ವಿಚಲಿತನಾಗಿದ್ದೇನೆ ಎಂದು ರಘುಪತಿ ಭಟ್ ಹೇಳಿದ್ದಾರೆ.

ಪುಟ 2



**ನಿಮ್ಮ ಸಲಹೆ ನಿರೀಕ್ಷೆಯಲ್ಲಿ**

**ಕಳೆದ ವಿಧಾನಸಭೆ ಚುನಾವಣೆಯಲ್ಲಿ ನನಗೆ ಮಾಹಿತಿ ನೀಡದೇ, ನನ್ನನ್ನು ಬದಲಾವಣೆ ಮಾಡಿದ್ದರು. ಆದರೂ ವಿಚಲಿತನಾಗದೇ ಪಕ್ಷದ ಪರವಾಗಿ ಕೆಲಸ ಮಾಡಿದ್ದೇನೆ. ಆ ಸಂದರ್ಭದಲ್ಲಿ ಪದವೀಧರ ಕ್ಷೇತ್ರದ ಟಿಕೆಟ್ ನೀಡೋದಾಗಿ ಹಿರಿಯರು ಭರವಸೆ ನೀಡಿದ್ದರು. ಈಗ ಕರಾವಳಿ ಭಾಗಕ್ಕೆ ನೀಡುತ್ತಿದ್ದ ಶಿಕ್ಷಕರ ಕ್ಷೇತ್ರ ನೀಡದೇ ಅನ್ಯಾಯಕ್ಕೆ ನ್ಯಾಯ ಕೊಡುವವರು ಯಾರು? ಇದು ಪಕ್ಷದ ಪ್ರತಿಯೊಬ್ಬ ಸಾಮಾನ್ಯ ಕಾರ್ಯಕರ್ತ ಮತ್ತು ಪಕ್ಷದ ಅಭಿಮಾನಿಗಳು ಚಿಂತಿಸುವ ಕಾಲ, ಚರ್ಚಿಸೋಣ ನಿಮ್ಮ ಸಲಹೆ ನಿರೀಕ್ಷೆಯಲ್ಲಿ ಎಂದು ತಮ್ಮ ಅಭಿಮಾನಿಗಳಿಗೆ ಕರೆ ಕೊಟ್ಟು ಮಾಜಿ ಶಾಸಕ ಬೇಸರ ಹೊರ ಹಾಕಿದ್ದಾರೆ.**

### ಯೂರೋಪ್‌ನಲ್ಲಿ ಎಸ್‌ಐಟಿ ಟೀಂ ತಲಾಶ್!

## ಪತ್ತೆ ಆಗದ ಪ್ರಜ್ವಲ್ ರೇವಣ್ಣ

**ಬೆಂಗಳೂರು:** ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ಪ್ರಕರಣ ಕೋಲಾಹಲ ಎಬ್ಬಿಸಿದೆ. 16 ದಿನವಾದರೂ ಸಂಸದ ಪ್ರಜ್ವಲ್ ರೇವಣ್ಣ ವಿದೇಶದಲ್ಲಿ ತಲೆಮರೆಸಿಕೊಂಡಿದ್ದು, ಯುರೋಪ್‌ನಲ್ಲಿ ಎಸ್‌ಐಟಿ ಹುಟುಕಾಟ ನಡೆದಿದೆ. ಈ ನಡುವೆ ರೆಡ್ ಕಾರ್ನರ್ ನೋಟಿಸ್ ಜಾರಿಗೂ ಮುಂದಾಗಿದೆ.

ಹೊಳೆನರಸಿಪುರ ಹಾಗೂ ಮೈಸೂರಿನ ಕೆ.ಆರ್ ನಗರದಲ್ಲಿ ದಾಖಲಾಗಿರುವ ಎಫ್‌ಐಆರ್ ತನಿಖೆ ನಡೆಸುತ್ತಿರುವ ಎಸ್ ಐಟಿಗೆ ಪ್ರಜ್ವಲ್ ರೇವಣ್ಣರನ್ನ ಹುಡುಕಿ ಹುಡುಕಿ ಸುಸ್ತಾಗಿ ಹೋಗಿದೆ. ಈಗ ಸದ್ದಿಲ್ಲದೇ ವಿದೇಶಕ್ಕೂ ಎಸ್‌ಐಟಿಯ 7 ಅಧಿಕಾರಿಗಳ ತಂಡ ತೆರಳಿದ್ದು ಪ್ರಜ್ವಲ್ ರೇವಣ್ಣ ಬಂಧಿಸೋಕೆ ಎಲ್ಲಾ ತಯಾರಿ ಮಾಡಿಕೊಂಡಿದೆ.

ಯೂರೋಪ್‌ನಲ್ಲಿ ಅಶ್ಲೀಲ ವಿಡಿಯೋ, ಅತ್ಯಾಚಾರ ಆರೋಪ ಹೊತ್ತಿರುವ ಪ್ರಜ್ವಲ್



ರೇವಣ್ಣ ಓಡಾಡ್ತಾ ಇರುವ ಬಗ್ಗೆ ಖಚಿತ ಮಾಹಿತಿ ಸಿಕ್ಕಿದ್ಯಂತೆ ಮಾಹಿತಿ. ಮುಖ ತೋರಿಸದೇ ಕಾರಲ್ಲಿ ಪ್ರಜ್ವಲ್ ರೇವಣ್ಣ ಸುತ್ತಾಟ ನಡೆಸ್ತಿದ್ದಾರೆ ಅನ್ನೋ ಸುಳಿವು ಎಸ್‌ಐಟಿಗೆ ಸಿಕ್ಕಿದ್ಯಂತೆ. ಪ್ರಮುಖವಾಗಿ ಯೂರೋಪ್‌ನ ಹಂಗೇರಿ ಸಿಟಿಯಲ್ಲಿ ಪ್ರಜ್ವಲ್ ರೇವಣ್ಣ ಓಡಾಡ್ತಿದ್ದಾರೆ ಅಂತ ಗೊತ್ತಾಗಿದೆ. ಈಗಾಗಲೇ ಭಾರತ-ಯೂರೋಪ್ ಮಧ್ಯೆ ಎಂಎಲ್‌ಎಟಿ ಮೂಲಕ ತನಿಖೆ ನಡೆಯುತ್ತಿದೆ. ಎಂಎಲ್ ಎಟಿ ಅಂದರೆ ಮ್ಯೂಚುಯಲ್ ಲೀಗಲ್ ಅಸಿಸ್ಟೆಂಟ್ ಟ್ರೀಟಿ ಹಾಗು ಇಂಟರ್‌ಪೋಲ್ ಮತ್ತು ಸಿಬಿಐನಿಂದಲೂ ಪ್ರಜ್ವಲ್ ರೇವಣ್ಣ ಹಂಗೇರಿಯಲ್ಲಿರೋ ಬಗ್ಗೆ ಮಾಹಿತಿ ಸಿಕ್ಕಿದೆ ಅಂತ ಹೇಳಲಾಗ್ತಿದೆ.

ಪ್ರಜ್ವಲ್ ರೇವಣ್ಣ ಹಂಗೇರಿಯಲ್ಲಿದ್ದಾರೆ ಅನ್ನೋ ಸುಳಿವು ಸಿಕ್ತಿದ್ದಂತೆ ಯೂರೋಪ್‌ಗೆ ಸಿಐಡಿ ಟೀಂ ತೆರಳಿದೆ. ಕರ್ನಾಟಕದಿಂದ ತೆರಳಿರುವ ಒಟ್ಟು 7 ಸಿಐಡಿ ಅಧಿಕಾರಿಗಳ ತಂಡದಲ್ಲಿ ಒಬ್ಬರು ಎಸ್‌ಪಿ, ಮೂವರು ಇನ್ಸ್‌ಪೆಕ್ಟರ್, 3 ಜನಗಳಿದ್ದಾರೆ ಅಂತ ಗೊತ್ತಾಗಿದೆ. ಒಟ್ಟು 7 ಅಧಿಕಾರಿಗಳಿಂದ ಪ್ರಜ್ವಲ್ ರೇವಣ್ಣರನ್ನ ವಿದೇಶಕ್ಕೆ ವಶಕ್ಕೆ ಪಡೆದು ಬಂಧಿಸಿ ಕರೆತರಲು ಎಲ್ಲಾ ಸರ್ಕಸ್ ಶುರುವಾಗಿದೆ. ರಾಜತಾಂತ್ರಿಕ ಪಾಸ್‌ಪೋರ್ಟ್ ಬಳಸಿ ವಿದೇಶದಲ್ಲಿ ಪ್ರಜ್ವಲ್ ರೇವಣ್ಣ ಓಡಾಡ್ತಿದ್ದು, ಜರ್ಮನಿ ರಾಯಭಾರಿ ಮೂಲಕ ಪ್ರಜ್ವಲ್ ಬಂಧನಕ್ಕೆ ಶತಪ್ರಯತ್ನ ನಡೆಸ್ತಿದೆ ವಿಶೇಷ ತನಿಖಾ ತಂಡದ ಅಧಿಕಾರಿಗಳು. ಪುಟ 2

### ಕುಟುಂಬಸ್ಥರನ್ನು ಭೇಟಿಯಾಗದೆ

## ಜೈಲಲ್ಲಿ ರೇವಣ್ಣ ಪರದಾಟ

**ಬೆಂಗಳೂರು:** ಹಾಸನ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಸಂತ್ರಸ್ತೆಯ ಅಪಹರಣಕ್ಕೆ ಸಂಬಂಧಿಸಿದಂತೆ ಜೈಲುಪಾಲಾಗಿರುವ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಅವರು ಕಳೆದ ಮೂರು ದಿನಗಳಿಂದಲೂ ಕುಟುಂಬಸ್ಥರನ್ನು ಭೇಟಿಯಾಗದೆ ಪರದಾಡುತ್ತಿದ್ದಾರೆ. ಪರಪ್ಪನ ಅಗ್ರಹಾರ ಜೈಲಿನಲ್ಲಿ ಇಂದು ಬೆಳಗ್ಗೆ ವೆಜ್ ಪಲಾವ್ ಸೇವಿಸಿದ ರೇವಣ್ಣ, ಕಾಫಿ ಕುಡಿದು, ಪೇಪರ್ ಓದಿದ್ದಾರೆ. ಕುಟುಂಬಸ್ಥರು, ಆಪ್ತರನ್ನು ಭೇಟಿಯಾಗದ ಕಾರಣ ಪತ್ರಿಕೆಯೇ ಅವರಿಗೆ ಸಂಗಾತಿಯಾದಂತಾಗಿದೆ. ಇದರ ಮಧ್ಯೆಯೇ, ರೇವಣ್ಣ ಅವರಿಗೆ ಮತ್ತೆ ಹೊಟ್ಟೆ ನೋವು ಕಾಣಿಸಿಕೊಂಡಿದೆ ಎಂದು ತಿಳಿದುಬಂದಿದೆ.



ಶುಕ್ರವಾರ, ಶನಿವಾರ ಹಾಗೂ ಭಾನುವಾರ ಸರ್ಕಾರಿ ರಜೆ ಹಿನ್ನೆಲೆಯಲ್ಲಿ ಎಚ್.ಡಿ.ರೇವಣ್ಣ ಅವರು ಯಾರನ್ನೂ ಭೇಟಿಯಾಗಲು ಸಾಧ್ಯವಾಗಿಲ್ಲ. ಇದರಿಂದಾಗಿ ಅವರು ಮಾನಸಿಕವಾಗಿ ಕುಗ್ಗಿಹೋಗಿದ್ದಾರೆ. ಜೈಲಿನ ಬ್ಯಾರಕ್‌ನಲ್ಲಿ ಕೆಲ ಹೊತ್ತು ವಾಕ್ ಮಾಡಿದ ರೇವಣ್ಣ, ಬಳಿಕ ದೀರ್ಘ ಅವಧಿಗೆ ಪೇಪರ್ ಓದುತ್ತಲೇ ಕುಳಿತಿದ್ದರು ಎಂದು ಜೈಲಿನ ಮೂಲಗಳು ಮಾಹಿತಿ ನೀಡಿವೆ. ರೇವಣ್ಣ ಅವರು ನಾಳೆ ಜಾಮೀನು ಸಿಗುವ ನಿರೀಕ್ಷೆಯಲ್ಲಿದ್ದಾರೆ. ಕಳೆದ ನಾಲ್ಕು ದಿನಗಳಿಂದ ಅವರು ಪರಪ್ಪನ ಅಗ್ರಹಾರದಲ್ಲೇ ಇದ್ದಾರೆ. ಲೈಂಗಿಕ ದೌರ್ಜನಕ್ಕೀಡಾದ ಸಂತ್ರಸ್ತೆಯನ್ನು ಅಪಹರಣ ಮಾಡಿದ ಪ್ರಕರಣದಲ್ಲಿ ಮೊದಲ ಆರೋಪಿಯಾಗಿರುವ ಎಚ್.ಡಿ.ರೇವಣ್ಣ ಅವರನ್ನು ಎಸ್ ಐಟಿ ಅಧಿಕಾರಿಗಳು ಬಂಧಿಸಿದ್ದಾರೆ. ಅವರು ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನ್ಯಾಯಾಲಯವು ತಿರಸ್ಕರಿಸಿತ್ತು. ಇದಾದ ಬಳಿಕ ಅವರು ಸಲ್ಲಿಸಿದ ರೆಗ್ಯುಲರ್ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ್ದ ಕೋರ್ಟ್, ಜಾಮೀನು ನೀಡದೆ ನಾಳೆಗೆ ವಿಚಾರಣೆ ಮುಂದೂಡಿತ್ತು. ಪುಟ 2

### ಇಂದು ದೇಶ್ಯಾದ್ಯಂತ ಕಾಮೆಡ್-ಕೆ

## ಪರೀಕ್ಷೆ

**ಬೆಂಗಳೂರು:** ಇಂದು ದೇಶಾದ್ಯಂತ ಕಾಮೆಡ್-ಕೆ ಪರೀಕ್ಷೆ ನಡೆಯಲಿದೆ. ಬೆಂಗಳೂರು ಸೇರಿ ದೇಶದ 182 ನಗರಗಳ 264 ಕೇಂದ್ರಗಳಲ್ಲಿ ಈ ಪರೀಕ್ಷೆ ನಡೆಯಲಿದೆ.

ಒಂದೇ ದಿನ 3 ಅವಧಿಗಳಲ್ಲಿ ಪರೀಕ್ಷೆ ನಡೆಯಲಿದ್ದು, ಒಟ್ಟು 1.18 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿದ್ದಾರೆ. ಬೆಳಗ್ಗೆ 8.30ರಿಂದ 11.30, ಮಧ್ಯಾಹ್ನ 1ರಿಂದ 4 ಗಂಟೆ ಹಾಗೂ ಸಂಜೆ 5.30ರಿಂದ 8.30ರ ವರೆಗೆ ಮೂರು ಸೆಷನ್‌ಗಳಲ್ಲಿ ಪರೀಕ್ಷೆ ನಡೆಯಲಿದೆ. ಅಭ್ಯರ್ಥಿಗಳು ಪ್ರವೇಶ ಪತ್ರದೊಂದಿಗೆ ನಿಗದಿತ ಸಮಯಕ್ಕೆ ಪರೀಕ್ಷಾ ಕೇಂದ್ರಕ್ಕೆ ಹಾಜರಾಗುವಂತೆ ಕಾಮೆಡ್-ಕೆ ಪ್ರಕಟಣೆಯಲ್ಲಿ ತಿಳಿಸಿದೆ.

ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಮತ್ತು ಡೀಮ್ಡ್ ವಿವಿಗಳಲ್ಲಿ ಎಂಜಿನಿಯರಿಂಗ್ ಕೋರ್ಸ್ ಪ್ರವೇಶಾತಿಗೆ ಕಾಮೆಡ್-ಕೆ ಪರೀಕ್ಷೆ ನಡೆಸಲಾಗುತ್ತದೆ.

# ನಂಜನಗೂಡಿನ ವಿಶ್ವ ಗುರು ಬಸವೇಶ್ವರ ವೃತ್ತದಲ್ಲಿ ಬಸವ ಜಯಂತಿ





**ನಂಜನಗೂಡು:** ಇಲ್ಲಿನ ಸಮೃದ್ಧಿ ಗೆಳೆಯರ ಬಳಗದ ವತಿಯಿಂದ ನಂಜನಗೂಡಿನ ವಿಶ್ವ ಗುರು ಬಸವೇಶ್ವರ ವೃತ್ತದಲ್ಲಿ ವಿಶ್ವ ಮಾನವ, ಮಹಾ ಮಾನವತವಾದಿ ಬಸವಣ್ಣನವರ ಜಯಂತಿಯನ್ನು ಬಸವಣ್ಣನವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಆಚರಿಸಲಾಯಿತು.

ಬಸವಣ್ಣನವರ ಸಂದೇಶ ಇವನಾರವ ಇವನಾರವ ಎನ್ನದಿರಯ್ಯ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ ಎನ್ನುವ ಗೀತೆಯನ್ನು ಸಾಮೂಹಿಕವಾಗಿ ಹಾಡುವುದರ ಮೂಲಕ ಚಾಲನೆ ನೀಡಲಾಯಿತು

ನಂತರ ಮಾತನಾಡಿ, ಬಸವ ಕಲ್ಯಾಣದ ಸುಗುಣ ಮಾತಾಜಿ ಶರಣರ ವಚನಗಳಲ್ಲಿ ನಮ್ಮ ಬದುಕಿಗೆ ಬೇಕಾದ ಎಲ್ಲಾ ಸಂದೇಶಗಳಿವೆ. ಬಸವಣ್ಣ ಸರ್ವಕಾಲಕ್ಕೂ ಸಲ್ಲುವ ಮಹಾ ಮಾನವತಾವಾದಿ ಸಮಾಜದಲ್ಲಿ ಇದ್ದ ಎಲ್ಲಾ ತಾರತಮ್ಯಗಳನ್ನು ಹೋಗಲಾಡಿಸಿ ಭೋಗಕ್ಕೆ ಸೀಮಿತವಾಗಿದ್ದ ಮಹಿಳೆಯರನ್ನು ಪುರುಷ ಸಮನಾಗಿ ಕಾಣುವುದರ ಮೂಲಕ ಸ್ತ್ರೀ ಸ್ವಾತಂತ್ರವನ್ನು ಎತ್ತಿ ಹಿಡಿದು ಮಹಿಳಾ ಆತ್ಮಗೌರವ ರಕ್ಷಣೆಯ ಪ್ರತೀಕವಾದ ಹಾಗೂ ಪ್ರತಿಯೊಬ್ಬರೂ ದುಡಿದು ಉಣ್ಣಬೇಕೆಂಬ ಕಾಯಕ ದಾಸೋಹದ ಪರಿಕಲ್ಪನೆಯನ್ನು ಜಗತ್ತಿಗೆ ನೀಡಿದ ಕಾಯಕದಲ್ಲಿ ಹಿರಿದು ಕಿರಿದು ಎನ್ನುವುದಿಲ್ಲ ಎಲ್ಲರ ಸತ್ಯ ಶುದ್ಧ ಕಾಯಕವನ್ನು ಗೌರವಿಸಬೇಕು. ಹುಟ್ಟಿನಿಂದ ಯಾರು ಶ್ರೇಷ್ಠರಲ್ಲ, ನಡೆ ನುಡಿಯಿಂದ ಮಾತ್ರ ಶ್ರೇಷ್ಠನಾಗಲು ಸಾಧ್ಯ ಎನ್ನುವುದಕ್ಕೆ ದೇಶದ ವಿವಿಧ ಮೂಲೆಗಳಿಂದ ಕಲ್ಯಾಣಕ್ಕೆ ಬಂದು ವಿವಿಧ ಕಾಯಕ ತೊಡಗಿಸಿಕೊಂಡ ನೂರಾರು ಶರಣರೇ ಸಾಕ್ಷಿ. ಹಾಗಾಗಿ ಬಸವ ಧರ್ಮದಲ್ಲಿ ಹುಟ್ಟಿದ ನಾವೇ ಧನ್ಯರು. ಮನಶುದ್ಧಿಗಾಗಿ ಶಿವಯೋಗ ತನುಶುದ್ಧಿಗಾಗಿ ಕಾಯಕವನ್ನು ಪ್ರತಿಯೊಬ್ಬರೂ ಮಾಡಬೇಕು ಎಂದರು. ಪ್ರತಿ ಯೊಬ್ಬರು ವಚನಗಳನ್ನು ಅಧ್ಯಯನ ಮಾಡಿದಾಗ ಪರಿಶುದ್ಧ ಹಾಗು ಸಾರ್ಥಕ ಜೀವನ ನಡೆಸಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಮೃದ್ಧಿ ಗೆಳೆಯರ ಬಳಗದ ಕಲ್ಮಳ್ಳಿ ನಟರಾಜು, ಕಾರ್ಯದರ್ಶಿ ಸುರೇಶ್, ಸಂಚಾಲಕ ರಾಜಶೇಖರ್, ಬಸವ ಬಳಗದ ಅಧ್ಯಕ್ಷ ಸೋಮಣ್ಣ, ನಾಗೇಂದ, ನಂದಿನಿ, ಡಾ.ಮಹೇಶ್, ಬಾಂಧವ್ಯ ಬಳಗದ ಅಧ್ಯಕ್ಷ ಶಾಂತಮಲ್ಲಪ್ಪ ಗುರು ಮಲ್ಲಪ್ಪ, ರಾಚಪ್ಪಾಜಿ, ಮಹದೇವಪ್ಪ, ವೀರಶೈವ ಕ್ರೆಡಿಟ್ ಕೊ ಆಪರೇಟಿವ್ ಅಧ್ಯಕ್ಷ ಬಸವಣ್ಣ, ಪ್ರಭುಸ್ವಾಮಿ,ಪೋಸ್ಟ್ ಮಹದೇವಪ್ಪ, ತ್ಯಾಗಿ. ಪ್ರತಿಧ್ವನಿ ವೇದಿಕೆಯ ಅಧ್ಯಕ್ಷ ತ್ರೀನೇಶ್, ಲೋಕೇಶ್, ಪಿಡಿಒ, ಚಿನ್ನಬುದ್ಧಿ, ಮಹದೇಶ್ವರ ಬಳಗದ ಪುಟ್ಟಬುದ್ಧಿ, ಮರಿಸ್ವಾಮಿ, ಲೋಕೇಶ್ ಸೇರಿದಂತೆ ಎಲ್ಲಾ ಅಧ್ಯಕ್ಷರೂ ಪದಾಧಿಕಾರಿಗಳು ಭಾಗವಹಿಸಿದ್ದರು.

ಸರಳ ಬಸವ ಜಯಂತಿ ಆಚರಣೆ ಲೋಕಸಭಾ ಚುನಾವಣೆಯ ಹಿನ್ನಲೆಯಲ್ಲಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು. ಇಲ್ಲಿನ ಕಾಂಗ್ರೆಸ್ ಪಕ್ಷದ ಕಛೇರಿಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ರವರು ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಬಸವಣ್ಣನವರ ತತ್ವ-ಸಿದ್ಧಾಂತ ಮತ್ತು ಜೀವನದ ಬಗ್ಗೆ ಮಾತನಾಡಿದರು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಅಧ್ಯಕ್ಷರುಗಳು ಹಾಗೂ ಪಕ್ಷದ ಮುಖಂಡರುಗಳು ಭಾಗವಹಿಸಿದ್ದರು.

ಬಿಜೆಪಿ ಕಛೇರಿಯಲ್ಲಿ ಬಸವ ಜಯಂತಿ: ನಗರದ ಬಿಜೆಪಿ ಕಛೇರಿಯಲ್ಲಿ ಸರಳವಾಗಿ ಬಸವ ಜಯಂತಿಯನ್ನು ಆಚರಿಸಲಾಯಿತು. ವೀರಶೈವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಎನ್.ಸಿ.ಬಸವಣ್ಣ ಈ ಸಂದರ್ಭದಲ್ಲಿ ಮಾತನಾಡಿ ಬಸವಣ್ಣನವರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತಿಳಿಸಿದರು. ಪಕ್ಷದ ಮುಖಂಡರುಗಳು ಭಾಗವಹಿಸಿದ್ದರು.

ತಾಲ್ಲೂಕು ಕಛೇರಿಯಲ್ಲಿ ಬಸವ ಜಯಂತಿ: ತಾಲ್ಲೂಕು ಆಡಳಿತ ವತಿಯಿಂದ ಸರಳವಾಗಿ ಬಸವ ಜಯಂತಿಯನ್ನು ಆಚರಿಸಲಾಯಿತು. ತಹಸೀಲ್ದಾರ್ ಶಿವಕುಮಾರ್ ಕಾಸನೂರು ರವರು ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರು ತಿಳಿದುಕೊಂಡು ಆ ನಿಟ್ಟಿನಲ್ಲಿ ಮುಂದುವರೆಯಬೇಕೆಂದು ಕೋರಿದರು. ಈ ಸಂದರ್ಭದಲ್ಲಿ ವಿವಿಧ ಅಧಿಕಾರಿಗಳು ಭಾಗವಹಿಸಿದ್ದರು.

## ಕಾಯಕ ಸಮಾಜ ಪುಟ್ಟಸಿದ್ದಶೆಟ್ಟಿ ಬೆಂಬಲಿಸಲು ಮನವಿ

**ಹುಣಸೂರು:** 2024ರ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಹಿರಿಯ ಹೋರಾಟಗಾರ, 1986 ರಲ್ಲಿ ಪ್ರೌಢಶಾಲಾ ಶಿಕ್ಷಕರ ಸಂಘದ ಸ್ಥಾಪನೆಯ ರೂವಾರಿ, ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ. ಸಿ. ಪುಟ್ಟಸಿದ್ದಶೆಟ್ಟಿ ಅವರನ್ನು ಹಿಂದುಳಿದ ವರ್ಗ ಹಾಗೂ, ಕಾಯಕ ಸಮಾಜಗಳು ಬೆಂಬಲಿಸಬೇಕೆಂದು ರಾಜ್ಯ ಕಾಯಕ ಸಮಾಜಗಳ ಸಂಚಾಲಕ ಕೆಂಪಶೆಟ್ಟಿ ಮನವಿ ಮಾಡಿದರು. ಅವರು ನಗರದ ಪತ್ರಕರ್ತರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಎಲ್ಲಾ ರಾಜಕೀಯ ಪಕ್ಷಗಳು ಬಲಿಷ್ಠ ಸಮಾಜಗಳಿಗೆ ಅವಕಾಶ ಮಾಡಿಕೊಡುತ್ತಿದ್ದಾರೆ. ಹಾಗಾದರೆ ಸಣ್ಣಪುಟ್ಟ ಸಮಾಜಗಳು ಎಲ್ಲಾದರಲ್ಲೂ ಅವಕಾಶ ವಂಚಿತರಾಗಬೇಕೆ ಎಂದು ಪ್ರಶ್ನಿಸಿದ ಅವರು ನಮ್ಮ ಕಾಯಕ ಸಮಾಜಗಳಿಗಾಗಿ ಹೋರಾಟ ಮಾಡಿಕೊಂಡು ಬಂದಿರುವ ಕೆ.ಸಿ. ಪುಟ್ಟಸಿದ್ದಶೆಟ್ಟಿರವರೂ ಈ ಬಾರಿ ಸ್ಪರ್ಧಿಸುತ್ತಿದ್ದು ಇವರನ್ನು ಎಲ್ಲಾ ಶಿಕ್ಷಕ ಮತದಾರ ಬಂಧುಗಳು ತಮ್ಮ ಸೇವೆಗೆ ಇವರಿಗೆ ಒಂದು ಬಾರಿ ಅವಕಾಶ ಮಾಡಿಕೊಡಬೇಕು ಎಂದರು.

ಮಾಜಿ ಗ್ರಾಮ ಪಂಚಾಯಿತಿ ಸದಸ್ಯ, ಕಾಯಕ ಸಮಾಜಗಳ ರಾಜ್ಯ ನಿರ್ದೇಶಕ ಶಿವಪ್ಪಶೆಟ್ಟಿ ಮಾತನಾಡಿ, 1986 ರಿಂದ ಪ್ರೌಢಶಾಲಾ ಶಿಕ್ಷಕರ ಸಂಘ ಸ್ಥಾಪಿಸಲು ಹೋರಾಟಮಾಡಿ ಅದರ ಮೂಲಕವೇ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದರು. ಶಿಕ್ಷಕರ ನೋವು ನಲಿವುಗಳಿಗೆ ಸ್ಪಂದಿಸಿ ಶಿಕ್ಷಕರ ಸಂಘಗಳನ್ನು ಕಟ್ಟಿ ಅನೇಕ ಹೋರಾಟಗಳನ್ನು ಮಾಡಲು ಮೂಲಕ ಎಲ್ಲಾ ಸಾಮಾಜಿಕ ಹೋರಾಟಗಳಲ್ಲಿ ತೊಡಗಿಸಿಕೊಂಡರು. 24 ವರ್ಷ ಮೇಲ್ಮನೆ ಸದಸ್ಯರಾಗಿರುವ ಮರಿತಿಬ್ಬೇಗೌಡರನ್ನು 2000 ರಲ್ಲಿ ನಡೆದ ಚುನಾವಣೆಯಲ್ಲಿ ಗೆಲ್ಲಿಸಿದ್ದು ಕೆ.ಸಿ.ಪುಟ್ಟಸಿದ್ದಶೆಟ್ಟಿ ಆದರೆ ಅವರು ಶಿಕ್ಷಕರ ಸಮಸ್ಯೆಗಳನ್ನು ಪರಿಹರಿಸಲಿಲ್ಲ, ಇವರಿಗೆ ಮತ ಕೇಳುವ ನೈತಿಕತೆ ಇಲ್ಲ, ಹಿಂದುಳಿದ ದಲಿತರ ಮತ್ತು ಅಲ್ಪಸಂಖ್ಯಾತರನ್ನು ಎಲ್ಲಾ ರಾಜಕೀಯ ಪಕ್ಷಗಳು ಅವಮಾನಿಸಿಕೊಂಡು ಬರುತ್ತಿದ್ದಾರೆ. ಆದ್ದರಿಂದ ನಮ್ಮ ಕೆ.ಟಿ.ಪುಟ್ಟಸಿದ್ದಶೆಟ್ಟಿ ಈ ನೊಂದ ಸಮಾಜಗಳ ಶಕ್ತಿಯಾಗಿ ನಿಲ್ಲುತ್ತಾರೆ ಆದ್ದರಿಂದ ಈ ಬಾರಿ ನಡೆಯುವ ದಕ್ಷಿಣ ಶಿಕ್ಷಕರ ಚುನಾವಣೆಯಲ್ಲಿ ಮೊದಲ ಪ್ರಾಶಸ್ತ್ಯದ ಮತವನ್ನು ನೀಡಿ ಅಹಿಂದ ವರ್ಗಗಳಿಗೆ ಆಗುತ್ತಿರುವ ಅನ್ಯಾಯಗಳನ್ನು ಮನಗಂಡು ಈ ಬಾರಿ ಮತ ಚಲಾಯಿಸಿ ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ನಿರ್ದೇಶಕ ಕೋಣನೂರು ಶಿವರಾಜು, ಮೋಹನದಾಸ್, ಹಾಜರಿದ್ದರು.



### ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹೇಳಿಕೆ

# ಅಂಬೇಡ್ಕರ್ ಅಭಿಮಾನಿಗಳು ಸ್ವಾಭಿಮಾನಿಗಳು

**ಮೈಸೂರು:** ಡಾ.ಬಿ.ಆರ್.ಅಂಬೇಡ್ಕರ್ ಅವರ ಕಟ್ಟಾ ಅಭಿಮಾನಿಗಳೆಲ್ಲರೂ ಸ್ವಾಭಿಮಾನಿಗಳೇ ಆಗಿದ್ದಾರೆ. ಹೇಳುವುದೊಂದು, ಮಾಡುವುದು ಇನ್ನೊಂದು ಮಾಡಿ ಸ್ವಾಭಿಮಾನಿಯಾಗಲು ಸಾಧ್ಯವಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹೇಳಿದರು.

ನಗರದ ಅಶೋಕಪುರಂನ ಮಾನಂದವಾಡಿ ರಸ್ತೆಯಲ್ಲಿನ ವಿ.ಶ್ರೀನಿವಾಸ ಪ್ರಸಾದ್ ಅವರ ಸಮಾಧಿ ಬಳಿ ಡಾ.ಬಿ.ಆರ್.ಅಂಬೇಡ್ಕರ್ ಶಿಕ್ಷಣ ಹಾಗೂ ಸಾಂಸ್ಕೃತಿಕ ಟ್ರಸ್ಟ್ ಸಮಾನತೆ-ಸ್ವಾಭಿಮಾನ-ಸ್ವಾವಲಂಬನೆ ಪ್ರತಿಷ್ಠಾನ ಮತ್ತು ಸಮಾನತೆ ಪ್ರಶಾಶನದ ಸಹಯೋಗದಲ್ಲಿ ಸ್ವಾಭಿಮಾನಿಗೆ ಸಾವಿರದ ನುಡಿನಮನ ವಿ.ಶ್ರೀನಿವಾಸ ಪ್ರಸಾದ್ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶ್ರೀನಿವಾಸಪ್ರಸಾದ್ ಅವರ 50 ವರ್ಷಗಳ ಸುದೀರ್ಘ ಸಾರ್ವಜನಿಕ ಜೀವನದಲ್ಲಿನಡೆ, ನುಡಿ, ನಿಲುವು, ಬದ್ಧತೆ ಅತ್ಯಂತ ಪ್ರಮುಖವಾದವು. ಪ್ರಸಾದರನ್ನು ವಿಭಿನ್ನವಾಗಿ ನೋಡುವುದು ಯಾಕೆಂದರೆ ಸಂಘಟನೆ ಮುಖಾಂತರ ಹೋರಾಟ ಮಾಡಿದ್ದರು. ಹೋರಾಟ ವ್ಯಕ್ತಿತ್ವವನ್ನು ರೂಪಿಸುತ್ತದೆ. ವ್ಯಕ್ತಿತ್ವ ನೈತಿಕತೆ ನೀಡುತ್ತದೆ. ಈ ಎಲ್ಲಾ ವಿಷಯಗಳು ಅವರನ್ನು ಪ್ರಬುದ್ಧ ನಾಯಕರಾಗಿ ರೂಪಿಸಿದವು ಎಂದರು.

ಸೈದ್ಧಾಂತಿಕ ನಿಲುವಿನಲ್ಲಿ ಗಟ್ಟಿತನ ಯಾರಲ್ಲಿ ಇರುತ್ತದೆಯೋ ಅವರು ಮಾತ್ರ ಸ್ವಾಭಿಮಾನಿಯಾಗಲು ಸಾಧ್ಯ. ಅದಕ್ಕೆ ಅಂಬೇಡ್ಕರ್ ಸ್ವಾಭಿಮಾನಿ ಅಲ್ಲದವರು ಬದುಕಿದ್ದು ಪ್ರಯೋಜನವಿಲ್ಲ ಎಂದಿದ್ದರು. ಅದಕ್ಕೆ ತಕ್ಕಂತೆ ಪ್ರಸಾದರು ಗಟ್ಟಿ ನಿಲುವಿನೊಂದಿಗೆ ಸ್ವಾಭಿಮಾನಿ ಜೀವನ ನಡೆಸಿದರು ಎಂದು ಹೇಳಿದರು.

ಶ್ರೀನಿವಾಸಪ್ರಸಾದರಿಗೆ ಸಾಮಾಜಿಕ ವ್ಯವಸ್ಥೆಯ ವಿರುದ್ದವಾಗಿದ್ದ ಸಾತ್ವಿಕ ಸ್ವಭಾವದ ಸಿಟ್ಟು ಬಹಳಷ್ಟಿತ್ತು. ಅನ್ಯಾಯವನ್ನು ಸಹಿಸಿಕೊಳ್ಳದೆ ತಕ್ಷಣ ಪ್ರತಿಕ್ರಿಯಿಸುತ್ತಿದ್ದರು. ಸಮಾಜದಲ್ಲಿ ಇದ್ದಂತಹ ಬದುಕಿನ ಅಸ್ತವ್ಯಸ್ತತೆ, ತಾರತಮ್ಯಗಳು, ಪ್ರತ್ಯೇಕತವಾದಗಳು, ಮಾನವ ಹಕ್ಕುಗಳ ಉಲ್ಲಂಘನೆ ಸೇರಿದಂತೆ ಮನುವಾದದ ವಿರುದ್ಧದ ಸಿಟ್ಟನ್ನು ಹೊರಹಾಕುತ್ತಿದ್ದರು. ಅದರಲ್ಲಿ ಯಾವುದೇ ಸಮುದಾಯ, ವ್ಯಕ್ತಿಯನ್ನು ನಿಂದನೆ ಮಾಡುವ ಉದ್ದೇಶ ಇರಲಿಲ್ಲ ಎಂದರು.

ಅವರ ನಿಲುವುಗಳು ಯಾವುದೇ ರಾಜಕೀಯ ದುರುದ್ದೇಶದಿಂದ ಕೂಡಿರಲಿಲ್ಲ. ಸದಾಕಾಲ ಅನ್ಯಾಯಕ್ಕೆ, ಶೋಷಣೆಗೆ ಒಳಗಾದವರ, ದನಿ ಇಲ್ಲದವರ, ಉತ್ತಮ ಬದುಕಿನ ಸವಲತ್ತುಗಳಿಂದ ವಂಚಿತರಾದ ಸಮುದಾಯಗಳ ಪರವಾಗಿತ್ತು.

ಬುದ್ಧನ ಮಾರ್ಗದಲ್ಲಿ ನಡೆದ ಪ್ರಸಾದ್: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಮಾಜಿ ಅಧ್ಯಕ್ಷ ಸಿ.ಎಸ್.ದ್ವಾರಕಾನಾಥ್ ಮಾತನಾಡಿ, ರಾಜ್ಯ ರಾಜಕಾರಣದಲ್ಲಿ ಗಟ್ಟಿಯಾಗಿ ಮಾತನಾಡಿದ್ದರು. ಅವರಲ್ಲಿ ಸ್ಪಷ್ಟತೆ ಇತ್ತು ಕೆಲವು ವಿಚಾರಗಳು ನಮಗೆ ಇಷ್ಟವಾಗದೆ ಇದ್ದರೂ ಅಂಬೇಡ್ಕರ್ ಸಿದ್ಧಾಂತದಿಂದ ಹೊರ ಬರಲಿಲ್ಲ. ಬುದ್ಧನ ಚಿಂತನೆಗಳನ್ನು ಅಪ್ಪಿಕೊಂಡರು ಎಂದು ಹೇಳಿದರು. ಬುದ್ಧನ ಮಾರ್ಗದಲ್ಲಿ ಕೊನೆಯ ತನಕವೂ ಉಳಿದುಕೊಂಡು ಸಾಗಿದರು ಎಂದು ಹೇಳಿದರು.



### ಸಿದ್ದರಾಮಯ್ಯರನ್ನು ಹೊಗಳಿದ ಸಿಂಹ

**ಸಂಸದ ಪ್ರತಾಪಸಿಂಹ ಮಾತನಾಡಿ, ಯಾವುದೇ ವಿಚಾರದ ಬಗ್ಗೆ ನಿಲುವು ತೆಗೆದುಕೊಳ್ಳುವಾಗ ವಸ್ತುನಿಷ್ಠವಾಗಿ ನೋಡುತ್ತಿದ್ದರೇ ಹೊರತು ಜಾತಿ ಧರ್ಮದಲ್ಲಿ ನೋಡಿರಲಿಲ್ಲ. ದೇಹ ನಮ್ಮೊಂದಿಗೆ ಇಲ್ಲದಿದ್ದರೂ ಶ್ರೀನಿವಾಸ ಪ್ರಸಾದ್ ಅವರು ಸದಾ ನಮ್ಮ ನಡುವೆ ಇರುತ್ತಾರೆ. ಯಾವುದೇ ವಿಚಾರದಲ್ಲಿ ಮುಕ್ತವಾಗಿ ಮಾತನಾಡಿದ್ದಾರೆ. ನಾಲ್ಕು ಗೋಡೆಯ ನಡುವೆ ಬುದ್ಧಿ ಹೇಳಿದರೇ ಹೊರತು ಸಾರ್ವಜನಿಕವಾಗಿ ಹೇಳಲಿಲ್ಲ. ಸಿದ್ದರಾಮಯ್ಯ ಅವರು ಮನಸ್ತಾಪ ಮರೆತು ಗೌರವ ಪರಸ್ಪರ ಸಂಬಂಧ ಇಟ್ಟುಕೊಂಡು ಭೇಟಿ ಮಾಡಿದರು. ಸಿದ್ದರಾಮಯ್ಯ, ಬಿ.ಎಸ್.ಯಡಿಯೂರಪ್ಪ, ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಹಲವರು ನೆಲದಿಂದ ಎದ್ದು ಬಂದವರು. ಸ್ವಂತ ಬಲದಿಂದ ರಾಜಕಾರಣದಲ್ಲಿ ಶಕ್ತಿ ಪಡೆದುಕೊಂಡವರು. ಅದೇ ರೀತಿಯಲ್ಲಿ ಶ್ರೀನಿವಾಸಪ್ರಸಾದ್ ಅವರು ಸ್ವಂತ ಶಕ್ತಿಯ ಮೂಲಕ ರಾಜಕಾರಣದಲ್ಲಿ ಬೆಳೆದವರು. ಸ್ವಚ್ಛ ಕಳಂಕರಹಿತ ರಾಜಕಾರಣ ಮಾಡಿದ್ದಾಗಿ ಗುಣಗಾನ ಮಾಡಿದರು.**

> **“ ಶ್ರೀನಿವಾಸ ಪ್ರಸಾದ ಚಾಮರಾಜನಗರಕ್ಕೆ ದೊಡ್ಡ ಕೊಡುಗೆ ನೀಡಿದ್ದರು. ರಾಜಕಾರಣಿಗಳು ಯಾವ ರೀತಿಯಲ್ಲಿ ಇರಬೇಕು ಎನ್ನುವುದನ್ನು ತೋರಿಸಿಕೊಟ್ಟರು. ಮತ್ತಷ್ಟು ವರ್ಷಗಳ ಕಾಲ ಅವರ ಅನುಭವ, ಮಾರ್ಗದರ್ಶನ ದೊರೆಯಬೇಕಿತ್ತು. ಅವರ ಅಕಾಲಿಕ ನಿಧನ ದೊಡ್ಡ ನಷ್ಟವಾಗಿದೆ.**
>
> **- ಎಚ್.ಎಂ.ಗಣೇಶ್ ಪ್ರಸಾದ್** ಶಾಸಕ

> **“ ಚಾರಿತ್ರಿಕ ದಾರಿ ತೋರಿದರು. ಹೇಳಿದಂತೆ ನಡೆದು ಬದುಕಿದರು. ರಾಜಕಾರಣದಲ್ಲಿ ರಾಜೀ ಮಾಡಿಕೊಂಡು ಸಾಗುವುದನ್ನು ನೋಡಿದ್ದೇವೆ. ಆದರೆ ಅಧಿಕಾರಕ್ಕಾಗಿ ಎಂದೂ ಜೋತು ಬೀಳಲಿಲ್ಲ. ಇಂದಿರಾ ಮತ್ತು ಸಂಸ್ಥಾ ಕಾಂಗ್ರೆಸ್ ರಚನೆಯಾದ ಮೇಲೆ ಪಕ್ಷೇತರರಾಗಿ ನಿಂತು ಗಟ್ಟಿಯಾಗಿ ರಾಜಕೀಯ ಮಾಡಿ ಬಲಾಢ್ಯರಾದರು.**
>
> **-ಎ.ಆರ್.ಕೃಷ್ಣಮೂರ್ತಿ** ಶಾಸಕ

ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಮಾತನಾಡಿ, ಸರ್ಕಾರದಿಂದ ಈ ಜಾಗಕ್ಕೆ ಅನುಮೋದನೆ ನೀಡಿರುವ ಕಾರಣ ಟ್ರಸ್ಟ್ ಕಾರ್ಯಕ್ರಮಗಳನ್ನು ನಡೆಸಲು ಅದಕ್ಕೆ ಬೇಕಾದ ಅನುಕೂಲ ಮಾಡಿಕೊಡಬೇಕು. ಒಬ್ಬ ವ್ಯಕ್ತಿ ಯಾವ ರೀತಿ ಬದುಕಿದ್ದರು ಎನ್ನುವುದಕ್ಕೆ ನಿರಂತರವಾಗಿ ಚಟುವಟಿಕೆಗಳು ನಡೆಯುವಂತೆ ಮಾಡಬೇಕು ಎಂದು ಸಲಹೆ ನೀಡಿದರು.

ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಕೆ.ಹರೀಶ್ ಗೌಡ, ಎಂ.ಪಿ.ನರೇಂದ್ರ ಸ್ವಾಮಿ, ದರ್ಶನ್ ಧ್ರುವನಾರಾಯಣ, ಎಚ್.ಎಂ.ಗಣೇಶ್ ಪ್ರಸಾದ್, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮಯ್ಯ, ಪ್ರತಾಪ್ ಸಿಂಹ, ಕರ್ನಾಟಕ ರಾಜ್ಯ ಆಹಾರ ಉಗ್ರಾಣ ನಿಗಮದ ಅಧ್ಯಕ್ಷ ಎಸ್.ಜಯಣ್ಣ, ಭಾಗ್ಯಲಕ್ಷ್ಮೀ, ಸಹೋದರ ವಿ.ರಾಮಸ್ವಾಮಿ, ವಿ.ಶ್ರೀನಿವಾಸ ಪ್ರಸಾದ ಪುತ್ರಿಯರಾದ ಪೂರ್ಣಿಮಾ ಪ್ರಸಾದ್, ಪೂನಂ ಪ್ರಸಾದ್, ಪ್ರತಿಮಾ ಪ್ರಸಾದ್, ಅಳಿಯಂದರರಾದ ದೇವರಾಜ್, ಬಿ.ಹರ್ಷವರ್ಧನ್, ಡಾ.ಮೋಹನ್, ಮಾಜಿ ಶಾಸಕ ಡಾ.ಯತೀಂದ್ರ ಸಿದ್ಧರಾಮಯ್ಯ, ಮುಡಾ ಅಧ್ಯಕ್ಷ ಕೆ.ಮರೀಗೌಡ ಇನ್ನಿತರರು ಹಾಜರಿದ್ದರು.

## ಡೆಂಗ್ಯೂ ಮುಕ್ತವಾಗಿಸಲು ಸಹಕಾರ ಅಗತ್ಯ

**ಕೆ.ಆರ್.ನಗರ:** ಕಳೆದ ಎಂಟು ವರ್ಷಗಳಿಂದ ಮೈಸೂರು ಜಿಲ್ಲೆ ಮಲೇರಿಯಾ ಮುಕ್ತವಾಗಿದ್ದು ಅದರಂತೆ ಡೆಂಗ್ಯೂ ಮುಕ್ತವನ್ನಾಗಿಸಲು ಸಾರ್ವಜನಿಕರು ಸಹಕಾರ ನೀಡಬೇಕು ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ಡಿ.ನಟರಾಜು ಹೇಳಿದರು. ಪಟ್ಟಣದ ಸಾರಿಗೆ ನಗರದಲ್ಲಿರುವ ಶ್ರೀ ಯಡತೊರೆ ವಿದ್ಯಾ ಸಂಸ್ಥೆಯ ಬಿಇಡಿ ಕಾಲೇಜಿನಲ್ಲಿ ನಡೆದ ವಿಶ್ವ ಮಲೇರಿಯಾ ದಿನಾಚರಣೆ ಮತ್ತು ಮಾನವನ ಆರೋಗ್ಯದ ಮೇಲೆ ತಾಪಮಾನದ ಪರಿಣಾಮ ಕುರಿತು ಉಪನ್ಯಾಸ ನೀಡಿದ ಅವರು ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಂಡು ಸೊಳ್ಳೆ ನಿಯಂತ್ರಣ ಮಾಡಿದರೆ ರೋಗದಿಂದ ದೂರವಿರಬಹುದು ಎಂದರು. ಈಗ ಮಾನ್ಸೂನ್ ಆರಂಭವಾಗಿದ್ದು ಮನೆಗಳ ಸುತ್ತ ಅನಗತ್ಯವಾಗಿ ನೀರು ನಿಲ್ಲುವುದನ್ನು ತಡೆಗಟ್ಟಬೇಕೆಂದು ಸಲಹೆ ನೀಡಿದ ಅವರು ಸರ್ವರೋಗಕ್ಕೂ ಸೊಳ್ಳೆಗಳೇ ಮೂಲವಾಗಿದ್ದು ಅವುಗಳ ನಿರ್ಮೂಲನೆಗೆ ಇರುವ ಎಲ್ಲಾ ಮಾರ್ಗಗಳನ್ನು ಜನರು ಅನುಸರಿಸಿ ಆರೋಗ್ಯವಂತರಾಗಿ ಇರಬೇಕು ಎಂದು ತಿಳಿಸಿದರು. ದಿನದಿಂದ ದಿನಕ್ಕೆ ಜಾಗತಿಕ ತಾಪಮಾನ ಹೆಚ್ಚಾಗುತ್ತಿದ್ದು ಇದರಿಂದಲೂ ಸಹ ಮನುಷ್ಯನಿಗೆ ಹಲವು ಕಾಯಿಲೆಗಳು ಬರುವ ಸಾಧ್ಯತೆ ಇರುವುದರಿಂದ ಎಲ್ಲರೂ ಪರಿಸರ ಸಂರಕ್ಷಣೆ ಮಾಡುವುದರ ಜತೆಗೆ ತಾಪಮಾನದಿಂದ ರಕ್ಷಣೆ ಮಾಡಿಕೊಳ್ಳಲು ಎಲ್ಲರೂ ವೈದ್ಯರು ನೀಡುವ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಿ ಅವುಗಳನ್ನು ಪಾಲಿಸಬೇಕೆಂದು ಕಿವಿ ಮಾತು ಹೇಳಿದರು. ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಸಿ.ಎಂ.ರೇಖಾ, ಉಪಪ್ರಾಂಶುಪಾಲೆ ಜಯರತ್ನ, ಉಪನ್ಯಾಸ ಮಹದೇವ್, ವ್ಯವಸ್ಥಾಪಕ ಲೋಕೇಶ್‌ಭರಣಿ ಮಾತನಾಡಿ ರೋಗ ನಿರ್ಮೂಲನೆ ಮತ್ತು ಆರೋಗ್ಯ ಪಾಲನೆಯ ಬಗ್ಗೆ ಪ್ರಶಿಕ್ಷಣಾರ್ಥಿಗಳಿಗೆ ಸಲಹೆಗಳನ್ನು ನೀಡಿದರು. ತಾಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಹೆಚ್.ಜೆ.ಮಹೇಶ್, ಕ್ಷೇತ್ರ ಕಾರ್ಯಕ್ರಮ ವ್ಯವಸ್ಥಾಪಕಿ ಬೇಬಿರೇಖಾ, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಮಹೇಶ್, ಭರತ್, ಆರೋಗ್ಯ ಸಂರಕ್ಷಣಾಧಿಕಾರಿಗಳಾದ ಪಾರ್ವತಿ, ಸುಮಲತಾ, ಉಪನ್ಯಾಸಕರಾದ ಮಹೇಶ್ವರಿಸ್ವಾಮಿ, ಮೋಹನ್‌ಕುಮಾರಿ ಮತ್ತು ಪ್ರಶಿಕ್ಷಣಾರ್ಥಿಗಳು ಇದ್ದರು.

## ಶೇಕಡಾ 100 ಫಲಿತಾಂಶ

**ಹುಳಿಯಾರು:** ತುಮಕೂರು ವಿಶ್ವವಿದ್ಯಾಲಯವು ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ನಡೆಸಿದ 2023-24 ನೆಯ ಸಾಲಿನ ಬಿ.ಎ. ಮೂರನೆಯ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಹುಳಿಯಾರಿನ ಬಿ.ಎಂ.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಉತ್ತಮ ಫಲಿತಾಂಶ ಬಂದಿರುತ್ತದೆ. ಐಚ್ಛಿಕ ಕನ್ನಡ, ಇತಿಹಾಸ, ರಾಜ್ಯಶಾಸ್ತ್ರ, ಉರ್ದುಭಾಷೆ ಹಾಗೂ ರೋವರ್ಸ್ ಮತ್ತು ರೇಂಜರ್ಸ್ ವಿಷಯಗಳಲ್ಲಿ ಶೇ.100 ಫಲಿತಾಂಶ ಬಂದಿದ್ದು, ಉಳಿದಂತೆ ಭಾರತ ಮತ್ತು ಭಾರತದ ಸಂವಿಧಾನ ಶೇ.98.18, ಕೃತಕ ಬುದ್ಧಿಮತ್ತೆ ಶೇ.96.42, ಅರ್ಥಶಾಸ್ತ್ರ ಶೇ.95.65, ಕನ್ನಡ ಭಾಷೆ ಶೇ.93.88, ಐಚ್ಛಿಕ ಇಂಗ್ಲಿಷ್ ಶೇ.87.50 ಹಾಗೂ ಇಂಗ್ಲಿಷ್ ಭಾಷೆ ಶೇ.66.07 ಫಲಿತಾಂಶ ಬಂದಿರುತ್ತದೆ. ಪರೀಕ್ಷೆಗೆ ಹಾಜರಾದ ಒಟ್ಟು 55 ವಿದ್ಯಾರ್ಥಿಗಳಲ್ಲಿ 34 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಒಟ್ಟಾರೆ ಶೇ.61.82 ಫಲಿತಾಂಶ ಬಂದಿರುತ್ತದೆ. ದರ್ಶನ್ ಎನ್. ಶೇ.85.5 ಅಂಕ ಪಡೆದು ಅತ್ಯುನ್ನತ ದರ್ಜೆಯೊಂದಿಗೆ ಪ್ರಥಮ ಸ್ಥಾನ ಪಡೆದಿರುತ್ತಾರೆ. ಮನೋಜ್ ಎಂ.ಪಿ. ಶೇ.84.75 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಮತ್ತು ಮಹಮ್ಮದ್ ಸಮೀರ್ ಶೇ.84.13 ಅಂಕಗಳೊಂದಿಗೆ ತೃತೀಯ ಸ್ಥಾನವನ್ನು ಪಡೆದಿರುತ್ತಾರೆ. ಉತ್ತೀರ್ಣರಾದ ಉಳಿದ ಎಲ್ಲಾ 33 ವಿದ್ಯಾರ್ಥಿಗಳೂ ಪ್ರಥಮ ದರ್ಜೆಯನ್ನು ಪಡೆದಿರುತ್ತಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಕಾಲೇಜು ಅಭಿವೃದ್ಧಿ ಸಮಿತಿ, ಪ್ರಾಂಶುಪಾಲರು ಹಾಗೂ ಬೋಧಕ-ಬೋಧಕೇತರ ವರ್ಗದವರು ಹರ್ಷ ವ್ಯಕ್ತಪಡಿಸಿರುತ್ತಾರೆ.

## ಎನ್‌ಸಿಸಿ ಶಿಬಿರ ಕಮಾಂಡರ್ ಅರುಣ್ ಕುಮಾರ್ ಭೇಟಿ

ಕೋಲಾರ: ತಾಲೂಕಿನ ಗಾಜಲದಿನ್ನೆಯ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ ಮೇ 5 ರಿಂದ 15 ರವರೆಗೆ ಹತ್ತು ದಿನಗಳ ಕಾಲ ನಡೆಯುತ್ತೀರುವ ಎನ್.ಸಿ.ಸಿ ವಿಧ್ಯಾರ್ಥಿಗಳ ತರಬೇತಿ ಶಿಬಿರದ ವೀಕ್ಷಣೆಗೆ ಶನಿವಾರ ಸಂಸ್ಥೆಯ ಕರ್ನಾಟಕ ಮತ್ತು ಗೋವಾ ರಾಜ್ಯಗಳ ಉಸ್ತುವಾರಿ ಕಮಾಂಡರ್ ವಿ.ಎಸ್ ಅರುಣ್ ಕುಮಾರ್ ಭೇಟಿ ನೀಡಿ ವೀಕ್ಷಣೆ ಮಾಡಿದರು. ಕೋಲಾರ ಜಿಲ್ಲೆಯಾದ್ಯಂತ ವಿವಿಧ ಶಾಲಾ ಕಾಲೇಜುಗಳಿಂದ ಸುಮಾರು 547 ವಿಧ್ಯಾರ್ಥಿಗಳು ಹಾಗೂ 20 ಅಧಿಕಾರಿಗಳು ಸೇರಿದಂತೆ 6 ಜನ ಸಿಬ್ಬಂದಿ ಈ ಶಿಬಿರದಲ್ಲಿ ಭಾಗವಹಿಸಿದ್ದಾರೆ . ಈ ಸಂದರ್ಭದಲ್ಲಿ ಕರ್ನಲ್ ವಿವೇಕ್ ಶುಕ್ಲಾ, ಅರವಿಂದ ಮಿಶ್ರಾ, ಜಿಲ್ಲಾ ಉಸ್ತುವಾರಿ ಪ್ರಭು ಕುಮಾರ್, ಕ್ಯಾಪ್ಟನ್ ಬಾಲಾಜಿ, ಹರ್ಷಿತ್ ಗಾಂಧಿ ಮುಂತಾದವರು ಭಾಗವಹಿಸಿದ್ದರು.



## ಹೆಣ್ಣು ಭ್ರೂಣ ಹತ್ಯೆ: ಇಬ್ಬರ ಸೆರೆ

**ಪಾಂಡವಪುರ:** ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಸಂಬಂಧ ಮತ್ತಿಬ್ಬರು ಆರೋಪಿಗಳನ್ನು ಪಾಂಡವಪುರ ಪೊಲೀಸರು ಬಂಧಿಸಿದ್ದು, ಈವರೆಗೆ ಬಂಧಿತರ 8ಕ್ಕೆ ಏರಿದಂತಾಗಿದೆ. ತಾಲೂಕಿನ ಮಹದೇಶ್ವರಪುರ ಗ್ರಾಮದ ಕಿರಣ್ ಹಾಗೂ ಹೊಸಕೋಟೆ ಗ್ರಾಮದ ಎಚ್.ಪಿ.ಅಖಿಲಾಶ್ ಹೆಣ್ಣು ಭ್ರೂಣಹತ್ಯೆ ಪ್ರಕರಣದಲ್ಲಿ ಭಾಗಿಯಾಗಿ ಬಂಧಿತರಾಗಿರುವ ಆರೋಪಿಗಳು. ಹೆಣ್ಣು ಭ್ರೂಣ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪಾಂಡವಪುರ ಪೊಲೀಸ್ ಇನ್ಸ್‌ಪೆಕ್ಟರ್ ಕುಮಾರ್, ಸಬ್‌ಇನ್ಸ್‌ಪೆಕ್ಟರ್ ಉಮೇಶ್ ಇದುವರೆಗೂ ಒಟ್ಟು ಎಂಟು ಮಂದಿ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಬಳಿಕ ಬಂಧಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

# ಮಾನವ ಮಂಟಪದಲ್ಲಿ ಸತಿಪತಿಗಳಾದ ಜೋಡಿ




**ಮೈಸೂರು:** ಮೈಸೂರು ವಿವಿ ರಾಜ್ಯಶಾಸ್ತ್ರ ವಿಭಾಗದ ಅತಿಥಿ ಉಪನ್ಯಾಸಕಿ ಬಿ.ರಮ್ಯಾ, ಆರ್.ರಘು ಮಾನವ ಮಂಟಪದ ಆಶ್ರಯದಲ್ಲಿ ಗೋಕುಲಂನ ಶ್ಯಾಗಲೆ ಹೌಸ್‌ನಲ್ಲಿ ಮಂತ್ರ ಮಾಂಗಲ್ಯ ಮದುವೆಯಾದರು. ಚಿತ್ರದುರ್ಗದ, ಭೋವಿ ಜನಾಂಗದ ರಮ್ಯಾ ಹಾಗೂ ಮೈಸೂರು ತಾಲೂಕಿನ ನಾಗನಹಳ್ಳಿಯ ದಲಿತ ಸಮಾಜಕ್ಕೆ ಸೇರಿದ ರಘು ಎಂ.ಎ ಓದುವ ವೇಳೆಯಿಂದ ಪ್ರೀತಿಸುತ್ತಿದ್ದರು. ಬಸವ ಜಯಂತಿಯಂದು ಮದುವೆಯಾದ ಅವರಿಗೆ ಮುಖಂಡ ಉಗ್ರನರಸಿಂಹೇಗೌಡ ವಿವಾಹ ಸಂಹಿತೆ ಬೋಧಿಸಿದರು. ಸಾಲ ಮಾಡಿ ಮದುವೆ ಮಾಡಿದವರು ಕೆಟ್ಟು ಹೋಗುತ್ತಾರೆ. ಇದಕ್ಕಾಗಿ ಆರೋಗ್ಯಕರ ಸಮಾಜಕ್ಕೆ ಪ್ರೇಮ ವಿವಾಹಗಳು, ಅಂತರ್ಜಾತಿ ಮದುವೆಗಳು ಹೆಚ್ಚಾಗಬೇಕು ಎಂದು ಆಶಿಸಿದರು. ಕುವೆಂಪು ಅವರ ಮಂತ್ರ ಮಾಂಗಲ್ಯ ಮದುವೆಯ ಪ್ರಮಾಣವಚನ ಬೋಧಿಸಿದ ಮಾನವ ಮಂಟಪದ ಸಂಚಾಲಕ ಕಾಳಚನ್ನೇಗೌಡ, ಅಂತರ್ಜಾತಿ ಮದುವೆಗಳನ್ನು ಜನರು ಒಪ್ಪಿಕೊಳ್ಳುತ್ತಿದ್ದಾರೆ. ಈಗ ಹಿಂದೆ ಇದ್ದಷ್ಟು ವಿರೋಧವಿಲ್ಲ. ಸುತ್ತೂರು, ಧರ್ಮಸ್ಥಳ, ಆದಿಚುಂಚನಗಿರಿ ಮಠಗಳಲ್ಲಿ ಸರಳ ಮದುವೆಗಳಾಗುತ್ತಿವೆ. ಸರಳವಾಗಿ ಮದುವೆಯಾದರೆ ಜನರು ಹೀಯಾಳಿಸುತ್ತಾರೆ ಎಂಬ ಯೋಚನೆ ಬಿಡಬೇಕು ಎಂದು ಸಲಹೆ ನೀಡಿದರು. ಲೇಖಕ ಮುಜಾಫರ್ ಅಸ್ಸಾದಿ, ಕವಯಿತ್ರಿ ಲತಾ ಮೈಸೂರು, ಲೇಖಕ ಹೊರೆಯಾಲ ದೊರೆಸ್ವಾಮಿ, ನಿವೃತ್ತ ಕನ್ನಡ ಪ್ರಾಧ್ಯಾಪಕ ಭೂಮಿಗೌಡ, ಧನಂಜಯ ಎಲಿಯೂರು ಮಾತನಾಡಿದರು. ರಮ್ಯಾ ತಾಯಿ ಶಾಂತಕುಮಾರಿ, ತಂದೆ ಭುವನೇಶ್ ಹಾಗೂ ರಘು ತಾಯಿ ಭಾಗ್ಯಾ ಇದ್ದರು.

## ಎಸ್‌ಡಿಎಂನಲ್ಲಿ ನೆಟ್, ಕೆ-ಸೆಟ್ ತರಬೇತಿ

**ಮೈಸೂರು:** ನಗರದ ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಕಾಲೇಜಿನ ಸ್ನಾತಕೋತ್ತರ ವಿಭಾಗದಿಂದ ಯುಜಿಸಿ ನೆಟ್ ಮತ್ತು ಕೆ-ಸೆಟ್ ಪರೀಕ್ಷೆಗಳ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾಲೇಜಿನ ಪ್ರಾಂಶುಪಾಲ ಪ್ರೊ.ಸಾಯಿನಾಥ್ ಮಲ್ಲಿಗೆಮಡು ಕಾರ್ಯಕ್ರಮ ಉದ್ಘಾಟಿಸಿ, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ನೆಟ್ ಮತ್ತು ಕೆ-ಸೆಟ್ ಪರೀಕ್ಷೆಗಳ ಮಹತ್ವ ತಿಳಿಸಿಕೊಟ್ಟರು. ಮಾತ್ರವಲ್ಲದೇ ನಾಲ್ಕನೇ ಸೆಮಿಸ್ಟರ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿನಿ ಕೆ-ಸೆಟ್ ಪರೀಕ್ಷೆಯಲ್ಲಿ ಪಾಸ್ ಆಗಿರುವುದು ಈ ಕಾರ್ಯಕ್ರಮದ ಫಲಿತಾಂಶವೆಂದು ತಿಳಿಸಿ, ಶುಭ ಕೋರಿದರು. ಸಂಪನ್ಮೂಲ ವ್ಯಕ್ತಿಯಾಗಿ ಭಾರತಿನಗರದ, ಕೆ.ಎಂ.ದೊಡ್ಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ, ಸಹಾಯಕ ಪ್ರಾಧ್ಯಾಪಕ ಡಾ.ಪಾರ್ಥ.ಟಿ, ಪರೀಕ್ಷೆಯ ಸ್ವರೂಪ, ವಿಷಯವಾರು ಪ್ರಶ್ನೆಗಳು, ಪತ್ರಿಕೆ 1 ಮತ್ತು ಪತ್ರಿಕೆ 2ರಲ್ಲಿನ ಪ್ರಮುಖ ಅಂಶಗಳ ಬಗ್ಗೆ ವಿಸ್ತೃತವಾಗಿ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. 58 ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಕಾಲೇಜಿನ ಐಕ್ಯೂಎಸಿ ಸಂಚಾಲಕಿ ಪ್ರೊ.ಕೆ.ಎಸ್. ಸುಕೃತ, ಕಾರ್ಯಕ್ರಮ ಆಯೋಜಕ ಡಾ.ಎನ್.ದಿಲೀಪ್, ಸ್ನಾತಕೋತ್ತರ ವಿಭಾಗದ ಮುಖ್ಯಸ್ಥೆ ಡಾ.ದೇವಕಿ, ಸಹಾಯಕ ಪ್ರಾಧ್ಯಾಪಕಿ ಸೌಮ್ಯ ಮತ್ತು ವಿದ್ಯಾರ್ಥಿನಿಯರು ಹಾಜರಿದ್ದರು.



## ವಚನಗಳ ಮೂಲಕ ಸಮಾಜ ತಿದ್ದಿದ ವಿಶ್ವಗುರು




**ಪಿರಿಯಾಪಟ್ಟಣ:** ಆಡು ಭಾಷೆ, ವಚನಗಳ ಮೂಲಕ ಸಮಾಜದ ಬದಲಾವಣೆಗೆ ಶ್ರಮಿಸಿದ ಮಹಾನ್ ಸಂತರು ಬಸವಣ್ಣ ಅವರಾಗಿದ್ದರು ಎಂದು ಪಿರಿಯಾಪಟ್ಟಣ ಸಾರಿಗೆ ಘಟಕ ವ್ಯವಸ್ಥಾಪಕ ದರ್ಶನ ರಾಮಚಂದ್ ತಿಳಿಸಿದರು.

ಪಟ್ಟಣದ ಸಾರಿಗೆ ಘಟಕದಲ್ಲಿ ಬಸವ ಬಳಗ ನೇತೃತ್ವದಲ್ಲಿ ನಡೆದ ವಿಶ್ವಗುರು ಶ್ರೀ ಬಸವಣ್ಣನವರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು, ಸಮಾಜದಲ್ಲಿ ಆಚರಣೆಯಲ್ಲಿದ್ದ ಸಾಮಾಜಿಕ ಪಿಡುಗುಗಳನ್ನು ತಮ್ಮ ವಚನಗಳ ಮೂಲಕ ಆಡು ಭಾಷೆಯಲ್ಲಿ ಜನರಿಗೆ ಮನದಟ್ಟಾಗುವಂತೆ ತಿಳಿಸಿ ಸಮಾಜದ ಬದಲಾವಣೆಗೆ ಶ್ರಮಿಸಿದ ಮಹಾನ್ ಸಂತರು ಬಸವಣ್ಣನವರು ಎಂದರು.

ಚಾಲಕ ರವಿಶಂಕರ್ ಗುರೂಜಿ ಅವರು ಮಾತನಾಡಿ ಕುಲ ಕುಲ ಎಂದು ಹೊಡೆದಾಡದೆ ನಾವೆಲ್ಲರೂ ಮನುಜರು ಕಾಯಕದ ಮೂಲಕ ದೇವರನ್ನು ಕಾಣೋಣ ಎಂಬ ಸಂದೇಶ ನೀಡಿದ ವಿಶ್ವಗುರು ಬಸವಣನವರು ಎಂದರು.

ಈ ವೇಳೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜೆ ಸಹ ಜರುಗಿ ಅನ್ನಸಂತರ್ಪಣೆ ಮಾಡಲಾಯಿತು, ಈ ಸಂದರ್ಭ ಸಹಾಯಕ ಸಂಚಾರ ಅಧೀಕ್ಷಕರಾದ ಪ್ರಕಾಶ್, ಲೆಕ್ಕ ಪತ್ರ ಮೇಲ್ವಿಚಾರಕಿ ಭಾಗ್ಯಲಕ್ಷ್ಮಿ, ಸಹಾಯಕ ಸಂಚಾರ ನಿರೀಕ್ಷಕ ಸುರೇಶ್, ಪಾರು ಪತ್ತೆಗಾರ ಪ್ರಕಾಶ್, ಸಂಚಾರ ನಿಯಂತ್ರಕ ಮಂಜುನಾಥ್, ಭದ್ರತಾ ಶಾಖೆಯ ನಂದೀಶ್ ಸೇರಿದಂತೆ ಚಾಲಕ ನಿರ್ವಾಹಕ ತಾಂತ್ರಿಕ ಹಾಗೂ ಕಚೇರಿ ಸಿಬ್ಬಂದಿ ಇದ್ದರು.

## ಮಕ್ಕಳಿಗೆ ಆಸ್ತಿಗಿಂತ ಸಂಸ್ಕಾರ ಅಗತ್ಯ

**ಮೈಸೂರು:** ಮಕ್ಕಳಿಗೆ ಆಸ್ತಿ ಮಾಡುವುದರ ಬದಲು ಮಕ್ಕಳನ್ನು ವಿದ್ಯಾವಂತರನ್ನಾಗಿ, ಸಂಸ್ಕಾರವಂತರನ್ನಾಗಿ ಮಾಡಿದರೆ ಅದುವೇ ದೊಡ್ಡ ಆಸ್ತಿ ಎಂದು ಶ್ರೀ ಕೃಷ್ಣ ಟ್ರಸ್ಟ್ ಉಪಾಧ್ಯಕ್ಷ ರವಿಶಾಸ್ತ್ರಿ ಹೇಳಿದರು. ನಗರದ ಟಿ.ಕೆ.ಲೇಔಟ್‌ನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಶ್ರೀ ಕೃಷ್ಣ ಮಿತ್ರ ಮಂಡಳಿ, ಶ್ರೀ ಕೃಷ್ಣ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 15 ದಿನಗಳ ಉಚಿತ ಸಂಸ್ಕಾರ ವಾಹಿನಿ ಶಿಬಿರದಲ್ಲಿ ಮಾತನಾಡಿದ ಅವರು, ಜೀವನದಲ್ಲಿ ಧಾರ್ಮಿಕ ಚಿಂತನೆ ಅಗತ್ಯ. ಬಾಲ್ಯದಿಂದಲೇ ದೇವರ ಬಗ್ಗೆ ನಂಬಿಕೆ, ನಮ್ಮ ಸಂಸ್ಕೃತಿ, ಆಚಾರ ವಿಚಾರಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು. ರಜಾ ದಿನಗಳಲ್ಲಿ ಮಕ್ಕಳು ಮೊಬೈಲ್, ಟಿ.ವಿಯಲ್ಲಿ ಕಳೆದು ಹೋಗುತ್ತಿದ್ದಾರೆ. ಹಾಗಾಗಿ ಮಕ್ಕಳಲ್ಲಿ ಭಾರತೀಯ ಸಂಸ್ಕೃತಿ, ಸಂಸ್ಕಾರದ ಬೀಜ ಬಿತ್ತಿ, ದೇಶದ ಸುಸಂಸ್ಕೃತ ಪ್ರಜೆಗಳನ್ನಾಗಿಸುವ ಉದ್ದೇಶದಿಂದ ಶಿಬಿರ ಆಯೋಜಿಸಿದ್ದೇವೆ ಎಂದರು. ಕಾರ್ಯಕ್ರಮದಲ್ಲಿ ವಿದ್ವಾನ್ ಡಾ.ಆನಂದ ತೀರ್ಥನಾಗ ಸಂಪಿಗೆ ಆಚಾರ್ಯ, ಪಿ.ಎಸ್.ಶೇಖರ್, ಕಾರ್ಯದರ್ಶಿ ಕೆ.ವಿ.ಶ್ರೀಧರ್, ಶ್ರೀ ಕೃಷ್ಣ ಮಿತ್ರ ಮಂಡಳಿಯ ಅಧ್ಯಕ್ಷ ಪ್ರವೀಣ್, ಖಜಾಂಜಿ ಶ್ರೀವತ್ಸ, ಮಂಗಳ ಅಭ್ಯಂಕರ್, ಸುಧಾ, ರಮಾದೇವಿ, ಸಂಸ್ಕೃತ ಶಿಕ್ಷಕರಾದ ವಿದ್ವಾನ್ ಶ್ರೀಕಾಂತ್ ಆಚಾರ್ಯ, ವಿದ್ವಾನ್ ಮುಕುಂದಾಚಾರ್ಯ, ಮನ್ಯು ಆಚಾರ್ಯ, ಅಕ್ಷಯ ಆಚಾರ್ಯ, ಸುರೇಖಾಚಾರ್ಯ ಸೇರಿದಂತೆ ಹಲವರು ಇದ್ದರು.



## ಬಸವಣ್ಣನವರ ವಚನಗಳಲ್ಲಿ ಮಾನವೀಯ ಮೌಲ್ಯಗಳಿವೆ

**ಅಥಣಿ :** 12ನೇ ಶತಮಾನದಲ್ಲಿ ಇದ್ದ ಜಾತಿ ಪದ್ಧತಿ, ಲಿಂಗ ಅಸಮಾನತೆ, ಅಸ್ಪೃಶ್ಯತೆಯನ್ನು ಹೋಗಲಾಡಿಸಲೆಂದೇ ಧರೆಗೆ ಬಂದ ಮಹಾ ಮಾನವತಾವಾದಿ ವಿಶ್ವಗುರು ಬಸವಣ್ಣನವರು ಒಬ್ಬ ವ್ಯಕ್ತಿಯಲ್ಲ. ಅವರು ಮನುಕುಲದ ಶಕ್ತಿ ಎಂಬಂತೆ ವಿಶ್ವ ಕಂಡ ಅತ್ಯಂತ ಶ್ರೇಷ್ಠ ಸಮಾಜ ಸುಧಾರಕರು ಎಂದ ಮಾಜಿ ಶಾಸಕ ಶಹಾಜಹಾನ ಡೊಂಗರಗಾಂವ ಹೇಳಿದರು.

ಪಟ್ಟಣದಲ್ಲಿ ಜಗಜ್ಯೋತಿ ಬಸವೇಶ್ವರರ ಜಯಂತ್ಯುತ್ಸವ ಅಂಗವಾಗಿ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡುತ್ತಿದ್ದರು ಜಾತ್ಯತೀತ, ಸಾಮರಸ್ಯತೆ, ಕಾಯಕ ನಿಷ್ಠೆಯನ್ನ ಜನತೆಯ ಜೀವನದಲ್ಲಿ ಬಿತ್ತಿ ಬದುಕನ್ನು ಸುಂದರಗೊಳಿಸಿದ್ದಾರೆ. ಬಸವಣ್ಣನವರು ಕಾಯಕದ ಮಹತ್ವ ಸಾರಿದರು. ಕೆಲಸಕ್ಕೆ ಯಾವುದೇ ಜಾತಿಯಿಲ್ಲ, ಕುಲವಿಲ್ಲ. ಸಮಾಜದಲ್ಲಿ ಎಲ್ಲರೂ ಸಮಾನರೇ. ವಿಶ್ವದಲ್ಲಿ ಇರುವುದು ಗಂಡು ಮತ್ತು ಹೆಣ್ಣು ವರ್ಗ?ಮಾತ್ರ. ಮಾನವರೆಲ್ಲಾ ಒಂದೇ ಎಂದು ಸಾರಿದ ಬಸವಣ್ಣ ಮಹಾನ್ ಮಾನವಾತವಾದಿ. ಬಸವಣ್ಣನವರು ಇಡೀ ವಿಶ್ವಕ್ಕೆ ಸಮಾನತೆಯ ಸಂದೇಶ ಸಾರಿದ ಮಾನವತಾವಾದಿ. ಅವರು 12ನೇ ಶತಮಾನದಲ್ಲೇ ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು. ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನ ಮಾಡಿದರು. ಅವರ ತತ್ವ ಸಿದ್ಧಾಂತ ಸಾರ್ವಕಾಲಿಕ. ಅವರ?ವಚನಗಳು ಇಂದಿಗೂ ಪ್ರಸ್ತುತ' ಎಂದರು. ಸಮಾನತೆಯ ಹರಿಕಾರ ವಿಶ್ವಗುರು ಬಸವಣ್ಣನವರು ಮಾನವೀಯ ಮೌಲ್ಯಗಳ ಮೇರು ಪರ್ವತ ಇದ್ದಂತೆ ಬಸವಣ್ಣನವರ ಆಶಯದಂತೆ ಇವನಾರವ ಇವನಾರವ ಎಂದೆನಿಸದೇ, ಇವನಮ್ಮವ ಎಂದೆನಿಸಯ್ಯ ಎಂಬ ನುಡಿಯಂತೆ ಸರ್ವರೂ ಸಮವಾಗಿ ಬಾಳಿದಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ. ಸಮಾಜದಲ್ಲಿ ಶಾಂತಿ, ಸಹೋದರತೆ ಬೆಳೆಯುತ್ತದೆ ಎಂದರು.

## ಜಗಜ್ಯೋತಿ ಬಸವಣ್ಣನವರ ಅದ್ದೂರಿ ಮೆರವಣಿಗೆ

**ವಿಜಯಪುರ:** ನಗರ್ತ ಯುವಕ ಸಂಘವು ಸುಮಾರು 25 ವರ್ಷಗಳಿಂದ ಯಶಸ್ವಿಯಾಗಿ ಬಸವ ಜಯಂತಿ ಕಾರ್ಯಕ್ರಮವನ್ನು ಆಚರಿಸಿಕೊಂಡು ಬರುತ್ತಿದೆ ಎಂದು ಅ.ಶಿ.ವೈ ನಗರ್ತ ಯುವಕ ಸಂಘದ ಕಾರ್ಯಧ್ಯಕ್ಷರಾದ ಜೆ ಆರ್ ಪಿ ಮುರುಳೀಧರ್ ತಿಳಿಸಿದರು. ಪಟ್ಟಣದಲ್ಲಿರುವ ಗಾಂಧಿ ಚೌಕದಲ್ಲಿ ಅಯೋಧ್ಯಾನಗರ ಶಿವಾಚಾರ್ಯ ವೈಶ್ಯ ನಗರ್ತ ಯುವಕ ಸಂಘ ಮತ್ತು ಶ್ರೀ ನಗರೇಶ್ವರ ಸ್ವಾಮಿ ಸೇವಾ ಟ್ರಸ್ಟ್ ಮತ್ತು ರಾಷ್ಟ್ರೀಯ ಬಸವದಳ ಸಂಯುಕ್ತ ಆಶ್ರಯದಲ್ಲಿ ಕ್ರಾಂತಿಯೋಗಿ ವಿಶ್ವಗುರು ಬಸವಣ್ಣನವರ 891ನೆಯ ಜಯಂತಿಯ ಅಂಗವಾಗಿ ಸಂಜೆ ಜಗಜ್ಯೋತಿ ಬಸವಣ್ಣನವರ ಪಂಚಲೋಹ ಮೂರ್ತಿಯನ್ನು ಆನೇಕಲ್ ನಗರದ ಹಂಸ ರಥದೊಂದಿಗೆ ಕೇರಳದ ಸುಪ್ರಸಿದ್ಧ ಸಾಗರಂ ಕಲಾ ತಂಡ ಸಮಿತಿಯ ಚಂಡೆ ವಾದ್ಯದೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಏರ್ಪಡಿಸಲಾಗಿದ್ದ ಮೆರವಣಿಗೆಯನ್ನು ಉದ್ಘಾಟಿಸಿ, ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಹಂಸ ವಾಹನ ಪಲ್ಲಕ್ಕಿ ಸೇವೆಯನ್ನು ಒದಗಿಸಿದ ಪುರಸಭಾ ಮಾಜಿ ಅಧ್ಯಕ್ಷರು ಹಾಲಿ ಸದಸ್ಯರಾದ ಎಂ. ಸತೀಶ್ ಕುಮಾರ್ ಮತ್ತು ಸಹೋದರರು, ಚೆಂಡೆ ವಾದ್ಯ ಸೇವೆಯನ್ನು ಒದಗಿಸಿದ ಎ ಆರ್ ಸಿ. ನವೀನ್ ಕುಮಾರ್, ಚಿಕ್ಕ ವೀರಣ್ಣ ಮಿಠಾಯಿ ಅಂಗಡಿ ಮಾಲೀಕರಾದ ಸಿ ಸುರೇಶ್, ಹಾಗೂ ಅಜಿತ್ ರವರನ್ನು ಸನ್ಮಾನಿಸಿ ಗೌರವಿಸಲಾಯಿತು. ಬೆಳಗ್ಗೆ ಬಾದಾಮಿ ಹಾಲು ಸೇವೆ, ರಾತ್ರಿ ದಾಸೋಹ ಸೇವೆಯನ್ನು ಲಿಂಗೈಕ್ಯ ಶಾರದಮ್ಮ ಚಿಕ್ಕ ಗುಂಡಪ್ಪ ಸ್ಮರಣಾರ್ಥವಾಗಿ ಆರ್ ರಾಜಣ್ಣ ಮತ್ತು ಸಹೋದರರು ಸೇವೆಯನ್ನು ನಡೆಸಿಕೊಟ್ಟರು. ನಗರ್ತ ಯುವಕ ಸಂಘದ ಅಧ್ಯಕ್ಷರ ಬೇಕರಿ ಮಂಜುನಾಥ್, ಮಹಂತಿನ ಮಠದ ಅಧ್ಯಕ್ಷರಾದ ಪುನೀತ್ ಶಿವಕುಮಾರ್, ಗೌರವ ಕಾರ್ಯದರ್ಶಿಗಳಾದ ವಿ ವಿಶ್ವನಾಥ್, ಬೇಕರಿ ಶಿವಣ್ಣ, ವಿ ಬಸವರಾಜ್ ಮತ್ತು ಅಂಗ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



## ಪತ್ರಿಕ ತರಕರ ಮೊಮ್ಮಗಳು ಅತ್ಯುತ್ತಮ ದರ್ಜೆಯಲ್ಲಿ ಎಸ್ ಎಸ್ ಎಲ್ ಸಿ. ಯಲ್ಲಿ ತೇರ್ಗಡೆ.



ವಿಜಯಪುರ; ಪಟ್ಟಣದ ಮಾಯ ಆಂಗ್ಲ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ದಿವ್ಯ ಮಂಜುನಾಥ್ ರವರ ಪುತ್ರಿ ಎಂ ಧನುಶ್ರೀ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಶೇಕಡ 86(ಎಂಬತ್ತಾರರಷ್ಟು) ಅಂಕ ಪಡೆದು ಅತ್ಯುತ್ತಮ ದರ್ಜೆಯಲ್ಲಿ ಉತ್ತೀರ್ಣರಾಗಿರುವಳು. 557 ಅಂಕ ಪಡೆದ ಎಂ ಧನುಶ್ರೀ ನಂದಗುಡಿಯ ಪತ್ರಿಕಾ ತರಕರಾದ ಜ್ಯೋತಿಶ್ವರಪ್ಪ ರವರ ಮೊಮ್ಮಗಳು ಸಹ ಆಗಿರುತ್ತಾಳೆ.

# ಬಸವಣ್ಣನ ವಿಚಾರಧಾರೆಯಿಂದ ಸಾಮರಸ್ಯ ಸಾಧ್ಯ

**ಬೇಲೂರು:** ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ಜಾತಿ-ಜಾತಿ ಮತ್ತು ಧರ್ಮ-ಧರ್ಮದಲ್ಲಿ ಕೋಮು ಸೌಹಾರ್ದತೆ ಕ್ಷೀಣಿಸುತ್ತಾ ಸಾಮರಸ್ಯದ ಬದುಕು ವಿನಾಶವಾಗುತ್ತಿದೆ. ಈ ನಿಟ್ಟಿನಲ್ಲಿ 12 ನೇ ಶತಮಾನದಲ್ಲಿ ಬಸವಾದಿ ಶರಣರು ನೀಡಿದ ವಿಚಾರಧಾರೆಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಂಡರೆ ಮಾತ್ರ ಸಾಮರಸ್ಯದಿಂದ ಕೂಡಿದ ಸದೃಡ ದೇಶವನ್ನು ಕಟ್ಟಲು ಸಾಧ್ಯವೆಂದು ಬೇಲೂರು ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಹೆಬ್ಬಾಳು ಹಾಲಪ್ಪ ಕರೆ ನೀಡಿದರು.

ಪಟ್ಟಣದ ಅಂಬೇಡ್ಕರ್ ನಗರದ ಬಿ.ಆರ್.ಅಂಬೇಡ್ಕರ್ ಭವನದಲ್ಲಿ ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು ವತಿಯಿಂದ ಹಮ್ಮಿಕೊಂಡ ವಿಶ್ವ ಗುರು ಬಸವಣ್ಣನವರ ಜಯಂತಿ ಮತ್ತು ಕಾಯಕಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜೀವನದಲ್ಲಿ ಬೆಳಕು ಮೂಡಲು ಇವತ್ತು ಬಸವಣ್ಣನವರ ಚಿಂತನೆ, ಸಂದೇಶ, ವಚನಗಳ ಅಧ್ಯಯನ ಅಗತ್ಯ. ಇದರಿಂದ ಜಗತ್ತಿನ ಭವಿಷ್ಯ ಜ್ಞಾನದತ್ತ ಬದಲಾವಣೆ ಆಗಲಿದೆ. ರಾಷ್ಟ್ರವು ಶಕ್ತಿಯುತವಾಗಲಿದೆ. ಬಸವಣ್ಣ ಅವರ ವಚನಗಳ ಜ್ಞಾನ ಭಂಡಾರವನ್ನು ಇಂದು ವಿದೇಶಗಳಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಆದರೆ ನಮ್ಮ ಭಾರತೀಯರು ಅಂತಹ ಸಕಾರಾತ್ಮಕ ಕಾರ್ಯಕ್ಕೆ ಇನ್ನೂ ಆಸಕ್ತಿ ಮೂಡಿಸಿಕೊಂಡಿಲ್ಲ. ಇನ್ನಾದರೂ ಭಾರತೀಯರು ಬುದ್ದ, ಬಸವ ಮತ್ತು ಅಂಬೇಡ್ಕರ್



ವಿಚಾರಧಾರೆಗಳನ್ನು ಅಳವಡಿಸಿಕೊಳ್ಳಬೇಕಿದೆ ಎಂದರು. ವಚನ, ತತ್ತ್ವ ಸಿದ್ಧಾಂತಗಳನ್ನು ಎಲ್ಲರೂ ಓದಿ ಅರ್ಥ ಮಾಡಿಕೊಂಡು, ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಮಾತ್ರ ಅವರಿಗೆ ನಾವು ಗೌರವ ಕೊಟ್ಟಂತಾಗುತ್ತದೆ ಎಂದರು. ಇಂದು ನಡೆದ ಬಸವೇಶ್ವರ ಜಯಂತಿ ಕೇವಲ ಕಾರ್ಯಕ್ರಮವಾಗಿಯೇ ಉಳಿಯಬಾರದು ಎಂಬ ಹಿನ್ನೆಲೆಯಲ್ಲಿ ಪೌರ ಕಾರ್ಮಿಕರಿಗೆ ಕಾಯಕಶ್ರೀ ಪ್ರಶಸ್ತಿ ನೀಡಿ ಗೌರವಿಸಿದ್ದು ನಿಜಕ್ಕೂ ಸಂತೋಷ ತಂದಿದೆ ಎಂದರು.

ಬೇಲೂರು ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು ಗೌರವಾಧ್ಯಕ್ಷ ಹಾಗೂ ಹಿರಿಯ ವಕೀಲ ಸಿ.ಎಂ.ನಿಂಗರಾಜ್ ಮಾತನಾಡಿ, ವಚನ ಮತ್ತು ವಿಚಾರಧಾರೆ ಮೂಲಕ ಕೂಡಿ ಬಾಳುವ ಸಂಸ್ಕೃತಿ ಕಲಿಸಿಕೊಟ್ಟವರು ಬಸವಣ್ಣ. ಇಂದು ಅವರ ಹೆಸರಿನಲ್ಲಿ ಸಮಾಜ ಒಡೆಯುವಂಥ ದುಸ್ಸಾಹಸ ನಡೆಯುತ್ತಿದೆ ಎಂದು ವಿಷಾದಿಸಿದರು. ಪ್ರತಿಯೊಬ್ಬರ ಜೀವನ ಉನ್ನತಿಗಾಗಿ ಬಸವಣ್ಣನವರ ವಚನಗಳ ಅಧ್ಯಯನ ಮಾಡಬೇಕು. ಗುರು ಹಿರಿಯರ ಮಾರ್ಗದರ್ಶನ ಪಾಲನೆ ಮಾಡಬೇಕು. ಕಾಯಕವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು. ಇದರಿಂದಲೇ ಪ್ರತಿಯೊಬ್ಬರ ಬಾಳು ಅಂಧಕಾರದಿಂದ ಬೆಳಕಿನ ಕಡೆಗೆ ಸಾಗಲಿದೆ. ಜತೆಗೆ ಸಕಾರಾತ್ಮಕವಾಗಿ ದೇಶ ಬಲಗೊಳ್ಳಲಿದೆ. ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹೆಬ್ಬಾಳು ಹಾಲಪ್ಪನವರು ಮತ್ತು ಅವರ ತಂಡ ಮುಂದಿನ ದಿನದಂದು ಇನ್ನೂ ಹೆಚ್ಚಿನ ಸಾಮಾಜಿಕಮುಖಿ ಮತ್ತು ಜನಪರ ಕೆಲಸಗಳನ್ನು ನಡೆಸಲಿ ಎಂದು ಹಾರೈಸಿದರು. 12 ನೇ ಶತಮಾನದಲ್ಲಿ ನಡೆದ ಸ್ತ್ರೀ ಸಮಾನತೆ, ವಚನ ಸಾಹಿತ್ಯ, ಸಾಮಾಜಿಕ ಕ್ರಾಂತಿ ಇಡೀ ವಿಶ್ವದಲ್ಲೇ ದಾಖಲೆ ನಿರ್ಮಿಸಿದ ಕಾರಣದಿಂದಲೇ ಬಸವಣ್ಣನವರು ವಿಶ್ವ ಗುರು ಎಂಬ ಖ್ಯಾತಿಗೆ ಪಾತ್ರರಾಗಲು ಸಾಧ್ಯವಾಗಿದೆ.ವಿಶೇಷವಾಗಿ ಸಮಾಜದಲ್ಲಿ ಅಡಗಿದ್ದ ಅನಿಷ್ಟ ಪದ್ಧತಿಯನ್ನು ಹೋಗಲಾಡಿಸಲು ಅವರು ನಡೆಸಿದ ಚಳವಳಿ ನಿಜಕ್ಕೂ ಅಗಮ್ಯವಾಗಿದೆ. ಕನ್ನಡ ಸಾಹಿತ್ಯ ಎಂದಿಗೂ ವಚನ ಸಾಹಿತ್ಯವನ್ನು ಹೊರತುಪಡಿಸಿ ಸಾಹಿತ್ಯ ಊಹಿಸಲು ಸಾಧ್ಯವಿಲ್ಲ ಎಂದು ಬೇಲೂರು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಿ.ಎಲ್.ರಾಜೇಗೌಡ ಹೇಳಿದರು.

ಇದೇ ಸಂದರ್ಭದಲ್ಲಿ ಪುರಸಭಾ ಪೌರ ಕಾರ್ಮಿಕರಾದ ವಿಶ್ವನಾಥ ಮತ್ತು ಆರೋಗ್ಯ ಇಲಾಖೆಯ ಸಹಾಯಕರಾದ ಸರೋಜಮ್ಮ ಇವರಿಗೆ ಬಸವೇಶ್ವರ ಜಯಂತಿ ಅಂಗವಾಗಿ ಕಾಯಕಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಶರಣ ಸಾಹಿತ್ಯ ಪರಿಷತ್ತು ಜಿಲ್ಲಾ ಉಪಾಧ್ಯಕ್ಷ ಬಿ.ಎಲ್.ರಾಜೇಗೌಡ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಶಿರೇಖಾ, ಯುವ ಘಟಕದ ಅಧ್ಯಕ್ಷ ಆರ್.ಎಸ್. ಮಹೇಶ್, ಜಿಲ್ಲಾ ಯುವ ಘಟಕದ ಅಧ್ಯಕ್ಷ ಚಂದನ್ ಕುಮಾರ್, ಉಪಾಧ್ಯಕ್ಷರಾದ ಮ.ಶಿವಮೂರ್ತಿ, ಗೀತಾ ಶಿವರಾಜ್, ಮಾ.ನ. ಮಂಜೇಗೌಡ, ಹಳೇಬೀಡು ಹೋಬಳಿ ಘಟಕದ ಅಧ್ಯಕ್ಷೆ ವಿನುತ ಧನಂಜಯ್, ತಾಲ್ಲೂಕು ಯುವ ಘಟಕದ ಅಧ್ಯಕ್ಷ ಗೆಂಡೇಹಳ್ಳಿ ಚೇತನ್, ಯುವ ಕವಿ ನಿರಂಜನ್ ಬೇಲೂರು, ಸಾಹಿತಿ ಮಧು ಮಾಲತಿ ರುದ್ರೇಶ್, ಗಮಕ ಕವಿಯತ್ರಿ ಇಂದಿರಮ್ಮ, ಪತ್ರಕರ್ತ ಗಣೇಶ್,ಮಲ್ಲಿಕಾರ್ಜುನ ಇನ್ನೂ ಮುಂತಾದವರು ಹಾಜರಿದ್ದರು.

# ಪರಿಶ್ರಮದಿಂದ ಯಶಸ್ಸು

### ಸರ್ಕಾರಿ ಪಿಯು ಕಾಲೇಜಿನ ಉಪ ಪ್ರಾಂಶುಪಾಲ ಎನ್.ಮಹದೇವಪ್ಪ ಹೇಳಿಕೆ

**ಪಾಂಡವಪುರ :** ವಿದ್ಯಾರ್ಥಿಗಳಿಗೆ ಎಸ್ಎಸ್ಎಲ್‌ಸಿ, ಪಿಯುಸಿ ಅತ್ಯಂತ ಮಹತ್ವದ ಘಟ್ಟವಾಗಿದೆ. ಹೆಚ್ಚು ಪರಿಶ್ರಮ ಹಾಕಿದರೆ ಏನನ್ನಾದರೂ ಸಾಧಿಸಬಹುದು ಎಂದು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪ ಪ್ರಾಂಶುಪಾಲ ಎನ್.ಮಹದೇವಪ್ಪ ಹೇಳಿದರು.

ತಾಲೂಕಿನ ಜಯಂತಿನಗರ ಕ್ರಾಸ್‌ನಲ್ಲಿರುವ ಶ್ರೀ ಶಂಭುಲಿಂಗೇಶ್ವರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ದಿ.ಎ.ಎನ್.ಮಾಯಣ್ಣೇಗೌಡ ಎರೇಗೌಡನಹಳ್ಳಿ, ದಿ.ಕೆ.ಆರ್.ಪುಟ್ಟೇಗೌಡ ಕೆನ್ನಾಳು ಹಾಗೂ ದಿ.ತೊಟ್ಟಿಲು ಪುಟ್ಟೇಗೌಡ ಹುಲಿವಾನ ಅವರ ಸ್ಮರಣಾರ್ಥ ಆಯೋಜಿಸಿದ್ದ 2023-24ನೇ ಸಾಲಿನ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ತಾಲೂಕಿನ ಪ್ರೌಢಶಾಲಾ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ಹಿಂದಿನ ಸಾಲಿನ ಎಸ್ ಎಸ್ ಎಲ್ ಸಿ ಫಲಿತಾಂಶ ಹಾಗೂ ಈಗಿನ ಫಲಿತಾಂಶ ಗಮನಿಸಿದರೆ ವಿದ್ಯಾರ್ಥಿಗಳು ಅವರ ಸ್ವಂತ ಜ್ಞಾನದಿಂದ ಗೆದ್ದು ಬಂದಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಇದು ನೈಜ ಫಲಿತಾಂಶವಾಗಿದ್ದು, ಯಶಸ್ಸು ಯಾರ ಸ್ವತ್ತಲ್ಲ, ಪರಿಶ್ರಮಪಟ್ಟವರಿಗೆ ಮಾತ್ರ ಯಶಸ್ಸು ದೊರಕಲಿದೆ ಎಂದರು.

ಸಾಧನೆಮಾಡಲು ಹೊರಟ ಸಾಧಕರಿಗೆ ಪ್ರಮುಖವಾಗಿ ಧೈರ್ಯ ಬೇಕಿದೆ. ಪೋಷಕರು ಮನೆಯಲ್ಲಿ ಮಕ್ಕಳಿಗೆ ಒಳ್ಳೆಯ ವಾತಾವರಣ ನಿರ್ಮಿಸುವ ಜತೆಗೆ ಅವರಿಗೆ ಬೇಕಾದ ಪೂರಕ ವ್ಯವಸ್ಥೆಗಳನ್ನು ಒದಗಿಸಿಕೊಡಬೇಕು. ಆದರೆ ನಾವು ಮೊಬೈಲ್ ಯುಗದಲ್ಲಿದ್ದೇವೆ. ಇದು ಸದುಪಯೋಗಕ್ಕಿಂತಲೂ ಮಕ್ಕಳನ್ನು ಅಧೋಗತಿಗೆ ತಲುಪಿಸಲಿದೆ. ಒಳಿತಿಗಿಂತ ಕೆಟ್ಟದನ್ನೆ ಅವಲಂಬಿಸುವುದೇ ಹೆಚ್ಚು. ಹೀಗಾಗಿ ಪೋಷಕರು ತಮ್ಮ ಮಕ್ಕಳಿಗೆ ಮೊಬೈಲ್ ಬಳಕೆ ಮಾಡಿ ಓದಿನತ್ತ ಗಮನಹರಿಸುವಂತೆ ತಿಳಿಹೇಳಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಓದಿನ ಜತೆಗೆ ಸಂಸ್ಕಾರ ಇಟ್ಟುಕೊಳ್ಳಬೇಕು. ಆದರೆ ಇತ್ತೀಚಿನ ವಿದ್ಯಾರ್ಥಿಗಳ ಬದುಕು ಸಂಸ್ಕಾರ ರಹಿತ ಬದುಕಾಗಿದೆ. ಮಕ್ಕಳು ತಂದೆ-ತಾಯಿಯ ಮಾತನ್ನೇ ಕೇಳುವುದಿಲ್ಲ.



ಭಾರತೀಯ ಸಂಸ್ಕೃತಿಯಲ್ಲಿ ಸಂಸ್ಕಾರ ಎನ್ನುವುದು ಬಹು ದೊಡ್ಡದು. ಹೀಗಾಗಿ ಮಕ್ಕಳಿಗೆ ವಿದ್ಯೆಯಷ್ಟೆ ಸಂಸ್ಕಾರ ಕೂಡ ಅಷ್ಟೇ ಮುಖ್ಯ. ನಮ್ಮ ಸುತ್ತಮುತ್ತಲಿನ ಪರಿಸರ ಹಾಳಾಗದಂತಾಗಿರಲು ಮಕ್ಕಳಿಗೆ ಸಂಸ್ಕಾರ ಅತ್ಯಗತ್ಯ ಎಂದರು.

ಡಿಎಂಎಸ್ ಜ್ಞಾನ ಕುಟೀರದ ಮುಖ್ಯ ಶಿಕ್ಷಕ ಜಗದೀಶ್ ಮಾತನಾಡಿ, ಎಲ್ಲಾ ದಾನಗಳಿಗಿಂತಲೂ ವಿದ್ಯಾದಾನ ಶ್ರೇಷ್ಟವಾದದು. ಜೀವನದ ಕೊನೆವರೆಗೆ ವಿದ್ಯೆ ಇದ್ದೇ ಇರುತ್ತದೆ. ಕಳೆದ ಮೂರು ದಶಕಗಳಿಂದಲೂ ಶ್ರೀ ಶಂಭುಲಿಂಗೇಶ್ವರ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಎಂ.ಪಂಚಲಿಂಗೇಗೌಡರು ಗ್ರಾಮೀಣ ಮಕ್ಕಳಿಗೆ ವಿವಿಧ ಕೋರ್ಸ್‌ಗಳನ್ನು ತೆರೆದು ವಿದ್ಯಾದಾನ ಮಾಡುತ್ತಿರುವುದು ಶ್ಲಾಘನೀಯ. ಆ ಮೂಲಕ ಶೈಕ್ಷಣಿಕ ಕ್ರಾಂತಿ ಮಾಡುತ್ತಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಸಂಸ್ಥೆ ನಡೆಸುವುದೇ ದುಸ್ತರ. ಪಂಚಲಿಂಗೇಗೌಡರು ಗ್ರಾಮೀಣ ಮಕ್ಕಳ ಭವಿಷ್ಯ ರೂಪಿಸುವ ಕೆಲಸವನ್ನು ಅತ್ಯಂತ ಯಶಸ್ವಿಯಾಗಿ ನಿಭಾಯಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀ ಶಂಭುಲಿಂಗೇಶ್ವರ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಎಂ.ಪಂಚಲಿಂಗೇಗೌಡ ಮಾತನಾಡಿ, ಎಷ್ಟೇ ಕಷ್ಟವಿದ್ದರೂ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿಸಲು ಪೋಷಕರು ಪರಿಶ್ರಮಪಡುತ್ತಾರೆ. ಹೀಗಾಗಿ ಮಕ್ಕಳು ತಂದೆ-ತಾಯಿಗಳಿಗೆ ಕೃತಜ್ಞತೆ ಅರ್ಪಿಸಬೇಕು ಎಂದರು.

ಕಳೆದ 35 ವರ್ಷಗಳಿಂದಲೂ ಸಂಸ್ಥೆಯಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸದ ಜತೆಗೆ ವಿವಿಧ ಚಟುವಟಿಕೆಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಏಕ ಕಾಲಕ್ಕೆ ಐದು ತರಬೇತಿ ಶಾಲೆಗಳನ್ನು ಪ್ರಾರಂಭಿಸಿ ಯಶಸ್ವಿಯಾಗಿ ನಡೆಸಿದ ಹೆಗ್ಗಳಿಕೆ ನಮ್ಮ ಸಂಸ್ಥೆಯದ್ದು. ತಾಲೂಕಿನಲ್ಲಿ ಪ್ರಪ್ರಥಮ ಬಾರಿಗೆ ವಾಹನ ವ್ಯವಸ್ಥೆ ಮಾಡಿದ್ದು ಕೂಡ ನಮ್ಮ ಸಂಸ್ಥೆ ಎಂದರು.

ಶ್ರೀ ಶಂಭುಲಿಂಗೇಶ್ವರ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಪಿ.ಹೊನ್ನರಾಜು ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಬಾಲಚಂದ್ರ, ಕಾರ್ಯದರ್ಶಿ ಎಂ.ಪಂಚಲಿಂಗೇಗೌಡ, ಆಡಳಿತಾಧಿಕಾರಿ ಪಿ.ಅಕ್ಷಯ್, ಪಿಯು ಕಾಲೇಜು ಪ್ರಾಂಶುಪಾಲೆ ಆರ್.ವಿ.ಸೌಮ್ಯ, ಮುಖ್ಯ ಶಿಕ್ಷಕ ಕೆ.ಆರ್.ಮೋಹನ್ ರಾಜು, ಡಿಎಂಎಸ್ ಜ್ಞಾನ ಕುಟೀರ ವಿದ್ಯಾಸಂಸ್ಥೆ ಮುಖ್ಯ ಶಿಕ್ಷಕ ಜಗದೀಶ್, ಹಿರಿಯ ಪತ್ರಕರ್ತ ಎನ್.ಕೃಷ್ಣೇಗೌಡ ಇತರರಿದ್ದರು.

## ವಕ್ಕಲೇರಿಯಲ್ಲಿ 50ನೇ ವರ್ಷದ ಅದ್ದೂರಿ ಹೂವಿನ ಕರಗ ಮಹೋತ್ಸವ

**ಕೋಲಾರ:** ತಾಲೂಕಿನ ವಕ್ಕಲೇರಿ ಗ್ರಾಮದಲ್ಲಿ ಐತಿಹಾಸಿಕ ಪ್ರಸಿದ್ಧ ಶ್ರೀ ಪ್ರಸನ್ನ ದ್ರೌಪತಾಂಭ ದೇವಿಯ 50ನೇ ವರ್ಷದ ಹೂವಿನ ಕರಗ ಮಹೋತ್ಸವವು ಶುಕ್ರವಾರ ರಾತ್ರಿ ವಿಜೃಂಭಣೆಯಿಂದ ನಡೆಯಿತು.

ಗ್ರಾಮದಲ್ಲಿ ಹೂವಿನ ಕರಗವು ದೇವಾಲಯದಿಂದ ರಾತ್ರಿ 10:30ರ ಸಮಯದಲ್ಲಿ ಹೊರಬರುತ್ತಿದ್ದಂತೆ ಭಕ್ತರೆಲ್ಲರೂ ಹರ್ಷದಿಂದ ನಮಸ್ಕರಿಸಿದರು ಇದೇ ಪ್ರಥಮ ಬಾರಿಗೆ ವಕ್ಕಲೇರಿ ಗ್ರಾಮದವರಾದ ಪೂಜಾರಿ ವಿಜಯಕುಮಾರ್ ಕರಗ ಹೊತ್ತಿದ್ದು ವಿಶೇಷವಾಗಿತ್ತು ಕರಗವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ದೇವಾಲಯಗಳಲ್ಲಿ ಪೂಜೆ ಸಲ್ಲಿಸಿದರು. ಕರಗ ಬರುವ ದಾರಿಯಲ್ಲಿ ಜನಸ್ತೋಮ ತುಂಬಿತ್ತು ಶನಿವಾರ ಮಧ್ಯಾಹ್ನ 4 ಗಂಟೆಯ ತನಕ ಹೊತ್ತಿದ್ದರು ಸಂಜೆ ಅಗ್ನಿಕೊಂಡ ಪ್ರವೇಶಿಸಿದ ಕರಗವು ಮಹಾಮಂಗಳಾರತಿಯೊಂದಿಗೆ ಕರಗ ಮುಕ್ತಾಯಗೊಂಡಿತು.

ಹೂವಿನ ಕರಗದ ವಿಶೇಷವಾಗಿ ವಕ್ಕಲೇರಿ ಗ್ರಾಮದ ಪ್ರತಿಯೊಂದು ದೇವಾಲಯಗಳಲ್ಲಿ ವಿಶೇಷ ಪೂಜೆಗಳನ್ನು ಹಮ್ಮಿಕೊಳ್ಳಲಾಗಿತ್ತು ವಹ್ನಿಕುಲ ಕ್ಷತ್ರಿಯ ಸಮುದಾಯದವರ ಮನೆ ಮನೆಗಳಲ್ಲಿ ಮತ್ತು ಇಡೀ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು ಗ್ರಾಮದ ದೇವರುಗಳ ಪಲ್ಲಕ್ಕಿಗಳನ್ನು ಸಾಲಾಗಿ ನಿಂತು ಭಕ್ತರು ಕಣ್ತುಂಬಿಕೊಂಡರು ರಾತ್ರಿ ರಸಮಂಜರಿ ಕಾರ್ಯಕ್ರಮ ಕೂಡ ಆಯೋಜಿಸಲಾಗಿತ್ತು,

ಕರಗ ಮಹೋತ್ಸವ ಹಿನ್ನೆಲೆಯಲ್ಲಿ ಶ್ರೀ ಪ್ರಸನ್ನ ದ್ರೌಪತಾಂಭ ದೇವಾಲಯದಲ್ಲಿ ದೇವರಿಗೆ ಹೂವಿನ ಅಲಂಕಾರ, ವಿಶೇಷ ಪೂಜೆ, ಮಹಾ ಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ಸಹ ನಡೆಯಿತು ಊರಿನಲ್ಲಿ ದೀಪಾಲಂಕಾರ ಹಾಗೂ ದೇವರ ಪಲ್ಲಕ್ಕಿ ಉತ್ಸವ, ವಿವಿಧ ದೇವರ ಕೈಂಕರ್ಯಗಳು ನಡೆದವು ಭಕ್ತಾದಿಗಳಿಗೆ ಜೆಡಿಎಸ್ ಮುಖಂಡ ಸಿಎಂಆರ್ ಶ್ರೀನಾಥ್ ಮತ್ತು ಸಿಎಂಆರ್ ಹರೀಶ್ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು

ಈ ಸಂದರ್ಭದಲ್ಲಿ ಶಾಸಕ ಕೊತ್ತೂರು ಜಿ ಮಂಜುನಾಥ್, ಎಂಎಲ್ಸಿ ಎಂ.ಎಲ್ ಅನಿಲ್ ಕುಮಾರ್, ಮಾಜಿ ಸಚಿವ ವರ್ತೂರು ಪ್ರಕಾಶ್, ಜೆಡಿಎಸ್ ಮುಖಂಡ ಸಿಎಂಆರ್ ಶ್ರೀನಾಥ್, ರಾಜ್ಯ ಒಕ್ಕಲಿಗ ಸಂಘದ ಮಾಜಿ ನಿರ್ದೇಶಕ ವಕ್ಕಲೇರಿ ರಾಮು, ಸಿಂಡಿಕೇಟ್ ಸದಸ್ಯ ಸಹ್ಯಾದ್ರಿ ಉದಯಕುಮಾರ್, ಜಿಲ್ಲಾ ಕಾಂಗ್ರೆಸ್ ವಕ್ತಾರ ಎಲ್.ಎ ಮಂಜುನಾಥ್, ಸೀಸಂದ್ರ ಗೋಪಾಲಗೌಡ, ವೈ ಶಿವಕುಮಾರ್, ಛತ್ರಕೋಡಿಹಳ್ಳಿ ಮಂಜುನಾಥ್, ವಕ್ಕಲೇರಿ ಗ್ರಾಪಂ ಮಾಜಿ ಅಧ್ಯಕ್ಷರಾದ ಮೈಲಾಂಡಹಳ್ಳಿ ಮುರಳಿ, ವಕ್ಕಲೇರಿ ರಾಜಪ್ಪ, ಲೋಕೇಶ್, ದೇವಾಲಯದ ಕನ್ವೀನರ್ ಮುನಿರಾಜು, ವಹ್ನಿಕುಲ ಸಮುದಾಯದ ಮುಖಂಡರಾದ ಪಲ್ಲವಿ ಮಣಿ, ಬಿ.ಎಲ್ ಮುನಿರಾಜು, ಗೌಡರ ನಾರಾಯಣಪ್ಪ, ಪೂಜಾರಿ ಗೋವಿಂದಪ್ಪ, ವೆಂಕಟೇಶ್, ಸಂದೇಶ್, ಗ್ರಾಪಂ ವಿಜಯಲಕ್ಷ್ಮಿ ಮಂಜುನಾಥ್ ಮುಂತಾದವರು ಇದ್ದರು.



## ಮೇವು ಸಿಗದೆ ಜಾನುವಾರುಗಳು ಸಾವು

**ಚಾಮರಾಜನಗರ :** ಕರ್ನಾಟಕ ತಮಿಳುನಾಡು ಮತ್ತು ಕೇರಳ ರಾಜ್ಯಗಳ ಗಡಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಸಕಾಲಕ್ಕೆ ಮೇವು ಸಿಗದೆ ಜಾನುವಾರುಗಳು ಸಾವನ್ನಪ್ಪುತ್ತಿರುವ ಘಟನೆ ನಡೆದಿದೆ. ಬಂಡೀಪುರ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಮಂಗಲ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುವ ಯಲಚಟ್ಟಿ , ಮಂಗಲ, ಜಕ್ಕಹಳ್ಳಿ ಲೋಕ್ಕೆರೆ, ಗುಡ್ಡೆಕೆರೆ ಭಾಗದಲ್ಲಿ ಜಾನುವಾರುಗಳಿಗೆ ಮೇವು ಸಿಗದೆ ಜಾನುವಾರುಗಳು ಸಾವನ್ನಪ್ಪುತ್ತಿದ್ದು, ಇದರಿಂದ ಜಾನುವಾರು ಸಾಕಿದ ರೈತರುಗಳು ಕಂಗಲಾಗಿದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲಿ ಮಳೆಯಾಗದೇ , ಬಿಸಿಲಿನ ತಾಪಮಾನ ಹೆಚ್ಚಾಗಿದ್ದು, ಭೀಕರ ಬರಗಾಲ ಬಂದಿದೆ. ಇದರ ಜೊತೆಗೆ ಗ್ರಾಮಾಂತರ ಪ್ರದೇಶದಲ್ಲಿ ಜಾನುವಾರು ಸಾಕಿಕೊಂಡು ಜೀವನ ಸಾಗಿಸುತ್ತಿರುವ ರೈತರಿಗೆ ಬರೆ ಎಳೆದಂತೆ ಜಾನುವಾರುಗಳಿಗೆ ಮೇವು ಸಿಗದೆ ಸಾಕು ಪ್ರಾಣಿಗಳು ಜೀವ ಬಿಡುತ್ತಿದೆ. ಪಶುಸಂಗೋಪನಾ ಇಲಾಖೆಯವರು ಜಾನುವಾರುಗಳಿಗೆ ಮೇವು ಖರೀಧಿಸಿದರೂ , ಕಾಡಂಚಿನ ಗ್ರಾಮಗಳಿಗೆ ಸಮರ್ಪಕವಾಗಿ ಪೂರೈಕೆಯಾಗಿಲ್ಲ ಎಂದು ರೈತರು ದೂರುತ್ತಿದ್ದಾರೆ. ಗುಂಡ್ಲುಪೇಟೆ ಪಟ್ಟಣಕ್ಕೆ ತೆರಳಿ ಜಾನುವಾರುಗಳಿಗೆ ದುಪ್ಪಟ್ಟು ಹಣ ನೀಡಿ ಮೇವು ಖರೀಧಿಸಲು ಸಾಧ್ಯವಾಗುತ್ತಿಲ್ಲ ಎಂದು ರೈತರು ಹೇಳುತ್ತಿದ್ದಾರೆ.

# ವಿ.ಶ್ರೀನಿವಾಸಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ

**ತಿ. ನರಸೀಪುರ.:** ಇತ್ತೀಚಿಗೆ ವಿಧಿವಶರಾದ ಹಿರಿಯ ರಾಜಕಾರಿಣಿ, ಸಂಸದ, ಹಿರಿಯ ಮುತ್ಸದಿ ವಿ. ಶ್ರೀನಿವಾಸಪ್ರಸಾದ್ ಅವರ ಪುಣ್ಯಾನುಮೋದನಾ ಕಾರ್ಯಕ್ರಮವನ್ನು ಪಟ್ಟಣದ ಅಂಬೇಡ್ಕರ್ ಭವನದಲ್ಲಿ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ವಿವಿಧ ಪಕ್ಷದ ಮುಖಂಡರು ವಿ. ಶ್ರೀನಿವಾಸಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಇದೇ ವೇಳೆ ಮಾತನಾಡಿದ ಬುದ್ಧ ವಿಹಾರದ ಬೋಧಿ ರತ್ನ ಬಂತೇಜಿ , ಶ್ರೀನಿವಾಸಪ್ರಸಾದ್ ಅವರು ಬುದ್ಧ , ಅಂಬೇಡ್ಕರ್ ಮತ್ತು ಬಸವ ತತ್ವಮತ್ತು ಆದರ್ಶಗಳನ್ನು ಅಳವಡಿಸಿಕೊಂಡು ಸಮಾಜದ ಪರಿವರ್ತನೆಗೆ ಮುಂದಾಗಿದ್ದರು. ಅವರ ಸ್ವಾಭಿಮಾನ, ದಿಟ್ಟತನ ಸದಾಕಾಲ ಸ್ಮರಣೀಯ ಎಂದರು. ಈ ಭಾಗದ ದಿಟ್ಟ ನಾಯಕನ್ನು ಕಳೆದುಕೊಂಡಿದ್ದೇವೆ ಭಾವುಕರಾದರು.

ಜಿ.ಪಂ.ಮಾಜಿ ಅಧ್ಯಕ್ಷ ಎಸ್. ಎನ್. ಸಿದ್ಧಾರ್ಥ್ ಮಾತನಾಡಿ ಕುವೆಂಪು ಅವರ ಸರ್ವ ಜನಾಂಗದ ಶಾಂತಿ ತೋಟದಂತೆ ಸರ್ವಜನಾಂಗದ ಜನರ ಜೊತೆ ಶ್ರೀನಿವಾಸಪ್ರಸಾದ್ ಅವರು ಉತ್ತಮ ಬಾಂಧವ್ಯ ಹೊಂದಿದ್ದರು. 1996ರಲ್ಲಿ ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ನಿರಾಕರಣೆ ಮಾಡಿದಾಗ ಬಂಡಾಯವಾಗಿ ಸ್ಪರ್ಧೆ ಮಾಡಿ ಗೆದ್ದು ಅವರು ಇಡೀ ರಾಷ್ಟ್ರದ ಗಮನ ಸೆಳೆದಿದ್ದರು. ಅವರು ಎಲ್ಲ ಸಮುದಾಯಗಳನ್ನು ಸಮಾನವಾಗಿ ಕಾಣುತ್ತಿದ್ದರು. ಅವರ ಸುದೀರ್ಘ ರಾಜಕಾರಣದಲ್ಲಿ ಕ್ಷೇತ್ರದ ಅಭಿವೃದ್ಧಿ ಮಾಡುವ ಕಡೆ ತಮ್ಮದೇ ಆದ ಸ್ಪಷ್ಟ ನಿಲುವು ಹೊಂದಿದ್ದರು. ಅವರ ಧೈರ್ಯ, ಪ್ರಾಮಾಣಿಕತೆ, ಸ್ವಾಭಿಮಾನವನ್ನು ನಾವು ಅನುಸರಿಸಬೇಕು ಎಂದು ಹೇಳಿದರು. ಬಿಜೆಪಿ ಮುಖಂಡ ಡಾ. ರೇವಣ್ಣ ಮಾತನಾಡಿ ಪ್ರಸಾದ್ ಅವರು ತಮ್ಮ ಐದು ದಶಕಗಳ ಸುಧೀರ್ಘ ರಾಜಕಾರಣದಲ್ಲಿ ಯಾವುದೇ ಭ್ರಷ್ಟಾಚಾರ ಇಲ್ಲದೆ ಬದುಕಿದರು. ಕಳೆದ ಚುನಾವಣೆಯಲ್ಲಿ ನಾನು ಬಿಜೆಪಿ ಪಕ್ಷದ ಅಭ್ಯರ್ಥಿಯಾಗಿದ್ದಾಗ ನನ್ನನ್ನು ತಮ್ಮ ಮನೆಗೆ ಕರೆಸಿ ರಾಜಕೀಯದ ಹಲವು ಸೂಕ್ಷ್ಮ ಬಗ್ಗೆ ಮಾರ್ಗದರ್ಶನ ನೀಡಿದರು. ಅವರು ತಮಗೆ ಅನ್ಯಾಯವಾದಾಗ ಅದನ್ನು ನೇರವಾಗಿ ಖಂಡಿಸುತ್ತಿದ್ದರು. ಅವರು ನೇರ, ನಿಷ್ಟುರ ವ್ಯಕ್ತಿ. ಜಾತಿ, ಧರ್ಮವನ್ನು ಮೀರಿ ಬೆಳೆದವರು ಎಂದು ಅವರ ಒಡನಾಟದ ಬಗ್ಗೆ ಮಾತನಾಡಿದರು.



ತಾಲ್ಲೂಕು ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಮೂಗೂರು ಎಂ. ಕೆ. ಸಿದ್ದರಾಜು, ಸೋಸಲೆ ಮಹದೇವಸ್ವಾಮಿ, ಪುರಸಭಾ ಸದಸ್ಯ ತುಂಬಲ ಪ್ರಕಾಶ್, ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ,ಕೆ. ಜಿ. ವೀರಣ್ಣ,ಮಾಜಿ ಎಪಿಎಂಸಿ ಅಧ್ಯಕ್ಷ ಮಹೇಶ್, ಸಾಮಾಜಿಕ ನ್ಯಾಯ ಸಮಿತಿ ಮಾಜಿ ಅಧ್ಯಕ್ಷರುಗಳಾದ ರಾಮಲಿಂಗಯ್ಯ, ಎಂ. ರಮೇಶ್, ತಾ.ಪಂ ಮಾಜಿ. ಸದ್ಯಸ ಬಸವರಾಜು, ವಿಚಾರವಾದಿ ಕರೋಹಟ್ಟಿ ಪ್ರಭುಸ್ವಾಮಿ, ಸೋಸಲೆ ಶಶಿಕಾಂತ್, ಆಲಗೂಡು ಶಿವಕುಮಾರ್,ವೀರಶೈವ ಮಹಾಸಭಾ ಅಧ್ಯಕ್ಷ ತೋಟ್ಟವಾಡಿ ಮಹದೇವಸ್ವಾಮಿ, ನಿವೃತ್ತ ಸಮಾಜ ಕಲ್ಯಾಣ ಅಧಿಕಾರಿ ಕೆಂಚಪ್ಪ, ಶ್ರೀಧರ್, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ತೋಟದಪ್ಪ ಬಸವರಾಜು,ಪಿ. ಸ್ವಾಮಿನಾಥ್ ಗೌಡ, ಕೆ. ಸಿ ಬೃಂಗೀಶ್, ವೀರೇಶ್, ಲೋಕೇಶ್, ಕೆಬ್ಬೆಹುಂಡಿ ಶಿವಕುಮಾರ್,ಕುರುಬೂರು ಶಿವು, ಶಿವಕುಮಾರ್(ಬಡ್ಡು ), ಬನ್ನಹಳ್ಳಿ ಹುಂಡಿ ಪುಟ್ಟಸ್ವಾಮಿ, ಪರಶಿವಮೂರ್ತಿ, ನಿಂಗಯ್ಯ, ಆಲೂಗೂಡು ಶಿವಣ್ಣ ಯರಗನಹಳ್ಳಿ ಮಹದೇವಸ್ವಾಮಿ ಸುರೇಶ್, ಸೋಸಲೆ ನಂಜುಂಡಯ್ಯ, ಶಿವಣ್ಣ, ಪ್ರೇಮ್ ಕುಮಾರ್, ಪುಟ್ಟಮಲ್ಲಯ್ಯ, ಬಂಗಾರಿ, ಚೌಹಳ್ಳಿ ಸಿದ್ದರಾಜು ಇದ್ದರು.

# ಗ್ರಾಮೀಣ ಭಾಗದ ಅಲ್ಲಲ್ಲಿ ತುಂತುರು ಮಳೆ




**ವಿಜಯಪುರ:** ಪಟ್ಟಣ ಸೇರಿದಂತೆ ಗ್ರಾಮೀಣ ಭಾಗದಲ್ಲಿ ಅಲ್ಲಲ್ಲಿ ಶನಿವಾರದಂದು ಸಂಜೆ 4.30 ರ ಸುಮಾರಿಗೆ ತುಂತುರು ಮಳೆಯಾಗಿದೆ. ಕಳೆದೆರಡು ದಿನಗಳಿಂದ ಆಗಾಗ ಸುರಿದ ತುಂತುರು ಮಳೆಗೆ ಸ್ವಲ್ಪ ಮಟ್ಟಿಗೆ ಭೂಮಿ ತಂಪೆರಿದಂತಾಗಿದೆ.

ಸಂಜೆ ಆರೂವರೆ ಗಂಟೆಯಾದರೂ ಸುಡು ಬಿಸಿಲಿಗೆ ಹೈರಾಣಗಿದ್ದ ಜನತೆಗೆ ಇದೀಗ ಬೆಳಗ್ಗಿನಿಂದ ಮೋಡ ಕವಿದ ವಾತಾವರಣ ಕಂಡು ಬಂದು ಮಳೆಯಾಗಿರುವುದು ನೆಮ್ಮದಿ ತಂದೊಡ್ಡಿದೆ. ಕೃಷಿ ಬೆಳೆಗಳಿಗೆ ನೀರಿನ ಅಭಾವದಿಂದ ಕಂಗೆಟ್ಟಿದ ರೈತರಿಗೆ ತುಂತುರು ಮಳೆಯಾಗಿರುವುದು ಸಂತಸ ತರಿಸಿದೆ.

ಇನ್ನೂ ಸಂಜೆಯಾಗುತ್ತಲೇ ಮಳೆಯು ಅಬ್ಬರ ಜಾಸ್ತಿಯಾಗುತ್ತಿದ್ದು ಕೆಲಸ ಕಾರ್ಯಗಳಿಗೆ ಹೋಗುವ ಜನತೆಗೆ ಈ ಮಳೆಯಿಂದ ತೊಂದರೆಯಾದರು ಬಿರು ಬಿಸಿಲಿನ ದಗೆಗೆ ಜನರು ಎಷ್ಟೇ ಮಳೆ ಬಂದರು ಪರವಾಗಿಲ್ಲ ಅನ್ನುತ್ತಿದ್ದಾರೆ.

ಪಟ್ಟಣ ಸೇರಿದಂತೆ ಗ್ರಾಮೀಣಾ ಭಾಗದಲ್ಲಿ ವಿದ್ಯುತ್ ಸಮಸ್ಯೆ ಹೆಚ್ಚಾಗುತ್ತಿದೆ. ಗ್ರಾಮೀಣ ಭಾಗದಲ್ಲಿ ಸ್ವಲ್ಪ ಮಳೆ ಬಂದರು ಬೆಸ್ಕಂ ಇಲಾಖೆ ಸರಿಯಾಗಿ ವಿದ್ಯುತ್ ಕಂಬಗಳನ್ನು ಸರಿಪಡಿಸದೇ ಪ್ರತಿದಿನವು ಸಂಜೆಯಾದರೆ ಕೆಲ ಭಾಗಗಳಲ್ಲಿ ವಿದ್ಯುತ್ ಕಡಿತವಾಗುತ್ತಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ಕೆಲವರು ಆರೋಪಿಸಿದರು.

ಬಸ್ಸ್ ಸಮಸ್ಯೆ: ಮಳೆ ಕಾರಣ ಬಸ್‌ಗಳ ಸಂಚಾರದಲ್ಲಿ ವ್ಯತ್ಯಯವಾಗಿ ಗ್ರಾಮೀಣ ಸೇರಿದಂತೆ ಪಟ್ಟಣ ಸುತ್ತಮುತ್ತಲಿನ ಭಾಗಗಳಿಂದ ಸಾವಿರಾರೂ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಚಿಕ್ಕಬಳ್ಳಾಪುರ, ಬೆಂಗಳೂರು ಪ್ರದೇಶಗಳಿಂದ ಬರಬೇಕದರು ಹೋಗಬೇಕದರೆ ಬಸ್ಸ್ ಗಳು ಇಲ್ಲದೆ ಗಂಟಿಗಟ್ಟಲೇ ಕಾಯಬೇಕದ ಪರಿಸ್ಥಿತಿ ಇರುವುದರಿಂದ ಈ ಮಳೆಗಾಲದಲ್ಲಿ ಹೆಚ್ಚಿನ ಬಸ್ಸಗಳ ವ್ಯವಸ್ಥೆ ಮಾಡಬೇಕಾಗಿದೆ ಎಂದರು ಸಾರ್ವಜನಿಕರು ಒತ್ತಾಯಿಸಿದರು.

# ಪ್ರಕೃತಿ ವಿಕೋಪ ಸಂದರ್ಭದಲ್ಲಿ ರೆಡ್‌ಕ್ರಾಸ್ ಸೇವೆ ಶ್ಲಾಘನೀಯ

**ಹುಳಿಯಾರು:** ಹುಳಿಯಾರು-ಕೆಂಕೆರೆ ಬಿ.ಎಂ. ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಯುವ ರೆಡ್ ಕ್ರಾಸ್ ಘಟಕ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ವಿಶ್ವ ರೆಡ್‌ಕ್ರಾಸ್ ದಿನವನ್ನು ಆಚರಿಸಲಾಯಿತು.

ರೆಡ್ ಕ್ರಾಸ್ ಸಂಸ್ಥಾಪಕರಾದ ಜೀನ್ ಹೆನ್ರಿ ಡ್ಯುನಾಂಟ್ ರವರ ಜನ್ಮ ದಿನದ ಸ್ಮರಣಾರ್ಥ ಈ ಕಾರ್ಯಕ್ರಮ ಆಯೋಜಿಸಲಾಗಿದ್ದು ಕಾಲೇಜಿನ ಐಕ್ಯೂಎಸಿ ಸಂಯೋಜಕರಾದ ಪ್ರೊ.ಮಂಜುನಾಥ ಕೆ ಎಸ್ ಅವರು ಮಾತನಾಡಿ ಜಗತ್ತಿನಲ್ಲಿ ಮಾನವೀಯತೆಯನ್ನು ಎತ್ತಿ ಹಿಡಿಯುವಲ್ಲಿ, ಯುದ್ಧದ ಗಾಯಾಳುಗಳ ಶುಶ್ರೂಷೆ ಮಾತ್ರವಲ್ಲದೆ ಪ್ರಕೃತಿ ವಿಕೋಪಗಳಂತಹ ಸಂದರ್ಭಗಳಲ್ಲಿ ಜನರ ರಕ್ಷಣೆ, ಪ್ರಥಮ ಚಿಕಿತ್ಸೆ, ಆರೋಗ್ಯ ಹಾಗೂ ನೈರ್ಮಲ್ಯ ಇತ್ಯಾದಿಗಳಲ್ಲಿ ಯಾವುದೇ ಪ್ರತಿಫಲ ಅಪೇಕ್ಷೆ ಇಲ್ಲದೆ ಸ್ವಯಂಸೇವಕರಾಗಿ ತೊಡಗಿಕೊಳ್ಳುವುದೇ ರೆಡ್ ಕ್ರಾಸ್ ಸಂಘಟನೆಯ ಆಶಯ. ನಾವೆಲ್ಲರೂ ಸ್ವಯಂ ಸೇವಕರೇ ಎಂದರು.

ರಾಜ್ಯಶಾಸ್ತ್ರ ವಿಭಾಗದ ಉಪನ್ಯಾಸಕರಾದ ತಿಪ್ಪೇಸ್ವಾಮಿ ಅವರು ಮಾತನಾಡಿ, ''ರೆಡ್ ಕ್ರಾಸ್ ಸಂಸ್ಥೆಯ ಹಿನ್ನಲೆ, ಧ್ಯೇಯಗಳಾದ ನಿಷ್ಪಕ್ಷಪಾತ ಸೇವೆ, ತಟಸ್ಥತೆಯ ಕುರಿತು ತಿಳಿಸಿದರು. ಹೆನ್ರಿ ಡ್ಯುನಾಂಟ್ ಅವರ ಈ ಕೊಡುಗೆಗಾಗಿ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿಯನ್ನು ನೀಡಲಾಗಿದೆ ಎಂದರು. ಅನುವಂಶಿಕವಾಗಿ ಬರುವ ತಲಸೆಮಿಯ ಎಂಬ ರಕ್ತ




ಸಂಬಂಧಿ ಕಾಯಿಲೆಯ ಕುರಿತು ಮಾಹಿತಿ ನೀಡಿ, ರಕ್ತದಾನದ ಮಹತ್ವವನ್ನು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಪ್ರೊ. ಯೋಗೀಶ್ ಬಿ ಅವರು ಮಾತನಾಡಿ ಯುವ ಜನತೆ ವಿದ್ಯಾರ್ಜನೆಯೊಂದಿಗೆ ಮಾನವೀಯ ಮೌಲ್ಯಗಳನ್ನು, ಸೇವಾ ಮನೋಭಾವವನ್ನು ಬೆಳೆಸಿಕೊಂಡು, ಸಾಮಾಜಿಕ ಜವಾಬ್ದಾರಿಯನ್ನು ನಿಭಾಯಿಸಬೇಕು ಆ ಮೂಲಕ ಸಂತೋಷ ಕಾಣಬೇಕು. ಎಲ್ಲರೂ ತಮ್ಮ ಆರೋಗ್ಯವನ್ನು ಕಾಪಾಡಿಕೊಂಡು ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಕೊಡುಗೆ ನೀಡಬೇಕು ಎಂದರು.

ಕಾರ್ಯಕ್ರಮದ ಸಂಚಾಲಕರಾದ ಸಂಗೀತಾ ಪಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಈ ಸಾಲಿನ ವಿಶ್ವ ರೆಡ್ ಕ್ರಾಸ್ ದಿನದ ಧ್ಯೇಯವನ್ನು ತಿಳಿಸಿದರು. ಹೆನ್ರಿ ಡ್ಯುನಾಂಟ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಪ್ರಥಮ ಬಿ.ಕಾಂ ನ ವಿದ್ಯಾರ್ಥಿಗಳಾದ ಮೌನಶ್ರೀ ಸ್ವಾಗತಿಸಿ, ತಸ್ಮಿಯಾ ಬಾನು ಅವರು ವಂದಿಸಿದರು. ಲತಾ ಸಿ.ಮತ್ತು ರಂಜಿತ. ಕೆ. ಪ್ರಾರ್ಥಿಸಿದರು. ಕಾರ್ಯಕ್ರಮ ರಕ್ಷಿತಾ ಸಿ ಅವರು ನಿರೂಪಿಸಿದರು. ಕಾಲೇಜಿನ ಬೋಧಕ-ಬೋಧಕೇತರ ವೃಂದ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

# ಪದವಿ ವ್ಯಾಸಂಗವು ವಿದ್ಯಾರ್ಥಿಗಳಿಗೆ ನಿರ್ಣಾಯಕ ಘಟ್ಟ

**ಕೆ.ಆರ್.ಪೇಟೆ:** ಪದವಿ ವ್ಯಾಸಂಗವು ವಿದ್ಯಾರ್ಥಿಗಳಿಗೆ ಸಾಧನೆ ಮಾಡಲು ನಿರ್ಣಾಯಕ ಘಟ್ಟವಾಗಿದೆ. ವಿದ್ಯೆ ಸಾಧಕರ ಸ್ವತ್ತೇ ಹೊರತು ಸೋಮಾರಿಗಳ ಸೊತ್ತಲ್ಲ ಎಂದು ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್ ಹೇಳಿದರು.

ಅವರು ಪಟ್ಟಣದ ಕಲ್ಪತರು ಪ್ರಥಮ ದರ್ಜೆ ಕಾಲೇಜಿನ ಕಚೇರಿ ಹಾಗೂ ನೂತನ ಕಟ್ಟಡವನ್ನು ಉದ್ಘಾಟನೆ ಮಾಡಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ವಿದ್ಯಾರ್ಥಿ ಜೀವನದಲ್ಲಿ ಪದವಿ ವ್ಯಾಸಂಗವು ನಿರ್ಣಾಯಕ ಘಟ್ಟವಾಗಿದೆ. ಪದವಿ ಪರೀಕ್ಷೆಯ ನಂತರ ಶ್ರದ್ಧಾ ಭಕ್ತಿಯಿಂದ ವ್ಯಾಸಂಗ ಮಾಡಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಿದರೆ ಖಂಡಿತವಾಗಿಯೂ ಅತ್ಯುನ್ನತವಾದ ಹುದ್ದೆಯನ್ನು ಅಲಂಕರಿಸುವ ಜೊತೆಗೆ ತಾಲ್ಲೂಕಿನ ಕೀರ್ತಿಯ ಜೊತೆಗೆ ಗುರುಹಿರಿಯರು ಮತ್ತು ತಂದೆತಾಯಿಗಳ ಹೆಸರನ್ನು ಬೆಳಗಿ ಸಾಧನೆ ಮಾಡಬಹುದಾಗಿದೆ. ಆದರೆ ನಮ್ಮಲ್ಲಿ ಸಾಧನೆ ಮಾಡಲೇ ಬೇಕೆನ್ನುವ ಧೃಡ ನಿರ್ಧಾರ ಇರಬೇಕು ಎಂದು ಮಲ್ಲಿಕಾರ್ಜುನ್ ಹೇಳಿದರು.

ಸಮಾರಂಭದಲ್ಲಿ ಭಾಗವಹಿಸಿ ಕಾಲೇಜಿನ ಸೆಮಿನಾರ್ ಕೊಠಡಿಯನ್ನು ಉದ್ಘಾಟಿಸಿದ ಮಾಜಿಶಾಸಕ ಕೆ.ಬಿ. ಚಂದ್ರಶೇಖರ್ ಮಾತನಾಡಿ ಕಡಿಮೆ ಹಣ ಪಡೆದುಕೊಂಡು




ಗುಣಮಟ್ಟದ ಶಿಕ್ಷಣ ನೀಡಿ, ಅತ್ಯುತ್ತಮ ಫಲಿತಾಂಶಕ್ಕೆ ತಾಲ್ಲೂಕಿನಲ್ಲಿ ಹೆಸರು ವಾಸಿಯಾಗಿರುವ ಕಲ್ಪತರು ಕಾಲೇಜು ಬೆಳ್ಳಿಹಬ್ಬದ ಸಂಭ್ರಮಾಚರಣೆಯ ಹೊಸ್ತಿಲಿನಲ್ಲಿದೆ. ವ್ಯಕ್ತಿತ್ವ ವಿಕಸನ ತರಬೇತಿ ಹಾಗೂ ವೃತ್ತಿ ಕೌಶಲ್ಯ ಮಾರ್ಗದರ್ಶನವನ್ನು ಉಚಿತವಾಗಿ ನೀಡಿ ಯುವಜನರನ್ನು ಸಜ್ಜುಗೊಳಿಸುತ್ತಿರುವ ವಿಠಲಾಪುರ ಜಯರಾಮ್ ವಿದ್ಯಾರ್ಥಿಗಳ ಸಾಧನೆಯನ್ನು ಸಂಭ್ರಮಿಸುತ್ತಿದ್ದಾರೆ. ಯುವಜನರು ಎಂಜಿಯನಿರಿಂಗ್ ಮತ್ತು ವೈದ್ಯಕೀಯ ಶಿಕ್ಷಣದ ವ್ಯಾಮೋಹದಿಂದ ಹೊರಬಂದು ಯುವ ಜನರ ಬದುಕು ರೂಪಿಸಿ ಆತ್ಮವಿಶ್ವಾಸ ತುಂಬುವ ಪದವಿ ವ್ಯಾಸಂಗದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಜೊತೆಗೆ ಕಂಪ್ಯೂಟರ್ ಮತ್ತು ಸ್ಪೋಕನ್ ಇಂಗ್ಲಿಷ್ ಅನ್ನು ಚೆನ್ನಾಗಿ ಕಲಿತು ತಮ್ಮ ಕಾಲಮೇಲೆ ತಾವೇ ನಿಂತುಕೊಂಡು ಸ್ವಾವಲಂಬಿ ಜೀವನ ನಡೆಸಲು ಮುಂದಾಗಬೇಕು ಎಂದು ಚಂದ್ರಶೇಖರ್ ಕಿವಿಮಾತು ಹೇಳಿದರು.

ಕಲ್ಪತರು ಕಾಲೇಜಿನ ವಿಶಾಲವಾದ ಕಟ್ಟಡದಲ್ಲಿ ಪದವಿಯ ಜೊತೆಗೆ ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಕೋರ್ಸ್ ಗಳನ್ನು ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಆರಂಭಿಸಲು ಮುಂದಾದರೆ ಸರ್ಕಾರದ ಮಟ್ಟದಲ್ಲಿ ತಾವೇ ಮುಂದೆ ನಿಂತು ನರ್ಸಿಂಗ್ ಮತ್ತು ಪ್ಯಾರಾಮೆಡಿಕಲ್ ಕೋರ್ಸ್‌ಗಳ ಪ್ರಾರಂಭಕ್ಕೆ ಎಲ್ಲಾ ರೀತಿಯ ಸಹಾಯ ಮಾಡುವುದಾಗಿ ಮಾಜಿ ಶಾಸಕ ಚಂದ್ರಶೇಖರ್ ಘೋಷಿಸಿದರು.

ಪಟ್ಟಣದ ನೋಟರಿ ವಕೀಲರಾದ ಬಂಡಿಹೊಳೆ ಬಿ. ಗಣೇಶ್, ಪುರಸಭೆ ಮಾಜಿ ಸದಸ್ಯ ಕೆ.ಆರ್.ನೀಲಕಂಠ, ಮಾತೃಶ್ರೀ ವಿದ್ಯಾಸಂಸ್ಥೆಯ ಅಧ್ಯಕ್ಷ ವಿಠಲಾಪುರ ಜಯರಾಮ್ ಸಮಾರಂಭದಲ್ಲಿ ಮಾತನಾಡಿದರು. ಕಾಲೇಜಿನ ಆಡಳಿತಾಧಿಕಾರಿ ಶಿವಕುಮಾರ್ ಹಾಗೂ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಚಾ.ನಗರದಲ್ಲಿ ಧಾರಾಕಾರ ಮಳೆ

**ಚಾಮರಾಜನಗರ:** ಚಾಮರಾಜನಗರ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಶನಿವಾರ ಮಧ್ಯಾಹ್ನ 12.30 ರ ವೇಳೆಯಲ್ಲಿ ಧಾರಾಕಾರವಾಗಿ ಪ್ರಾರಂಭವಾದ ಮಳೆ ಒಂದು ಗಂಟೆಗೂ ಹೆಚ್ಚು ಕಾಲ ಸಿಡಿಲಿನೊಂದಿಗೆ ಆರಂಭವಾಗಿ ನಲುಗಿ ಹೋಗಿದ್ದ ಭೂಮಿಗೆ ತಂಪೆರೆಯಿತು.

ದಿಢೀರನೆ ಬಂದ ಮಳೆಯಿಂದ ರಕ್ಷಣೆ ಪಡೆಯಲು ಜನರು ಅಂಗಡಿ, ಮುಂಗಟ್ಟುಗಳ ಮೊರೆ ಹೋದರು. ತಾಲೂಕಿನ ಹರದನಹಳ್ಳಿ, ವಿ.ಸಿ.ಹೊಸೂರು, ಕೋಡಿಮೋಳೆ, ದೊಡ್ಡಮೋಳೆ ಸೇರಿದಂತೆ ಇತರೆ ಹಲವು ಗ್ರಾಮಗಳಲ್ಲಿ ಧಾರಾಕಾರ ಮಳೆ ಸುರಿಯಿತು. ದಿಢೀರನೆ ಬಂದ ಮಳೆಯಿಂದಾಗಿ ಕೂಲಿ ಕಾರ್ಮಿಕರಿಗೆ ಅಡ್ಡಿಯಾಯಿತು. ಕಳೆದ ಹಲವು ದಿನಗಳಿಂದಲೂ ಮಳೆ ಇಲ್ಲದೇ ಪರಿತಪಿಸಿದ್ದ ಜನರ ಮೊಗದಲ್ಲಿ ಮಂದಹಾಸ ಮೂಡಿಸಿತು. ವಿವಿಧ ಗ್ರಾಮಗಳಿಂದ ನಗರಕ್ಕೆ ಆಗಮಿಸಿದ್ದ ಜನರು ಮಳೆಯಿಂದಾಗಿ ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ನಿರಂತರವಾಗಿ ಸುರಿದ ಮಳೆಯಿಂದಾಗಿ ನಗರದ ಡಿವಿಯೇಷನ್ ರಸ್ತೆ, ಬಿ.ರಾಚಯ್ಯ ಜೋಡಿರಸ್ತೆ, ಪಚ್ಚಪ್ಪ ವೃತ್ತಗಳು ವಾಹನಗಳಿಲ್ಲದೇ ಬಿಕೋ ಎನ್ನುತ್ತಿದ್ದವು. ಪ್ರಮುಖ ರಸ್ತೆಗಳು ಮಳೆಯ ನೀರಿನಿಂದ ಆವೃತ್ತವಾಗಿದ್ದವು.



## ರೈತರ ಮೊಗದಲ್ಲಿ ಹರ್ಷ

**ಮಳೆಯಿಲ್ಲದೇ ಬರಗಾಲದಿಂದಾಗಿ ಕಂಗೆಟ್ಟಿದ್ದ ರೈತರ ಮೊಗದಲ್ಲಿ ಮಳೆಯು ಹರ್ಷ ಮೂಡಿಸಿತು. ಶನಿವಾರ ಮಧ್ಯಾಹ್ನ ಚಾಮರಾಜನಗರ ಸೇರಿದಂತೆ ಸುತ್ತಮುತ್ತಲಿನ ಹಲವು ಗ್ರಾಮಗಳಲ್ಲಿ ಸುರಿದ ಮಳೆಯು ರೈತರ ಫಸಲಿಗೆ ಅನುಕೂಲಕರವಾಯಿತು. ಇದರಿಂದಾಗಿ ಮಳೆ ಆಶ್ರಿತ ಜಮೀನುಗಳ ಫಸಲಿಗೆ ಅನುಕೂಲವಾಗಿದ್ದು ರೈತರ ಕೂಡ ಖುಷಿಗೊಂಡಿದ್ದಾರೆ. ಕಳೆದ ಕೆಲ ದಿನಗಳಿಂದ ಆಗಾಗ್ಗೆ ಸುರಿಯುವ ಮಳೆಯಿಂದಾಗಿ ರೈತರು ಈಗಾಗಲೇ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದಾರೆ.**

## ಬಿರುಗಾಳಿ ಮಳೆಯಿಂದಾಗಿ ಅಪಾರ ಬೆಳೆ ನಷ್ಟ

# ಹೆದ್ದಾರಿ ಬಂದ್ ಚಳವಳಿ

**ಚಾಮರಾಜನಗರ:** ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ನೇತೃತ್ವದಲ್ಲಿ ಚಾಮರಾಜನಗರದ ಸತ್ಯಮಂಗಲಂ ಮುಖ್ಯ ರಸ್ತೆಯಲ್ಲಿ ಸೇರಿದರು.

ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಾ ರಾಷ್ಟ್ರೀಯ ಹೆದ್ದಾರಿಯನ್ನು ಬಂದ್ ಮಾಡಿದರು.

ನಂತರ ಮಾತನಾಡಿದ ರಾಜ್ಯಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮೈಸೂರು ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ ಸುಮಾರು ಒಂದೂವರೆ ಲಕ್ಷಕ್ಕಿಂತ ಹೆಚ್ಚು ಹೆಕ್ಟರ್ ಪ್ರದೇಶ ತೀವ್ರ ಬಿರುಗಾಳಿಯಿಂದ ನಾಶವಾಗಿದೆ ಅಧಿಕಾರಿಗಳು ಗ್ರಾಮೀಣ ಭಾಗದಲ್ಲಿ ರೈತರ ಸಮಸ್ಯೆಗಳನ್ನು ಆಲಿಸುವಲ್ಲಿ ಹಾಗೂ ಚುನಾಯಿತ ಪ್ರತಿನಿಧಿಗಳು ಚುನಾವಣಾ ನೀತಿ ಸಂಹಿತೆಯನ್ನು ರೈತರ ಬೆಳೆ ನಷ್ಟ ಅಂದಾಜು ಮಾಡುವಲ್ಲಿ ವಿಫಲರಾಗಿದ್ದಾರೆ ಎಂದರು.

ಚಾಮರಾಜನಗರ ಜಿಲ್ಲೆಯಲ್ಲಿ ರೈತರ ಪರವಾಗಿ ಮಾತನಾಡುತ್ತಿಲ್ಲ ನಷ್ಟ ಹೊಂದಿರುವ ಬೆಳೆ ಸಮೀಕ್ಷೆಯ ಬಗ್ಗೆ ಪ್ರತಿನಿಧಿಗಳು ಹಾಗೂ ಜಿಲ್ಲಾಡಳಿತ ನೊಂದ ರೈತರಿಗೆ ವಿಶೇಷ ಪ್ಯಾಕೇಜ್ ಘೋಷಿಸಲು ಸರ್ಕಾರದ ಹಂತದಲ್ಲಿ ವಿಫಲರಾಗಿದ್ದಾರೆ. ರೈತರು ಜಾಗೃತರಾಗಿ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡಬೇಕು ಮುಂದಿನ ದಿನಗಳಲ್ಲಿ ಸರ್ಕಾರಕ್ಕೆ ಜಿಲ್ಲಾಡಳಿತ ಸಮರ್ಪಕ ವರದಿಯನ್ನು ತಯಾರಿಸಿ ವಿಶೇಷ ಪ್ಯಾಕೇಜಿಗೆ ವರದಿ ಸಲ್ಲಿಸಬೇಕು. ಜಿಲ್ಲಾ ಮಂತ್ರಿಗಳು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಈ ಜವಾಬ್ದಾರಿಯನ್ನು ತೆಗೆದುಕೊಂಡು ಸಂಬಂಧಪಟ್ಟ ಸಚಿವರ ಜೊತೆ ಮುಖ್ಯಮಂತ್ರಿಗಳ ಜೊತೆ ರೈತರಿಗೆ



ನ್ಯಾಯ ಕೊಡಿಸುವಲ್ಲಿ ಕ್ರಮಕೈಗೊಳ್ಳಬೇಕು ಹಾಗೂ ಪ್ರತಿ ಎಕರೆಗೆ ಸುಮಾರು ಒಂದು ಲಕ್ಷ ರೂಪಾಯಿನಷ್ಟು ಬೆಳೆ ನಷ್ಟ ನೀಡಬೇಕು ಪ್ರಕೃತಿ ವಿಕೋಪದ ಅಡಿಯಲ್ಲಿ ಪ್ರತಿ ಎಕರೆಗೆ 6800 ರೂಪಾಯಿ ನೀಡುವ ಮಾನದಂಡವನ್ನು ಬದಲಿಸಬೇಕು ಎಂದರು.

ಚಾಮರಾಜನಗರ ಜಿಲ್ಲೆಯಲ್ಲಿ ಬರ ಪರಿಹಾರ ವಿತರಣೆಯಲ್ಲಿ ಶರತ್ತುಗಳನ್ನು ಹಾಕಿ ರೈತರಿಗೆ ಪರಿಹಾರ ನೀಡುವಲ್ಲಿ ತಾರತಮ್ಯವಾಗುತ್ತಿದೆ. ನಿರ್ದಿಷ್ಟ ಬೆಳೆಗಳಿಗೆ ಮಾತ್ರ ಹೋಬಳಿವಾರು ಬೆಳೆ ನಷ್ಟ ನೀಡುತ್ತಿರುವುದು ನೊಂದ ರೈತರಿಗೆ ಬೆಳೆ ನಷ್ಟ ಸಿಗುತ್ತಿಲ್ಲ. ಆದುದರಿಂದ ಯಾವುದೇ ತಾರತಮ್ಯ ಶರತ್ತುಗಳಿಲ್ಲದೆ ಬರ ಪರಿಹಾರವನ್ನು ಎಲ್ಲರಿಗೂ ಹಂಚಬೇಕು ಎಂದರು. ಹಾಗೂ ಹೊಸ ಕೃಷಿ ಪಂಪ್‌ಸೆಟ್ಟುಗಳಿಗೆ ಅಕ್ರಮ ಸಕ್ರಮ ಯೋಜನೆಯನ್ನು ಮರು ಜಾರಿ ಮಾಡಬೇಕು. ರಾಜ್ಯ ಸರ್ಕಾರ ಬರದಲ್ಲಿ ನೊಂದಿರುವ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ 10 ರೂಪಾಯಿ ಹೆಚ್ಚುವರಿ ಪ್ರೋತ್ಸಾಹ ಧನ ನೀಡಬೇಕು. ಸಮರ್ಪಕವಾಗಿ 10 ಗಂಟೆ ಹಗಲು ವೇಳೆ ವಿದ್ಯುತ್ ನೀಡಬೇಕು. ರಾಷ್ಟ್ರೀಕೃತ ಮತ್ತು ಖಾಸಗಿ ಬ್ಯಾಂಕ್‌ಗಳು ಕೃಷಿಗೆ ಸಾಲವನ್ನು ನೀಡಿ ಸಾಲದ ಮೊತ್ತಕ್ಕೆ ಟ್ರ್ಯಾಕ್ಟರ್ ಮತ್ತು ಮತ್ತಿತರ ಕೃಷಿ ಯಂತ್ರೋಪಕರಣಗಳನ್ನು ಜಪ್ತಿ ಮಾಡಿ ನಂತರ ಹೊರ ರಾಜ್ಯಗಳಲ್ಲಿ ಪ್ರಕರಣ ದಾಖಲಿಸಿ ನೀಡಬೇಕು ಹಾಗೂ ಕೃಷಿ ಸಂಬಂಧಿತ ಸಾಲಕ್ಕೆ ಸಿವಿಲ್ ಸ್ಕೋರ್ ಪರಿಗಣನೆಯನ್ನು ಕೈಬಿಡಬೇಕು ಹಾಗೂ ಕಬ್ಬು ಬೆಳೆಗಾರರಿಗೆ ಬರಬೇಕಾದ 900 ಕೋಟಿ ರೂಗಳನ್ನು ಲಾಭಾಂಶವನ್ನು ರೈತರಿಗೆ ಹಂಚಿಕೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷರಾದ ಹಾಲಿನ ನಾಗರಾಜ್, ರಾಜ್ಯ ಪ್ರಧಾನ ಕಾರ್ಯದರ್ಶಿ ಮಲಿಯೂರು ಹರ್ಷ, ರವಿ ಅರಳಿಕಟ್ಟೆ, ಕುಮಾರ್ ಉಡಿಗಾಲ, ಮಂಜುನಾಥ್, ಗುರುಮಲ್ಲಪ್ಪ, ಮಹದೇವಸ್ವಾಮಿ, ಚೇರ್ಮನ್ ಗುರು, ಮಾದೇಶ್, ಜಗ ರಾಜು, ಸೂರ್ಯ ಮಲೆಯೂರು, ಬಸವರಾಜಪ್ಪ, ಮಹೇಂದ್ರ, ಸತೀಶ್, ಅರಳಿ ಕಟ್ಟೆ ಪ್ರಭುಸ್ವಾಮಿ, ಸಿದ್ದಲಿಂಗಪ್ಪ, ಸಿದ್ದಪ್ಪ ಮಹೇಶ ಮುದ್ದಳ್ಳಿ ಚಿಕ್ಕಸ್ವಾಮಿ ಸೇರಿದಂತೆ ಇನ್ನು ನೂರಾರು ಸಂಖ್ಯೆಯಲ್ಲಿ ರೈತರು ಪ್ರತಿಭಟನೆಯಲ್ಲಿ ಹಾಜರಿದ್ದರು.

# ಬಂಡಳ್ಳಿ ಬಾರ್‌ನಲ್ಲಿ ಕಳ್ಳತನ

**ಚಾಮರಾಜನಗರ:** ಚಾಮರಾಜನಗರ ಜಿಲ್ಲೆಯ ಹನೂರು ಪಟ್ಟಣದ ಬಂಡಳ್ಳಿ ಮುಖ್ಯ ರಸ್ತೆಯಲ್ಲಿರುವ ಬಾರ್ ಅಂಡ್ ರೆಸ್ಟೋರೆಂಟ್ ನಲ್ಲಿ ತಡ ರಾತ್ರಿ ಕಳ್ಳರ ತಂಡ ಮದ್ಯದ ಅಂಗಡಿಯ ಬೀಗ ಮುರಿದು ಸುಮಾರು 40 ರಿಂದ 50 ಸಾವಿರ ರೂ ಮೌಲ್ಯದ 60 ಲೀಟರ್ ಮದ್ಯ ಕಳ್ಳತನ ಮಾಡಿರುವ ಘಟನೆ ನಡೆದಿದೆ.

ಹನೂರು ಪಟ್ಟಣದ ವೈನ್ಸ್ ನ ಸಿ.ಸಿ.ಟಿವಿಯಲ್ಲಿ ವ್ಯಕ್ತಿಯೊಬ್ಬ ಮುಖಕ್ಕೆ ಬಟ್ಟೆಯನ್ನು ಕಟ್ಟಿಕೊಂಡು ಕಳ್ಳತನ ಮಾಡುತ್ತಿರುವುದು ಸೆರೆಯಾಗಿದ್ದೆ. ಬೆರಳಚ್ಚು ತಜ್ಞರ ತಂಡ, ಶ್ವಾನ ದಳ ಸ್ಥಳಕ್ಕೆ ಭೇಟಿ ನೀಡಿ ತಪಾಸಣೆ ನಡೆಸಿವೆ. ಪಿ.ಎಸ್.ಐ ರಿಹಾನ ಬೇಗಂ, ನಾಗೇಂದ್ರ, ನೂರ್ ಅಹಮದ್, ಕಲಿಲ್, ರಾಘವೇಂದ್ರ ಹಾಗೂ ಸಿಬ್ಬಂದಿ ವರ್ಗದವರು ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು ಕಳ್ಳರನ್ನು ಸೆರೆಹಿಡಿಯಲು ವಿಶೇಷ ತಂಡವನ್ನು ರಚಿಸಿದ್ದಾರೆ ಎಂದು ತಿಳಿದುಬಂದಿದೆ.



# ತೆಳ್ಳನೂರಿನಲ್ಲಿ ಅಯ್ಯಪ್ಪಸ್ವಾಮಿ ಮೆರವಣಿಗೆ



**ಸಂತೇಮರಹಳ್ಳಿ :** ಸಮೀಪದ ತೆಳ್ಳನೂರು ಗ್ರಾಮದಲ್ಲಿ ಅಯ್ಯಪ್ಪ ಸ್ವಾಮಿ ಭಕ್ತರಿಂದ ಶಬರಿಮಲೆ ಸ್ವಾಮಿ ಅಯ್ಯಪ್ಪ ಹಾಗೂ ಸುಬ್ರಮಣ್ಯ ಸ್ವಾಮಿ ಮೆರವಣಿಗೆ ನಡೆಯಿತು.

ದೇವರ ಭಾವಚಿತ್ರವನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯೊಂದಿಗೆ ದಾರಿಯುದ್ದಕ್ಕೂ ಅಯ್ಯಪ್ಪ ಸ್ವಾಮಿ ಭಜನೆ ಮಾಡುತ್ತಾ ಮನೆಮನೆಗೆ ತೆರಳಿ ಭಕ್ತಿಯಿಂದ ಪೂಜೆ ಸ್ವೀಕರಿಸಲಾಯಿತು.

ಈ ವೇಳೆ ಗ್ರಾಮದ ಮಹಿಳೆಯರು ಮನೆಗಳ ಮುಂದೆ ರಂಗೋಲಿ ಇಟ್ಟು ಬೀದಿಗಳನ್ನ ಶೃಂಗಾರ ಮಾಡಿದ್ದರು. ಮಹಿಳೆಯರು ಭಕ್ತರಿಗೆ ನಮಸ್ಕಾರ ಮಾಡಿ ತಮ್ಮ ಮನೆಗಳ ಮುಂದೆ ಬರಮಾಡಿಕೊಂಡರು. ಈ ಸಂದರ್ಭದಲ್ಲಿ ಸಾವಿರಾರು ಅಯ್ಯಪ್ಪ ಸ್ವಾಮಿ ಭಕ್ತರಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಗ್ರಾಮಸ್ಥರು ಭಕ್ತಿಯಿಂದ ದೇವರ ದರ್ಶನ ಪಡೆದು ಪುನೀತರಾದರು.

# ವೈದ್ಯಕೀಯ ಶಿಕ್ಷಣ ಕಾರ್ಯಾಗಾರ

**ಮೈಸೂರು:** ಜೆಎಸ್‌ಎಸ್ ಆಸ್ಪತ್ರೆಯ ಜೀವರಸಾಯನಶಾಸ್ತ್ರ ವಿಭಾಗ, ತಳಿಶಾಸ್ತ್ರ ವಿಭಾಗ, ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ಮತ್ತು ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಸಹಯೋಗದಲ್ಲಿ ಅನ್‌ಲಾಕಿಂಗ್ ಪ್ರೆಸಿಷನ್ ಮೆಡಿಸನ್ ಎಕ್ಸ್‌ಪ್ಲೋರಿಂಗ್ ಕ್ಲಿನಿಕಲ್ ಯುಟಿಲಿಟಿ ಆಫ್ ಎಲ್‌ಸಿ-ಎಂಎಸ್/ ಎಂ.ಎಸ್ ಇನ್ ಡೈಯೊಗ್ನೋಸಿಸ್ ಅಂಡ್ ಟ್ರೀಟ್‌ಮೆಂಟ್ ಕುರಿತ ಮುಂದುವರಿದ ವೈದ್ಯಕೀಯ ಶಿಕ್ಷಣ ಕಾರ್ಯಾಗಾರ ನಡೆಯಿತು.

ಕಾರ್ಯಕ್ರಮವನ್ನು ಜೆಎಸ್‌ಎಸ್ ಎಹೆಚ್ ಇಆರ್ ಕುಲಸಚಿವ ಡಾ.ಬಿ.ಮಂಜುನಾಥ್ ಉದ್ಘಾಟಿಸಿದರು. ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ ಕಂಕಣ ಜನಾ, ಪ್ರೊ.ಕನೂರಿ ವಿ.ಎಸ್. ರಾವ್, ಡಾ.ಶ್ವೇತ.ವಿ, ಪ್ರೊ.ಉತ್ಪಲ್ ಎಸ್.ತಾತು, ಡಾ.ಆಲ್ಪಾ ಜೆ.ಧೇರಾಯಿ, ಡಾ.ದೀಪಭಟ್ ಹಾಗೂ ಸಾರ್ಥಕ ಗುಪ್ತ ಇವರುಗಳು ಎಲ್ ಸಿ-ಎಂಎಸ್, ಎಂ.ಎಸ್ ತಂತ್ರಜ್ಞಾನದ ವಿವಿಧ ಪ್ರಯೋಗಗಳು ಹಾಗೂ ಉಪಯುಕ್ತತೆಗಳ ಬಗ್ಗೆ ಮಾಹಿತಿ ನೀಡಿ ಚಿಕಿತ್ಸಕ ಡ್ರಗ್ ಮಾನಿಟರಿಂಗ್, ಕ್ಯಾನ್ಸರ್ ಪತ್ತೆ ಬಯೋಮಾರ್ಕರ್ ಆವಿಷ್ಕಾರ, ನವಜಾತ ಶಿಶುವಿನ ವಿಸ್ತರಿಸಿದ ಸ್ಕ್ರೀನಿಂಗ್ ಕಾರ್ಯಕ್ರಮ, ತಳಿಶಾಸ್ತ್ರ ಮತ್ತು ವಂಶವಾಹಿ



ಶಾಸ್ತ್ರಕ್ಕೆ ಸಂಬಂಧಿಸಿದ ಆಪ್ತ ಸಮಾಲೋಚಕರ ಅಗತ್ಯೆಗಳ ಬಗ್ಗೆ ವಿಚಾರವಾದಗಳು ಈ ಕಾರ್ಯಕ್ರಮದಲ್ಲಿ ಚರ್ಚೆಗೊಳಪಟ್ಟು ಮತ್ತು ಅನೇಕ ಸಂದೇಹಗಳನ್ನು ನಿವಾರಣೆ ಮಾಡಿದರು.

ಜೆಎಸ್‌ಎಸ್ ಎಹೆಚ್‌ಇಆರ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ.ಪ್ರಶಾಂತ್ ವಿಶ್ವನಾಥ, ಜೆಎಸ್‌ಎಸ್ ಆಸ್ಪತ್ರೆಯ ಉಪನಿರ್ದೇಶಕ ಡಾ.ಜಿ.ವಿ.ಮಂಜುನಾಥ, ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಉಪಪ್ರಾಂಶುಪಾಲೆ ಡಾ.ಎಂ.ಎನ್. ಸುಮ, ಆಡಳಿತಾಧಿಕಾರಿ ಸತೀಶ್ ಚಂದ್ರ, ಜೀವರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಅಖಿಲಾ ಪ್ರಶಾಂತ್ ಉಪಸ್ಥಿತರಿದ್ದರು.

## ಆನೆ ದಾಳಿಗೆ ಬೆಳೆ ನಾಶ: ಬಾವಿಕಟ್ಟೆ ಗ್ರಾಮದ ರೈತ ಆತ್ಮಹತ್ಯೆ

**ಬೇಲೂರು:** ಸಾಲ ಮಾಡಿ ಕಷ್ಟಪಟ್ಟು ಬೆಳೆದಿದ್ದ ಶುಂಠಿ, ಜೋಳ ಸೇರಿದಂತೆ ವಿವಿಧ ಬೆಳೆಗಳನ್ನು ಕಾಡಾನೆಗಳ ಹಿಂಡು ತುಳಿದು ನಾಶ ಮಾಡಿದ ಪರಿಣಾಮ ಲಕ್ಷಾಂತರ ರೂ. ನಷ್ಟ ಉಂಟಾಗಿ ಮನನೊಂದ ನಮ್ಮ ತಂದೆ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತ ರೈತನ ಪುತ್ರ ಸುಚಿತ್ ನೊಂದು ನುಡಿದರು. ಬೇಲೂರು ತಾಲೂಕಿನ ಅರೇಹಳ್ಳಿ ಹೋಳಿಯ ಚಿಕ್ಕಸಾಲಾವರದ ಬಾವಿಕಟ್ಟೆ ಗ್ರಾಮದ 55 ವರ್ಷದ ರೈತ ಮಹೇಶ್‌ರವರು ಆನೆ ದಾಳಿ ಪರಿಣಾಮ ಬೆಳೆನಷ್ಟದಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡ ಹಿನ್ನಲೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿವಿಧ ಸಂಘ ಸಂಸ್ಥೆ, ಬ್ಯಾಂಕ್ ಹಾಗೂ ಖಾಸಗಿ ವ್ಯಕ್ತಿಗಳಿಂದ ಕೈಸಾಲ ಪಡೆದು ತಮ್ಮ ಒಂದೂವರೆ ಎಕರೆ ಜಮೀನಿನಲ್ಲಿ



ಶುಂಠಿ, ಜೋಳದಂತಹ ಬೆಳೆಯನ್ನು ಬೆಳೆದಿದ್ದರು. ಹಲವಾರು ದಿನಗಳಿಂದ ಬೀಡುಬಿಟ್ಟಿರುವ ಕಾಡಾನೆಗಳ ಹಿಂಡು ಬುಧವಾರ ರಾತ್ರಿ ನಮ್ಮ ಜಮೀನಿಗೆ ದಾಳಿ ಮಾಡಿ ಕಷ್ಟ ಪಟ್ಟು ಬೆಳೆದಿದ್ದ ಬೆಳೆಯನ್ನು ತುಳಿದು ನಾಶ ಮಾಡಿದೆ. ಹೀಗಾಗಿ ಮಾಡಿದ್ದ ಸಾಲವನ್ನು ತೀರಿಸುವುದು ಹೇಗೆ ಚಿಂತೆಯಲ್ಲಿ ಬೇಸರದಿಂದ ಮನೆಗೆ ಬಂದು ಕ್ರಿಮಿನಾಶಕವನ್ನು ಸೇವಿಸಿದ ಹಿನ್ನಲೆಯಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಹಾಸನ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದರೂ ಸಹ ಚಿಕಿತ್ಸೆ ಫಲಕಾರಿಯಾದೆ ಮೃತಪಟ್ಟಿದ್ದಾರೆ ಎಂದರು. ಮೃತರ ಸಂಬಂಧಿ ಶಿವಕುಮಾರ್ ಮಾತನಾಡಿ, ಕಾಡಾನೆಗಳು ಈ ಭಾಗಕ್ಕೆ ಬಂದು ಹಲವಾರು ದಿನಗಳು ಕಳೆದಿವೆ. ಆದರೆ ಆನೆ ಕಾರ್ಯಪಡೆ ತಂಡ ಹಾಗೂ ಅರಣ್ಯ ಇಲಾಖೆಯವರು ಆನೆಗಳನ್ನು ಬೇರೆಡೆಗೆ ಓಡಿಸಲು ಸಾಧ್ಯವಾಗಿಲ್ಲ. ಈ ಕಾರಣದಿಂದಾಗಿ ಆನೆಗಳಿಗೆ ಹೆದರಿ ಕೂಲಿ ಕಾರ್ಮಿಕರು ತೋಟಗಳಿಗೆ ಬಂದು ಕೆಲಸ ಮಾಡಲು ಭಯಪಡುತ್ತಾರೆ. ಬೇಲೂರು ಶಾಸಕರು, ಅರಣ್ಯ ಇಲಾಖೆಯ ಅಧಿಕಾರಿಗಳು ಬೆಳೆ ಹಾನಿಯಿಂದ ಲಕ್ಷಾಂತರ ರೂ. ನಷ್ಟವುಂಟಾಗಿ ಮನನೊಂದು ಮೃತಪಟ್ಟ ಮಹೇಶ್ರವರ ಬಡಕುಟುಂಬಕ್ಕೆ ಸೂಕ್ತ ಪರಿಹಾರವನ್ನು ಒದಗಿಸಿಕೊಡಬೇಕೆಂದು ಮನವಿ ಮಾಡುವುದಾಗಿ ತಿಳಿಸಿದರು. ಈ ವೇಳೆ ಮಂಜುನಾಥ್, ಗೋಪಾಲ್, ಪ್ರಕಾಶ್, ಭರತ್, ಹರೀಶ್, ರುದ್ರೇಶ್, ಕುಮಾರ್, ಸುರೇಶ್ ಹಾಗೂ ಇನ್ನಿತರ ಸಂಬಂಧಿಕರು ಇದ್ದರು.

## ಎಸ್‌ಎಸ್‌ಎಲ್‌ಸಿಯಲ್ಲಿ ಸಾಧನೆ

**ಯಳಂದೂರು:** ತಾಲೂಕಿನ ಬನ್ನಿಸಾರಿಗೆ ಗ್ರಾಮದ ಎನ್. ಮಹದೇವಸ್ವಾಮಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 609 ಅಂಕಗಳನ್ನು ಗಳಿಸುವ ಮೂಲಕ ಉತ್ತಮ ಸಾಧನೆಯನ್ನು



ಮಾಡಿದ್ದಾರೆ. ಲಿಂಗರಾಜು, ಜಯ ಎಂಬುವವರ ಪುತ್ರರಾದ ಇವರು ಸೂರಾಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ಈತ ವ್ಯಾಸಂಗ ಮಾಡುತ್ತಿದ್ದ ಗಾರೆ ಕೆಲಸ ಮಾಡುವ ಇವರ ತಂದೆಯೇ ಈತನಿಗೆ ಪ್ರೇರಣೆಯಾಗಿದ್ದು ಕಷ್ಟಪಟ್ಟು ಪರೀಕ್ಷೆಯಲ್ಲಿ ವ್ಯಾಸಂಗ ಮಾಡಿ ಸರ್ಕಾರಿ ನೌಕರಿ ಗಿಟ್ಟಿಸಿ ನಮ್ಮ ಮನೆಯವರಿಗೆ ನೆರವಾಗಬೇಕೆಂಬ ಉದ್ದೇಶದಿಂದ ಈತ ಸತತ ಅಭ್ಯಾಸ ಮಾಡಿ 609 ಅಂಕಗಳನ್ನು ಗಳಿಸಿದ್ದಾನೆ. ಈತನ ಈ ಸಾಧನೆಗೆ ಶಾಲೆಯ ಸಿಬ್ಬಂಧಿ, ಈತನ ಸಂಬಂಧಿಕರು ಹಾಗೂ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಡಿಪ್ಲೋಮಾ ಪ್ರವೇಶಕ್ಕೆ ಅರ್ಜಿ

**ಕೋಲಾರ:** 2024-25ನೇ ಶೈಕ್ಷಣಿಕ ಸಾಲಿನ ಪ್ರಥಮ ವ?ದ ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧ ಆಫ್‌ಲೈನ್ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಿದೆ. ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ಕಾಂತರಾಜ ಸರ್ಕಲ್ ಬಳಿ ಇರುವ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ವಿವಿಧ ಡಿಪ್ಲೋಮಾ ಕೋರ್ಸ್‌ಗಳ ಪ್ರವೇಶ ಸಂಬಂಧ ''ಆಫ್ ಲೈನ್'' ಪ್ರವೇಶಾತಿ ಸಂಬಂಧ ದಿನಾಂಕ 09-05-2024 ರಿಂದ ದಿನಾಂಕ 14-05-2024 ಸಂಜೆ. 5.30ರವರೆಗೆ ಅರ್ಜಿಯನ್ನು ಸಲ್ಲಿಸಿ ದಿನಾಂಕ.15-04-2024 ಮತ್ತು 16-05-2024 ರಂದು ಪ್ರವೇಶ ಪಡೆಯಬಹುದು ಎಂದು ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ. ಎಸ್.ಎಸ್. ಎಲ್.ಸಿ ಉತ್ತೀರ್ಣ ಅಥವಾ ಪಿ.ಯು.ಸಿ ಉತ್ತೀರ್ಣ/ ಅನುತೀರ್ಣ ವಿದ್ಯಾರ್ಥಿಗಳು ಪ್ರವೇಶ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಪ್ರಾಚಾರ್ಯರ ಮೊಬೈಲ್ ಸಂಖ್ಯೆ 9449179512, ಯಾಂತ್ರಿಕ ವಿಭಾಗಾಧಿಕಾರಿಗಳ ಮೊಬೈಲ್ ಸಂಖ್ಯೆ 9449179512, ವಿದ್ಯುತ್ ವಿಭಾಗಾಧಿಕಾರಿಯವರ ಮೊಬೈಲ್ ಸಂಖ್ಯೆ 9632117987, ರಿಜಿಸ್ಟಾರ್ ರವರ ಮೊಬೈಲ್ ಸಂಖ್ಯೆ 7676364748, ಎನ್.ಮುನಿರಾಜು ಮೊಬೈಲ್ ಸಂಖ್ಯೆ 9113815209 ಮತ್ತು ಕಛೇರಿ ಸಿಬ್ಬಂದಿ ಮೊಬೈಲ್ ಸಂಖ್ಯೆ 9742671293 ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

## ಗುತ್ತಿಗೆದಾರ ದಕ್ಷರಿ ನಿಧನ

**ಚಾಮರಾಜನಗರ:** ಚಾಮರಾಜನಗರ ತಾಲ್ಲೂಕಿನ ವೆಂಕಟಯ್ಯನ ಛತ್ರ ಹೊಸೂರಿನ ವಿದ್ಯುತ್ ಗುತ್ತಿಗೆದಾರರು ಹಾಗೂ ಪಾರ್ವತಿ



ಎಲೆಕ್ಟ್ರಿಕಲ್ಸ್ ಮಾಲೀಕ ಎಚ್.ಎಂ.ದಕ್ಷರಿ (75) ಶನಿವಾರ ಬೆಳಗಿನ ಜಾವ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ ಯೋಗೇಶ್ವರಿ, ಪುತ್ರ ಉದ್ಯಮಿ ಎಚ್.ಡಿ.ಪ್ರತಾಪ್, ಸೊಸೆ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷೆ ನಾಗಶ್ರೀಪ್ರತಾಪ್, ಪುತ್ರಿ ಕುಮಾರಿ, ಅಳಿಯ ಆರ್ ಟಿ ಒ ಅಧಿಕಾರಿ ಯೋಗೇಶ್ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ, ಮೃತರ ಅಂತ್ಯಕ್ರಿಯೆ ಶನಿವಾರ ಸಂಜೆ ಸ್ವಗ್ರಾಮ ವಿ.ಸಿ.ಹೊಸೂರಿನ ಅವರ ತೋಟದಲ್ಲಿ ನಡೆಯಿತು.



**ಚಿಕ್ಕನಾಯಕನಹಳ್ಳಿ ತಾಲೂಕು ಹುಳಿಯಾರು ಹೋಬಳಿಯ ಯಳನಾಡು ಗ್ರಾಮದ ಶ್ರೀ ಗಜಲಕ್ಷ್ಮೀ ದೇವಸ್ಥಾನದ ನೂತನ ಶಿಲಾ ವಿಗ್ರಹ ಪ್ರತಿಷ್ಠಾಪನೆ ಮತ್ತು ಕಳಶಾರೋಹಣ ಮಹೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ ಕೈಂಕರ್ಯಗಳನ್ನು ನೆರವೇರಿಸಲಾಯಿತು.**

## ನಾಲ್ಕು ಜಿಲ್ಲೆಗಳ ಅಧ್ಯಕ್ಷರು ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡಿ: ತನ್ವೀರ್‌ಸೇಠ್

# ದಕ್ಷಿಣ ಶಿಕ್ಷಕರ ಕ್ಷೇತ್ರ ಚುನಾವಣೆ: ಗೆಲುವಿಗೆ ಶ್ರಮಿಸಿ

**ಮೈಸೂರು:** ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಎಲ್ಲರೂ ಶ್ರಮಿಸಬೇಕು. ಪ್ರತೀ ಬ್ಲಾಕ್ ಮಟ್ಟದಲ್ಲಿಯೂ ಎಲ್ಲಾ ಶಾಸಕರು ಮತ್ತು ಮುಖಂಡರು ಕೆಲಸ ಮಾಡಬೇಕು ಎಂದು ಶಾಸಕ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಹೇಳಿದರು.

ನಗರದ ಕಾಂಗ್ರೆಸ್ ಭವನದಲ್ಲಿ ಶನಿವಾರ ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ವತಿಯಿಂದ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಸಂಬಂಧ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ನಾಲ್ಕು ಜಿಲ್ಲೆಯ ವ್ಯಾಪ್ತಿಯಲ್ಲಿ ನಡೆಯಲಿರುವ ಈ ಚುನಾವಣೆಗೆ ಪ್ರತಿ ಬ್ಲಾಕ್ ಮಟ್ಟದಲ್ಲಿ ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ಶ್ರಮಿಸಬೇಕು ಎಂದರು.

ಈಗಾಗಲೇ ನಮ್ಮ ಅಭ್ಯರ್ಥಿಯಾದ ಮರಿತಿಬ್ಬೇಗೌಡರು ಶಿಕ್ಷಕ ಮತ್ತು ಪದವೀಧರರ ಸಮಸ್ಯೆಗಳಿಗೆ ಸ್ಪಂದಿಸಿ ಉತ್ತಮ ಕೆಲಸ ಮಾಡಿದ್ದಾರೆ. ಐದು ಬಾರಿ ಚುನಾವಣೆ ಎದುರಿಸಿ ಅನುಭವ ಹೊಂದಿದ್ದಾರೆ ಅವರನ್ನು ಗೆಲ್ಲಿಸುವ ಕೆಲಸ ಮಾಡಬೇಕಿದೆ ಎಂದರು.

ನನ್ನ ಕ್ಷೇತ್ರದಲ್ಲಿ ಪ್ರತೀ ಕಾರ್ಯಕರ್ತರಿಗೆ ಪಟ್ಟಿ ಕೊಟ್ಟು ಅವರೇ ಮತದಾರರನ್ನು ಕರೆದುಕೊಂಡು ಬಂದು ಮತದಾನ ಮಾಡಿಸಬೇಕು. ಶಿಕ್ಷಕರಿಗೆ ರಜೆ ಇರುವುದರಿಂದ ಈಗಿನಿಂದಲೇ ಜವಾಬ್ದಾರಿ ತೆಗೆದುಕೊಂಡು ನಾಲ್ಕು ಜಿಲ್ಲಾಧ್ಯಕ್ಷರು ಈ ಕೆಲಸ



ಮಾಡಬೇಕು ಎಂದು ಸಲಹೆ ನೀಡಿದರು.

ಈ ಚುನಾವಣೆಯಲ್ಲಿ ಪ್ರಜ್ಞಾವಂತ ಮತದಾರರು ಇದ್ದು, ಅವರ ಸಮಸ್ಯೆಗಳನ್ನು ಪರಿಹರಿಸುವ ಕೆಲಸವನ್ನು ಮುಖಂಡರು ಮಾಡಬೇಕು. ಶಿಕ್ಷಕ ಮತದಾರರ ಪಟ್ಟಿ ಪಡೆದು ಮೊಬೈಲ್ ಅಥವಾ ವಾಟ್ಸಾಪ್ ಮೂಲಕ ಮತದಾರರನ್ನು ಸಂಪರ್ಕ ಮಾಡುವ ಕೆಲಸ ಮಾಡಬೇಕು ಎಂದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ದಕ್ಷಿಣ ಶಿಕ್ಷಕರ ಕ್ಷೇತ್ರ ಸೇರಿದಂತೆ ವಿಧಾನ ಪರಿಷತ್‌ನ ಆರು ಕ್ಷೇತ್ರಗಳಲ್ಲಿಯೂ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಬೇಕು. ಕಾಂಗ್ರೆಸ್ ಪಕ್ಷ ವಿಧಾನ ಪರಿಷತ್ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ಎಲ್ಲಾ ಕ್ಷೇತ್ರಗಳಲ್ಲಿಯೂ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಆರರಲ್ಲಿ ಕನಿಷ್ಠ ಐದು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದರೆ ಕಾಂಗ್ರೆಸ್ ಸರ್ಕಾರಕ್ಕೆ ಕಾನೂನು ರಚನೆಗೆ ಅನುಕೂಲವಾಗಲಿದೆ ಎಂದರು.

ಈ ಬಾರಿ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿರುವ ಮರಿತೀಬ್ಬೇಗೌಡ ಅವರ ವಿರುದ್ಧ ನಾನೇ ಸ್ಪರ್ಧಿಸಿ, ಕಡಿಮೆ ಮತಗಳ ಅಂತರದಿಂದ ಸೋಲು ಕಂಡಿದ್ದೆ. ಈಗ ಅವರೇ ನಮ್ಮ ಪಕ್ಷದ ಅಭ್ಯರ್ಥಿಯಾಗಿರುವುದರಿಂದ ಅವರಿಗೆ ನಮ್ಮ ಸಂಪೂರ್ಣ ಬೆಂಬಲ ಇದೆ ಎಂದು ಹೇಳಿದರು.

ಕ್ಷೇತ್ರ ವ್ಯಾಪ್ತಿಯಲ್ಲಿರುವ ಎಲ್ಲಾ ಕಾಂಗ್ರೆಸ್ ಶಾಸಕರು ಜವಾಬ್ದಾರಿ ತೆಗೆದುಕೊಂಡು ಪಕ್ಷದ ಅಭ್ಯರ್ಥಿಯ ಗೆಲುವಿಗೆ ಶ್ರಮಿಸಬೇಕು. ಪಕ್ಷದ ಅಭ್ಯರ್ಥಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಬೇಕು ಎಂದು ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು, ಶಿಕ್ಷಕರ ಮತದಾರರಲ್ಲಿ ಮನವಿ ಮಾಡಬೇಕು ಎಂದರು.

ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಇದುವರೆವಿಗೂ ವಿಧಾನ ಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರ ಕಾಂಗ್ರೆಸ್ ಪಕ್ಷಕ್ಕೆ ಸಿಕ್ಕಿಲ್ಲ. ಹೀಗಾಗಿ ಈ ಬಾರಿಯ ಚುನಾವಣೆಯನ್ನು ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ಗಂಭೀರವಾಗಿ ಪರಿಗಣಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಕಾಂಗ್ರೆಸ್ ಅಭ್ಯರ್ಥಿ ಮರಿತೀಬ್ಬೇಗೌಡ, ಶಾಸಕ ಕೆ. ಹರೀಶ್ ಗೌಡ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ನಗರಾಧ್ಯಕ್ಷ ಆರ್. ಮೂರ್ತಿ ಸೇರಿದಂತೆ ಜಿಲ್ಲೆಯ ನಾಯಕರು ಮತ್ತು ಮುಖಂಡರು ಇದ್ದರು.

# ಸಂಜೆ ಟಿಪ್ಸ್



## ಡಿಸ್ನಿ ಜೊತೆ ಸಹಯೋಗ ಮಾಡಿಕೊಂಡ ಡಾಬರ್ ಹರ್ಬ್‌ಲ್

ಡಾಬರ್ ಸಂಸ್ಥೆಯ ಪ್ರೀಮಿಯಂ ಟೂತ್‌ಪೇಸ್ಟ್ ಬ್ರ್ಯಾಂಡ್ ಆಗಿರುವ ಡಾಬರ್ ಹರ್ಬ್'ಲ್ ಚಾರ್ ಕೋಲ್, ಡಿಸ್ನಿಯ ಸ್ಟಾರ್ ವಾರ್ಸ್ ಫ್ರಾಂಚೈಸಿಯೊಂದಿಗೆ ಸಹಯೋಗ ಮಾಡಿಕೊಂಡಿರುವುದಾಗಿ ಇಂದು ಪ್ರಕಟಿಸಿದೆ. ಡಾಬರ್ ಹರ್ಬ್'ಲ್ ನ ಜನಪ್ರಿಯವಾದ ಆಕ್ಟಿವೇಟೆಡ್ ಚಾರ್ ಕೋಲ್ ಟೂತ್‌ಪೇಸ್ಟ್ ಗಾಗಿ ಈ ಸೀಮಿತ ಆವೃತ್ತಿಯ ಸ್ಟಾರ್ ವಾರ್ಸ್ ಪ್ಯಾಕ್ ಅನ್ನು ಬಿಡುಗಡೆ ಮಾಡುವ ಉದ್ದೇಶದಿಂದ ಈ ಎರಡು ದೊಡ್ಡ ಬ್ರ್ಯಾಂಡ್‌ಗಳು ಒಗ್ಗೂಡಿವೆ. ಹಲ್ಲುಗಳನ್ನು ಬಿಳಿ ಮಾಡುವ ಅಂಶಗಳನ್ನು ಹೊಂದಿರುವ ಡಾಬರ್ ಹರ್ಬ್'ಲ್ ಆಕ್ಟಿವೇಟೆಡ್ ಚಾರ್ಕೋಲ್ ಟೂತ್‌ಪೇಸ್ಟ್ ಮತ್ತು ಕಾಲಾತೀತ ಆಕರ್ಷಣೆ ಹೊಂದಿರುವ ಸ್ಟಾರ್ ವಾರ್ಸ್ ಅನ್ನು ಈ ಸಹಯೋಗವು ಜೊತೆಗೂಡಿಸಿದ್ದು, ಆ ಮೂಲಕ ಯುವ ಜನತೆಯ ಗಮನ ಸೆಳೆಯಲಿದೆ ಮತ್ತು ಮೌಖಿಕ ಆರೈಕೆಯನ್ನು ಖುಷಿಯ ಅನುಭವವನ್ನಾಗಿ ಮಾಡಲಿದೆ.''ಇದು ವಯಸ್ಕರ ಟೂತ್‌ಪೇಸ್ಟ್ ವಿಭಾಗದಲ್ಲಿನ ಮೊದಲ ಸಹಯೋಗವಾಗಿದ್ದು, ಸ್ಟಾರ್ ವಾರ್ಸ್ ಮತ್ತು ಡಾಬರ್ ಹರ್ಬ್'ಲ್ ಆಕ್ಟಿವೇಟೆಡ್ ಚಾರ್ಕೋಲ್ ಟೂತ್‌ಪೇಸ್ಟ್ ಅನ್ನು ಹತ್ತಿರ ತಂದಿದೆ. ಬಿಳಿ ಟೂತ್‌ಪೇಸ್ಟ್ ಉತ್ಪನ್ನಗಳೇ ತುಂಬಿರುವ ವಿಶ್ವದಲ್ಲಿ ಅದಕ್ಕಿಂತ ವಿಭಿನ್ನವಾಗಿರುವ #ChooseBlackForWhite (ಬಿಳಿಯ ಹಲ್ಲುಗಳಿಗಾಗಿ ಕಪ್ಪನ್ನು ಆರಿಸಿ) ಟೂತ್ ಪೇಸ್ಟ್ ಅನ್ನು ಹಲ್ಲುಗಳಿಗೆ ಬಳಸಲು ಜನರನ್ನು ಪ್ರಚೋದಿಸುವುದು ಇದರ ಉದ್ದೇಶವಾಗಿದೆ. ಈ ಸಹಯೋಗದ ಮೂಲಕ ಡಾಬರ್ ಹರ್ಬ್'ಲ್ ಆಕ್ಟಿವೇಟೆಡ್ ಚಾರ್ಕೋಲ್ ಅನ್ನು ವಿವಿಧ ಮತ್ತು ವಿಸ್ತಾರವಾದ ಜನರಿಗೆ ತಲುಪಿಸುವ ಉದ್ದೇಶ ಹೊಂದಲಾಗಿದೆ. 1 ವಾರದಲ್ಲಿ 1 ಹಂತದ ಬಿಳಿ ಹಲ್ಲುಗಳನ್ನು ಒದಗಿಸುತ್ತದೆ ಎಂದು ಪ್ರಾಯೋಗಿಕವಾಗಿ ಸಾಬೀತಾಗಿರುವ ಉತ್ಪನ್ನವು ಜನರಿಗೆ ಹೊಳೆಯುವ ಬಿಳಿ ಹಲ್ಲುಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ ಮತ್ತು ಆ ಮೂಲಕ ಜನರ ಮೌಖಿಕ ಆರೈಕೆ ಅನುಭವವನ್ನು ಉನ್ನತಗೊಳಿಸಲಿದೆ'' ಎಂದು ಡಾಬರ್ ಇಂಡಿಯಾ ಲಿಮಿಟೆಡ್ನ ಮಾರ್ಕೆಟಿಂಗ್ನ ಕಾರ್ಯನಿರ್ವಾಹಕ ಉಪಾಧ್ಯಕ್ಷರಾದ ಶ್ರೀ ಅಭಿಷೇಕ್ ಜುಗ್ರಾನ್ ಹೇಳಿದರು.

## ತೊಂಡೆಕಾಯಿ ಫ್ರೈ

### ಪಾಕ ಶಾಲೆ



### ಬೇಕಾಗಿರುವ ಪದಾರ್ಥ

**ತೊಂಡೆಕಾಯಿ - 1/2 ಕೆಜಿ, ಉಪ್ಪು - ರುಚಿಗೆ ತಕ್ಕಷ್ಟು, ಕೊತ್ತಂಬರಿ ಸೊಪ್ಪು - ಸ್ವಲ್ಪ, ಒಣ ಕೊಬ್ಬರಿ ಪುಡಿ - 2 ಟೇಬಲ್ ಸ್ಪೂನ್, ಎಳ್ಳು - 1 ಳ ಟೇಬಲ್ ಸ್ಪೂನ್, ಕೊತ್ತಂಬರಿ ಬೀಜ - 1 ಳ ಟೇಬಲ್ ಸ್ಪೂನ್, ಜೀರಿಗೆ - 1/2 ಟೀ ಸ್ಪೂನ್, ಒಣಮೆಣಸು - 3, ಕಡಲೆಬೇಳೆ - 2 ಟೇಬಲ್ ಸ್ಪೂನ್, ಇನ್ನು ಒಗ್ಗರಣೆಗೆ - ಸಾಸಿವೆ-1/2 ಟೀ ಸ್ಪೂನ್, ಇಂಗು - 1/4 ಟೀ ಸ್ಪೂನ್, ಕರಿಬೇವು - 6 ಎಸಳು.**

### ಮಾಡುವ ವಿಧಾನ

ಮೊದಲಿಗೆ ತೊಂಡೆಕಾಯಿಯನ್ನು ಚೆನ್ನಾಗಿ ತೊಳೆದು ಅದನ್ನು ನಾಲ್ಕು ಭಾಗವಾಗಿ ಉದ್ದಕ್ಕೆ ಸೀಳಿಕೊಳ್ಳಿ. ನಂತರ ಗ್ಯಾಸ್ ಮೇಲೆ ಒಂದು ಪ್ಯಾನ್ ಇಟ್ಟು ಅದಕ್ಕೆ 1 ಟೀ ಸ್ಪೂನ್ ಎಣ್ಣೆ ಹಾಕಿ ನಂತರ ಕೊತ್ತಂಬರಿ ಬೀಜ, ಜೀರಿಗೆ, ಕಡಲೆಬೇಳೆ ಹಾಕಿ 4 ನಿಮಿಷಗಳ ಕಾಲ ಹುರಿದುಕೊಂಡು ಒಂದು ಪ್ಲೇಟ್ ಗೆ ತೆಗೆದುಕೊಳ್ಳಿ. ನಂತರ ಅದೇ ಪ್ಯಾನ್ ಗೆ ಒಣಮೆಣಸು, ಎಳ್ಳು ಹಾಕಿ 2 ನಿಮಿಷಗಳ ಕಾಲ ಫ್ರೈ ಮಾಡಿಕೊಂಡು ಗ್ಯಾಸ್ ಆಫ್ ಮಾಡಿ.ನಂತರ ಒಂದು ಮಿಕ್ಸಿ ಜಾರಿಗೆ ಕೊತ್ತಂಬರಿ ಬೀಜ, ಜೀರಿಗೆ, ಕಡಲೆಬೇಳೆ, ಒಣಮೆಣಸು, ಎಳ್ಳು, ಒಣಕೊಬ್ಬರಿ ಹಾಕಿ ತರಿತರಿಯಾಗಿ ರುಬ್ಬಿಕೊಳ್ಳಿ. ರುಬ್ಬಿಕೊಂಡ ಮಿಶ್ರಣವನ್ನು ಸೀಳಿಕೊಂಡ ತೊಂಡೆಕಾಯಿಯ ಮಧ್ಯಭಾಗಕ್ಕೆ ತುಂಬಿಕೊಂಡು ಇಟ್ಟುಕೊಳ್ಳಿ. ನಂತರ ಒಂದು ಪ್ಯಾನ್ ಅನ್ನು ಗ್ಯಾಸ್ ಮೇಲೆ ಇಟ್ಟು ಅದಕ್ಕೆ ಎಣ್ಣೆ ಹಾಕಿಕೊಳ್ಳಿ.ನಂತರ ಸಾಸಿವೆ, ಇಂಗು, ಅರಿಶಿನ ಪುಡಿ, ಕರಿಬೇವು ಹಾಕಿ 1 ನಿಮಿಷಗಳ ಕಾಲ ಫ್ರೈ ಮಾಡಿಕೊಳ್ಳಿ. ಬಳಿಕ ತೊಂಡೆಕಾಯಿಯನ್ನು ಪ್ಯಾನ್ ಗೆ ಹಾಕಿ 3 ನಿಮಿಷಗಳ ಕಾಲ ಫ್ರೈ ಮಾಡಿಕೊಳ್ಳಿ. ಆಮೇಲೆ ಒಂದು ಮುಚ್ಚಳ ಮುಚ್ಚಿ 25 ನಿಮಿಷಗಳ ಕಾಲ ಬೇಯಿಸಿಕೊಳ್ಳಿ. ನಂತರ ಮುಚ್ಚಳ ತೆಗೆದು ತೊಂಡೆಕಾಯಿಯನ್ನು ಇನ್ನೊಂದು ಬದಿಗೆ ಮಗುಚಿಕೊಳ್ಳಿ. ಎರಡು ಕಡೆ ಚೆನ್ನಾಗಿ ಬೆಂದ ಮೇಲೆ ಗ್ಯಾಸ್ ಆಫ್ ಮಾಡಿ.

## ಮಿಂತ್ರಾದಿಂದ ಹೊಚ್ಚಹೊಸ ಬ್ರ್ಯಾಂಡ್ ಅಭಿಯಾನ ಟ್ರೆಂಡ್ ಐಆರ್‌ಎಲ್‌ಗೆ ಕಿಯಾರಾ ಅಡ್ವಾಣಿ ಚಾಲನೆ



Myntra

TREND IRL

ಮುಂಚೂಣಿಯ ಫ್ಯಾಷನ್, ಬ್ಯೂಟಿ ಮತ್ತು ಲೈಫ್ ಸ್ಟೈಲ್ ಇ-ಕಾಮರ್ಸ್ ತಾಣಗಳಲ್ಲಿ ಒಂದಾದ ಮಿಂತ್ರಾ ಹೊಚ್ಚಹೊಸ ಬ್ರಾಂಡ್ ಅಭಿಯಾನ, ''ಟ್ರೆಂಡ್ ಐ.ಆರ್.ಎಲ್.(ಇನ್ ರಿಯಲ್ ಲೈಫ್)'ಗೆ ಚಾಲನೆ ನೀಡಿದ್ದು ಖ್ಯಾತ ನಟಿ ಕಿಯಾರಾ ಅಡ್ವಾಣಿ ಅವರನ್ನು ಹೊಂದಿದೆ. ಈ ಅಭಿಯಾನವು ನಿಜ ಜೀವನದ ಟ್ರೆಂಡ್ ಸೆಟ್ಟರ್ ಗಳನ್ನು ಸಂಭ್ರಮಿಸುತ್ತಿದ್ದು ಅವರು ಮಿಂತ್ರಾದ ತಮ್ಮ ಟ್ರೆಂಡಿಂಗ್ ಫ್ಯಾಷನ್ ಮೂಲಕ ತಮ್ಮಸುತ್ತಲಿರುವವರನ್ನು ಹೆಚ್ಚು ಫ್ಯಾಷನಬಲ್ ಆಗಿರಲು ಸ್ಫೂರ್ತಿ ತುಂಬುತ್ತಿದ್ದು ಅವರಿಗೆ 'ಟ್ರೆಂಡ್ ಇನ್ ರಿಯಲ್ ಲೈಫ್' ಆಗಲು ಸನ್ನದ್ಧವಾಗಿಸುತ್ತದೆ ಮತ್ತು ಹೊಚ್ಚಹೊಸ ಟ್ರೆಂಡ್ ಗಳಿಗೆ ಅತ್ಯುತ್ತಮ ತಾಣವಾಗಿ ಬ್ರಾಂಡ್ ಸ್ಥಾನವನ್ನು ಸದೃಢಗೊಳಿಸುತ್ತದೆ. ಈ ಅಭಿಯಾನದ ಭಾಗವಾಗಿ ಕಿಯಾರಾ ಎರಡು ಜಾಹೀರಾತು ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದು ಈ ಪ್ಲಾಟ್ ಫಾರಂನಲ್ಲಿ ಲಭ್ಯವಾಗುವ ಮಹಿಳೆಯರ ಎಥ್ನಿಕ್ ಮತ್ತು ಪಾಶ್ಚಿಮಾತ್ಯ ದಿರಿಸುಗಳ ವಿಸ್ತಾರ ಶ್ರೇಣಿಯ ಟ್ರೆಂಡ್ ಗಳನ್ನು ಪ್ರದರ್ಶಿಸಲಿದ್ದಾರೆ. ಹಲವು ವರ್ಷಗಳಿಂದ ಮಿಂತ್ರಾ ಫ್ಯಾಷನ್ ಆಸಕ್ತ ಗ್ರಾಹಕರಿಗೆ ಟ್ರೆಂಡ್ ಗಳನ್ನು ಒದಗಿಸುವ ಪ್ಲಾಟ್ ಫಾರಂ ಅನ್ನು ಸದೃಢಗೊಳಿಸಿದ ಫ್ಯಾಷನ್ ಟ್ರೆಂಡ್ ಗಳೊಂದಿಗೆ ಸಕ್ರಿಯರಾಗುವುದನ್ನು ಮರು ವ್ಯಾಖ್ಯಾನಿಸುವ ಉಪಕ್ರಮ ಮಿಂತ್ರಾದ ಟ್ರೆಂಡ್ ನೆಕ್ಸ್ಟ್ ಹಲವಾರು ಇನ್-ಆಪ್ ಅನುಭವಗಳನ್ನು ತರುತ್ತಿದ್ದು ಟ್ರೆಂಡ್ ಆವಿಷ್ಕಾರವನ್ನು ಹೆಚ್ಚಿಸುವ ಗುರಿ ಹೊಂದಿದೆ. ಆಪ್ ನಲ್ಲಿ ತಳಭಾಗದಲ್ಲಿ ನ್ಯಾವಿಗೇಷನ್ ಟ್ರೆಂಡ್ ನೆಕ್ಸ್ಟ್ ಲ್ಯಾಂಡಿಂಗ್ ಪುಟಕ್ಕೆ ಕೊಂಡೊಯ್ಯುತ್ತದೆ, ಅಲ್ಲಿಂದ ಬಳಕೆದಾರರು ಸಂಪಾದಕೀಯಗಳು, ಲಿಸ್ಟಿಕಲ್ ಗಳು ಮತ್ತು ಫೀಚರ್ಡ್ ಟ್ರೆಂಡ್ ಗಳನ್ನು ಪಡೆಯಬಹುದು ಮತ್ತು ವೈಯಕ್ತಿಕಗೊಳಿಸಿದ ಅನುಭವ ಆನಂದಿಸಬಹುದು. ಈ ಪ್ಲಾಟ್ ಫಾರಂ ಪ್ರತಿ ವಾರ ಹೊಸ ಟ್ರೆಂಡ್ ಗಳನ್ನು ನವೀಕರಿಸುತ್ತದೆ, ಪ್ರಸ್ತುತ 50,000+ ಟ್ರೆಂಡಿಂಗ್ ಸ್ಟೈಲ್ ಗಳನ್ನು ಒದಗಿಸುತ್ತಿದ್ದು ಗ್ರಾಹಕರಿಗೆ ಅವರ ಅತ್ಯುತ್ತಮ ಟ್ರೆಂಡಿಂಗ್ ನಲ್ಲಿರಲು ನೆರವಾಗುತ್ತದೆ. ಮಿಂತ್ರಾದೊಂದಿಗೆ ಕಿಯಾರಾ ಬ್ರಾಂಡ್ ರಾಯಭಾರಿಯಾಗಿ ಅವರ ಸಹಯೋಗವು ಬ್ರಾಂಡ್ ತತ್ವಗಳಿಗೆ ಅವರ ಮೂರ್ತರೂಪವಾಗಿ ಹಾಗೂ ಫ್ಯಾಷನ್ ಟ್ರೆಂಡ್ ಸೆಟ್ಟರ್ ಆಗಿ ಅವರ ಸ್ಥಾನಮಾನದಿಂದ ಬಂದಿದೆ. ಅವರ ಸತತವಾದ ಅತ್ಯುತ್ತಮ ಫ್ಯಾಷನ್ ಅರಿವು ಹಲವರಿಗೆ ಸ್ಫೂರ್ತಿಯಾಗಿದೆ, ಅವರು ಪ್ರತಿಯೊಬ್ಬರನ್ನೂ 'ಟ್ರೆಂಡ್ ಇನ್ ರಿಯಲ್ ಲೈಫ್' ಆಗಲು ಸಬಲೀಕರಿಸುವ ಈ ಅಭಿಯಾನದ ಕೇಂದ್ರ ಸಂದೇಶದೊಂದಿಗೆ ತಡೆರಹಿತವಾಗಿ ಹೊಂದಿಕೊಳ್ಳುತ್ತದೆ. ಈ ಅಭಿಯಾನವು ಹಲವಾರು ಟ್ರೆಂಡ್ ಗಳನ್ನು ಒಳಗೊಂಡ ಸರಣಿ ಜಾಹೀರಾತು ಚಿತ್ರಗಳನ್ನು ಹೊಂದಿದ್ದು ಅದರಲ್ಲಿ ರಫಲ್ ಡ್ರೆಸ್ ಗಳಿಂದ ವೆಸ್ಟ್ರನ್ ವೇರ್ ನಲ್ಲಿ ಕಾರ್ಪ್ ಕೋರ್ ಹಾಗೂ ಎಥ್ನಿಕ್ ವೇರ್ ನಲ್ಲಿ ಸಮ್ಮರ್ ಸಹಾರಾ ಸೆಟ್ ಗಳ ರೆಡಿ-ಟು-ವೇರ್ ಸೀರೆಗಳ ಮೂಲಕ ಟ್ರೆಂಡ್ ಸೆಟ್ಟಿಂಗ್ ನಾಯಕರಲ್ಲಿ ಒಂದಾಗಿ ಮಿಂತ್ರಾದ ಸ್ಥಾನವನ್ನು ಮರು ದೃಢೀಕರಿಸಿದೆ.

## ಚಿಯಾ ಬೀಜಗಳ ಅದ್ಭುತ ಆರೋಗ್ಯ ಪ್ರಯೋಜನಗಳು

### ಹೆಲ್ತ್ ಟಿಪ್ಸ್

ಚಿಯಾ ಬೀಜಗಳ ಸೇವನೆಯಿಂದ ನೀವು ಹಲವಾರು ಆರೋಗ್ಯಕರ ಪ್ರಯೋಜನ ಪಡೆಯಬಹುದು. ಪೌಷ್ಟಿಕಾಂಶಗಳಿಂದ ಸಮೃದ್ಧವಾಗಿರುವ ಈ ಬೀಜಗಳು ಅನೇಕ ಔಷಧೀಯ ಗುಣಗಳನ್ನು ಹೊಂದಿದ್ದು, ಆರೋಗ್ಯಕರ ಆಹಾರವಾಗಿ ಸೇವಿಸಲಾಗುತ್ತದೆ. ಚಿಯಾ ಬೀಜಗಳ ಆರೋಗ್ಯ ಪ್ರಯೋಜನಗಳ ಬಗ್ಗೆ ತಿಳಿಯಿರಿ. ಚಿಯಾ ಬೀಜಗಳು ಜೀವಸತ್ವಗಳು, ಖನಿಜಗಳು ಮತ್ತು ಶಕ್ತಿಯುತವಾದ ಉತ್ಕರ್ಷಣ ನಿರೋಧಕಗಳ ಅತ್ಯುತ್ತಮ ಮೂಲವಾಗಿದೆ. ಕೆಫೀಕ್ ಆಮ್ಲ, ಕ್ಲೋರೊಜೆನಿಕ್ ಆಮ್ಲ, ಕೆಂಪ್ಫೆರಾಲ್ ಮತ್ತು ಕ್ವೆರ್ಸೆಟಿನ್ ಇದರ ಕೆಲವು ಉತ್ಕರ್ಷಣ ನಿರೋಧಕಗಳಾಗಿವೆ. ಈ ಪೋಷಕಾಂಶಗಳು ಅನೇಕ ಮಹತ್ವದ ಆರೋಗ್ಯ ಪ್ರಯೋಜನಗಳನ್ನು ಒದಗಿಸಲು ಸಹಾಯ ಮಾಡುತ್ತವೆ. ಚಿಯಾ ಬೀಜಗಳಲ್ಲಿ ಕಂಡುಬರುವ ಉತ್ಕರ್ಷಣ ನಿರೋಧಕಗಳು ನಿಮ್ಮ ದೇಹದಲ್ಲಿನ ಸ್ವತಂತ್ರ ರಾಡಿಕಲ್ಗಳ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ. ಸ್ವತಂತ್ರ ರಾಡಿಕಲ್ಗಳು ಆಕ್ಸಿಡೇಟಿವ್ ಒತ್ತಡ ಮತ್ತು ಜೀವಕೋಶದ ಹಾನಿಯನ್ನು ಉಂಟುಮಾಡುತ್ತವೆ. ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿರುವ ಆಹಾರ ಸೇವಿಸುವುದರಿಂದ ಹೃದ್ರೋಗ, ಅರಿವಿನ ಕೊರತೆ ಮತ್ತು ಕೆಲವು ರೀತಿಯ ಕ್ಯಾನ್ಸರ್ ಸೇರಿದಂತೆ ಸ್ವತಂತ್ರ ರಾಡಿಕಲ್ಗಳಿಗೆ ಸಂಬಂಧಿಸಿದ ಅನೇಕ ಆರೋಗ್ಯ ಸಮಸ್ಯೆಗಳನ್ನು ಅಭಿವೃದ್ಧಿಪಡಿಸುವ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ . ಚಿಯಾ ಬೀಜಗಳಲ್ಲಿ ಕ್ವೆರ್ಸೆಟಿನ್ ಎಂಬ ಉತ್ಕರ್ಷಣ ನಿರೋಧಕವಿದ್ದು, ಇದು ಹೃದ್ರೋಗದ ಅಪಾಯವನ್ನು ಕಡಿಮೆ ಮಾಡುತ್ತದೆ. ಈ ಬೀಜಗಳು ಹೆಚ್ಚಿನ ಫೈಬರ್ ಹೊಂದಿರುತ್ತವೆ, ಇದು ಅಧಿಕ ರಕ್ತದೊತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ನಿಮ್ಮ ಹೃದಯ ಕಾಯಿಲೆಯ ಅಪಾಯವನ್ನು ಕಡಿಮೆ ಮಾಡುತ್ತದೆ.

ಚಿಯಾ ಬೀಜಗಳು ಹೆಚ್ಚಿನ ಫೈಬರ್ ಹೊಂದಿರುತ್ತವೆ. ಫೈಬರ್ ಇನ್ಸುಲಿನ್ ಪ್ರತಿರೋಧವನ್ನು ಕಡಿಮೆ ಮಾಡಲು ಮತ್ತು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಸುಧಾರಿಸಲು ಸಹಾಯ ಮಾಡುತ್ತದೆ ಎಂದು ಅಧ್ಯಯನಗಳು ತಿಳಿಸಿವೆ. ಮೆಟಾಬಾಲಿಕ್ ಸಿಂಡ್ರೋಮ್ ಮತ್ತು ಟೈಪ್ 2 ಮಧುಮೇಹದ ಅಪಾಯವನ್ನು ಕಡಿಮೆ ಮಾಡುತ್ತದೆ. ಇದು ಅಧಿಕ ರಕ್ತದ ಸಕ್ಕರೆ ಮಟ್ಟವನ್ನು ತಡೆಯಲು ಸಹಾಯ ಮಾಡುತ್ತದೆ. ದೀರ್ಘಕಾಲದ ಉರಿಯೂತವು ಹೃದ್ರೋಗ ಮತ್ತು ಕ್ಯಾನ್ಸರ್‌ನಂತಹ ಆರೋಗ್ಯ ಪರಿಸ್ಥಿತಿಗಳಿಗೆ ಕಾರಣವಾಗಬಹುದು. ಚಿಯಾ ಬೀಜಗಳಲ್ಲಿ ಕಂಡುಬರುವ ಉತ್ಕರ್ಷಣ ನಿರೋಧಕವಾದ ಕೆಫೀಕ್ ಆಮ್ಲವು ದೇಹದಲ್ಲಿನ ಉರಿಯೂತದ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ. ಚಿಯಾ ಬೀಜಗಳನ್ನು ನಿಯಮಿತವಾಗಿ ತಿನ್ನುವುದು ಉರಿಯೂತವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ, ಇದು ಉರಿಯೂತದ ಕಾಯಿಲೆಯ ಉಪಸ್ಥಿತಿಯನ್ನು ಸೂಚಿಸುತ್ತದೆ. 1 ಔನ್ಸ್ ಚಿಯಾ ಬೀಜಗಳ ಸೇವೆಯು ನಿಮ್ಮ ದೈನಂದಿನ ಫೈಬರ್‌ನ 39%ನ್ನು ಹೊಂದಿರುತ್ತದೆ. ಈ ಬೀಜಗಳಲ್ಲಿನ ಕರಗುವ ಫೈಬರ್ ನೀರನ್ನು ಹೀರಿಕೊಳ್ಳುತ್ತದೆ, ಇದು ನಿಮ್ಮ ಹೊಟ್ಟೆಯಲ್ಲಿ ವಿಸ್ತರಿಸಲು ಕಾರಣವಾಗುತ್ತದೆ. ನೀವು ಇವುಗಳನ್ನು ಸೇವಿಸಿದಾಗ ನಿಮ್ಮ ಪೂರ್ಣತೆಯ ಭಾವನೆಯನ್ನು ಹೆಚ್ಚಿಸುತ್ತದೆ. ಕಡಿಮೆ ತಿನ್ನುವ ಹೊರತಾಗಿಯೂ ನೀವು ಪೂರ್ಣವಾಗಿ ಅನುಭವಿಸಲು ಅವಕಾಶ ನೀಡುವ ಮೂಲಕ, ಚಿಯಾ ಬೀಜಗಳು ಆರೋಗ್ಯಕರ ತೂಕವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.



## ಭಾರತದ ಅತಿದೊಡ್ಡ ಎಂಜಿನಿಯರಿಂಗ್ ಹ್ಯಾಕಥಾನ್ ಆದ ಟೆಕ್ಜಿಯಂ



**ವಿಜೇತರಿಗೆ ರೂ. 18 ಲಕ್ಷಕ್ಕಿಂತಲೂ ಹೆಚ್ಚಿನ ನಗದು ಬಹುಮಾನ**

ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗಾಗಿಯೇ ಆಯೋಜಿಸಲ್ಪಡುವ ಭಾರತದ ಅತಿದೊಡ್ಡ ನಾವೀನ್ಯತಾ ವೇದಿಕೆಯಾದ ಟೆಕ್ಜಿಯಂಲನ ಏಳನೇ ಆವೃತ್ತಿಯು ಗುರುವಾರ ಮುಕ್ತಾಯಗೊಂಡಿದೆ. ಎಲ್ಟಿಟಿಎಸ್ನ ಹೊಸ ಬೆಂಗಳೂರು ಕ್ಯಾಂಪಸ್ನಲ್ಲಿ ನಡೆದ ಈ ವಾರ್ಷಿಕ ತಂತ್ರಜ್ಞಾನ ಸ್ಪರ್ಧೆಗೆ ದೇಶಾದ್ಯಂತ ಇರುವ 503 ಎಂಜಿನಿಯರಿಂಗ್ ಸಂಸ್ಥೆಗಳ 36,765ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದರು.2016 ರಲ್ಲಿ ಪ್ರಾರಂಭವಾದ ಲ್‌ಟಿ ಟೆಕ್ನಾಲಜಿ ಸರ್ವೀಸಸ್ (ಎಲ್ ಟಿ ಟಿ ಎಸ್) ಆಯೋಜಿಸುವ ಶೈಕ್ಷಣಿಕ-ಔದ್ಯಮಿಕ ಎಂಜಿನಿಯರಿಂಗ್ ನಾವೀನ್ಯತಾ ಹ್ಯಾಕಥಾನ್ ಆಗಿರುವ ಟೆಕ್ಜಿಯಂಲ ಈಗ ಭಾರಿ ಜನಪ್ರಿಯವಾಗಿದೆ. ಈ ವರ್ಷದ ಸ್ಪರ್ಧೆಯಲ್ಲಿ ಅಗ್ರ ಸ್ಥಾನ ಪಡೆದ ವಿಜೇತರು ಒಟ್ಟು ರೂ.18 ಲಕ್ಷಕ್ಕಿಂತಲೂ ಹೆಚ್ಚಿನ ನಗದು ಬಹುಮಾನ ಪಡೆದುಕೊಂಡರು. ಭಾರತದ ಅಗ್ನಿ ಕ್ಷಿಪಣಿ ಯೋಜನೆಯಲ್ಲಿ ತಾವು ವಹಿಸಿದ ಪ್ರಮುಖ ಪಾತ್ರಕ್ಕಾಗಿ ಭಾರತದ ಕ್ಷಿಪಣಿ ಮಹಿಳೆ ಎಂದು ಜನಪ್ರಿಯವಾಗಿರುವ ಡಾ. ಟೆಸ್ಸಿ ಥಾಮಸ್ ಅವರು ಈ ಕಾರ್ಯಕ್ರದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಅವರ ಉಪಸ್ಥಿತಿ ಮತ್ತು ಅವರ ಮಾತಿನಲ್ಲಿ ದಕ್ಕಿದ ಒಳನೋಟಗಳಿಂದ ನೆರೆದಿದ್ದ ಪ್ರೇಕ್ಷಕರು ಸ್ಫೂರ್ತಿ ಪಡೆದರು.

ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಡಾ. ಟೆಸ್ಸಿ ಥಾಮಸ್, ''ದೇಶಾದ್ಯಂತ ಇರುವ ಎಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ ತಾಂತ್ರಿಕ ಆವಿಷ್ಕಾರಗಳನ್ನು ನೋಡುವುದೇ ಆನಂದದಾಯಕವಾದ ವಿಚಾರವಾಗಿದೆ. ಅಂತಹ ತಂತ್ರಜ್ಞಾನ ಆವಿಷ್ಕಾರಗಳು ಭವಿಷ್ಯಕ್ಕೆ ಹೊಂದುವ ಎಂಜಿನಿಯರಿಂಗ್ ಅಪ್ಲಿಕೇಶನ್ಗಳನ್ನು ರೂಪಿಸುವ ಸಾಮರ್ಥ್ಯವನ್ನು ಹೊಂದಿವೆ. ಎಲ್‌ಟಿ ಟೆಕ್ನಾಲಜಿ ಸರ್ವಿಸಸ್ ಈ ಶ್ಲಾಘನೀಯ ಉಪಕ್ರಮವನ್ನು ಯಶಸ್ವಿಯಾಗಿ ಮುನ್ನಡೆಸಿದ್ದು, ಕಳೆದ ಏಳು ವರ್ಷಗಳಲ್ಲಿ ಯುವ ಮನಸ್ಸುಗಳು ನಾವೀನ್ಯತೆಯ ಅನ್ವೇಷಣೆಯಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಲು ಮಾರ್ಗದರ್ಶನ ಮಾಡಿದೆ. ಯುವ ಇಂಜಿನಿಯರ್ಗಳ ನವೀನ ಆಲೋಚನೆಗಳನ್ನು ಒಟ್ಟುಗೂಡಿಸುವ ಮೂಲಕ ಟೆಕ್ಜಿಯಂಲ ನಂತಹ ವೇದಿಕೆಗಳು ನಮ್ಮ ರಾಷ್ಟ್ರದಲ್ಲಿ ಮಾತ್ರವಲ್ಲದೆ ಜಗತ್ತಿನಾದ್ಯಂತದ #Engineering TheChange ನಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ಎರಡು ದಿನಗಳ ಕಾಲ ನಡೆದ ಈ ಹ್ಯಾಕಥಾನ್ ನಲ್ಲಿ ಯುಎವಿಗಳು, ಮೆಡಿಕಲ್ ಡಯಾಗ್ನಾಸ್ಟಿಕ್ಸ್, ರೋಬೋಟಿಕ್ಸ್, ಕಂಪ್ಯೂಟ್ ವಿಷನ್, ಅನಾಲಿಟಿಕ್ಸ್, ಎಲೆಕ್ಟ್ರಿಕ್ ವೆಹಿಕಲ್ಸ್ ಮತ್ತು ವೈರ್ಲೆಸ್ ಟ್ರಾನ್ಸ್ ಮಿಷನ್ ಮುಂತಾದ ಚಲನಶೀಲತೆ, ಸುಸ್ಥಿರತೆ ಮತ್ತು ಹೈ-ಟೆಕ್ ವಿಚಾರಗಳನ್ನು ಒಳಗೊಂಡಿರುವ ವಿಷಯಗಳ ಮೇಲೆ ಗಮನ ಕೇಂದ್ರೀಕರಿಸಲಾಗಿತ್ತು. ಸ್ಪರ್ಧೆಯಲ್ಲಿ ಭಾಗವಹಿಸಿದವರಿಗೆ ನೈಜ- ಪ್ರಪಂಚದ ಸಮಸ್ಯೆಗಳಿಗೆ ಸೃಜನಾತ್ಮಕ ಪರಿಹಾರಗಳನ್ನು ಕಂಡುಹಿಡಿಯುವ ಮೂಲಕ ಸಮಸ್ಯೆ ಪರಿಹರಿಸಲು ಪ್ರೇರೇಪಿಸಲಾಯಿತು. ಜೊತೆಗೆ ಅವರಿಗೆ ಟೆಕ್ಜಿಯಂಲ ಇನ್ನೋವೇಟರ್ಸ್ ಎಂಬ ಮನ್ನಣೆ ನೀಡುವ ಮತ್ತು ಎಲ್ ಟಿ ಟಿ ಎಸ್ ನಲ್ಲಿ ಕೆಲಸ ಮಾಡುವ ಅವಕಾಶ ಇರುವುದಾಗಿ ತಿಳಿಸಲಾಯಿತು. ಟೆಕ್ಜಿಯಂಲ 2024ರ 7 ನೇ ಆವೃತ್ತಿಯ ವಿಜೇತ ಸ್ಥಾನವನ್ನು ಬಿ ವಿ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ತೆಲಂಗಾಣ ತಂಡ ಪಡೆದಿದ್ದು, ಅವರು ತಮ್ಮ ಇವಿಟಿಓಎಲ್ ಡಿಟೆಕ್ಟ್ ಆಂಡ್ ಅವಾಯ್ಡ್ ಸಿಸ್ಟಮ್ಸ್ ಗಾಗಿ ಎಐ ಆಧಾರಿತ ಸಿಚುವೇಷನಲ್ ಅವೇರ್ ನೆಸ್ ಅಲ್ಗಾರಿದಮ್ ಕುರಿತ ಪ್ರಾಜೆಕ್ಟ್ ನ ಮೂಲಕ ಗಮನ ಸೆಳೆದರು. ದ್ವಿತೀಯ ಸ್ಥಾನವನ್ನು ಶ್ರೀ ರಾಮಕೃಷ್ಣ ಎಂಜಿನಿಯರಿಂಗ್ ಕಾಲೇಜು, ಕೊಯಂಬತ್ತೂರು ತಂಡದ ವಿದ್ಯಾರ್ಥಿಗಳು ಪಡೆದಿದ್ದು, ಅವರು ಟ್ವಿನ್ಸ್ಕೇಪ್ ಆಯಿಲ್ ವೆಲ್ ಮಾನಿಟರ್ ಪ್ರೊಟೊಟೈಪ್ ಅಭಿವೃದ್ಧಿ ಕಾನ್ಸೆಪ್ಟ್ ಅನ್ನು ಸಲ್ಲಿಸಿದ್ದರು. ಮೂರನೇ ಸ್ಥಾನವನ್ನು ಅಮೃತಾ ವಿಶ್ವವಿದ್ಯಾಪೀಠಂ, ಚೆನ್ನೈನ ವಿದ್ಯಾರ್ಥಿಗಳು ಪಡೆದರು. ಅವರು ಇಂಟೆಲಿಜೆಂಟ್ ರೇಡಿಯಾಲಜಿಸ್ಟ್ ಅಸಿಸ್ಟೆಂಟ್ ಎಂಆರ್‌ಐ, ನೀ ಇಂಜುರಿ ಡಿಟೆಕ್ಷನ್ ಸಿಸ್ಟಮ್ (ಮೊಣಕಾಲು ಗಾಯ ಪತ್ತೆ ವ್ಯವಸ್ಥೆ) ಯೋಜನೆಯನ್ನು ಸಲ್ಲಿಸಿ ಮೆಚ್ಚುಗೆ ಗಳಿಸಿದರು. ಹೆಚ್ಚುವರಿಯಾಗಿ, ವಿಶೇಷ ತೀರ್ಪುಗಾರರ ಬಹುಮಾನವನ್ನು ಸ್ಥಾನವನ್ನು ಬಿ ವಿ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ತೆಲಂಗಾಣ ತಂಡವು, ಅವರ ನಗರ ಪ್ರದೇಶಗಳಲ್ಲಿ ಪ್ರವಾಹ ಪೀಡಿತ ಸ್ಥಳಗಳ ಗುರುತಿಸುವಿಕೆಯ ಯೋಜನೆಗಾಗಿ ಪಡೆಯಿತು. ವಿಶೇಷವಾಗಿ ಪ್ರೇಕ್ಷಕರ ಆಯ್ಕೆಯ ಪ್ರಶಸ್ತಿಯು (ಇನ್ಸ್ಟಿಟ್ಯೂಟ್), (ಸ್ಥಳ) ತಂಡಕ್ಕೆ ಹೋಯಿತು. ಇಂಜಿನಿಯರಿಂಗ್ ವಿದ್ಯಾರ್ಥಿಗಳು ಒಂಬತ್ತು ತಿಂಗಳುಗಳಿಗೂ ಹೆಚ್ಚು ಕಾಲ ತಮ್ಮನ್ನು ತಾವು ಈ ಸ್ಪರ್ಧೆಗೆ ಸಮರ್ಪಿಸಿಕೊಂಡಿದ್ದರು, ಈ ಸಂದರ್ಭದಲ್ಲಿ ಎಲ್ ಟಿ ಟಿ ಎಸ್ ನ ತಾಂತ್ರಿಕ ತಜ್ಞರು ಮತ್ತು ವಿಷಯ ತಜ್ಞರಿಂದ ಮಾರ್ಗದರ್ಶನ ಪಡೆದರು. ಪ್ರೂಫ್ ಆಫ್ ಕಾನ್ಸೆಪ್ಟ್ (ಪಿಓಸಿಗಳು) ಅಭಿವೃದ್ಧಿ ಸಲುವಾಗಿ ಮೌಲ್ಯಮಾಪನಗಳು ಮತ್ತು ಪರಿಕಲ್ಪನಾ ಕಾರ್ಯಕ್ರಮ ಸರಣಿಗಳು ನಡೆದುವು. ಅವುಗಳನ್ನು ಆಧರಿಸಿ ಅಗ್ರ 32 ಎಂಜಿನಿಯರಿಂಗ್ ತಂಡಗಳನ್ನು ಶಾರ್ಟ್ಲಿಸ್ಟ್ ಮಾಡಲಾಗಿತ್ತು. ಫೈನಲಿಸ್ಟ್ ಗಳು ತಮ್ಮ ಸೃಜನಶೀಲ ಮೂಲಮಾದರಿಗಳನ್ನು ಉದ್ಯಮದ ಪರಿಣತರು, ಶಿಕ್ಷಣ ತಜ್ಞರು ಮತ್ತು ವಿಶ್ಲೇಷಕರನ್ನು ಒಳಗೊಂಡ ತೀರ್ಪುಗಾರರ ತಂಡದ ಮುಂದೆ ಪ್ರದರ್ಶಿಸಿದರು. ಸಂಪೂರ್ಣ ಮೌಲ್ಯಮಾಪನದ ನಂತರ, ಟೆಕ್ಜಿಯಂಲ ಮೂಲಕ ಸಾಧಿಸಿದ ಅತ್ಯುತ್ತಮ ನಾವೀನ್ಯತಾ ಪರಿಹಾರಗಳನ್ನು ಪ್ರದರ್ಶಿಸಿದ ಮೂರು ವಿಜೇತರನ್ನು ಘೋಷಿಸಲಾಯಿತು.

## ತಲೆ ಕೂದಲಿಗೆ ಎಣ್ಣೆ ಹಾಕಿದ್ಮೇಲೆ ಮಾಡಲೇಬೇಡಿ ಈ ತಪ್ಪು

### ಬ್ಯೂಟಿ ಟಿಪ್ಸ್



ಕೂದಲನ್ನು ಪೋಷಿಸುವ ಕೆಲಸವನ್ನು ಎಣ್ಣೆ ಮಾಡುತ್ತದೆ. ಮಾರುಕಟ್ಟೆಯಲ್ಲಿ ಕೂದಲಿಗೆ ಹಾಕಲು ಬೇರೆ ಬೇರೆ ತೈಲಗಳು ಸಿಗ್ತಿವೆ. ಕೂದಲು ದಟ್ಟವಾಗಿ, ಗಟ್ಟಿಯಾಗಿ, ಹೊಳಪಾಗಿ ಕಾಣಲು ಕೂದಲಿಗೆ ಎಣ್ಣೆ ಹಚ್ಚಲಾಗುತ್ತದೆ. ಚಿಕ್ಕ ವಯಸ್ಸಿನಲ್ಲಿಯೇ ಕೂದಲು ಉದುರುವುದು, ಬೆಳ್ಳಗಾಗುವುದು ಈಗ ಸಾಮಾನ್ಯ ಎನ್ನುವಂತಾಗಿದೆ. ಹಾಗಾಗಿ ಕೂದಲಿಗೆ ಈಗ ಹೆಚ್ಚಿನ ಆರೈಕೆಯ ಅವಶ್ಯಕತೆಯಿದೆ. ಉತ್ತಮ ಎಣ್ಣೆಯಿಂದ ಕೂದಲು ಮಸಾಜ್ ಮಾಡಿದ್ರೆ, ಕೂದಲ ಸೌಂದರ್ಯ ಹೆಚ್ಚಾಗುತ್ತದೆ. ಕೂದಲಿಗೆ ಅನೇಕರು ಎಣ್ಣೆ ಹಚ್ಚಿ ಮಸಾಜ್ ಮಾಡ್ತಾರೆ. ಆದ್ರೆ, ಮಸಾಜ್ ಮಾಡಿದ ನಂತ್ರ ಕೆಲವೊಂದು ತಪ್ಪುಗಳನ್ನು ಮಾಡ್ತಾರೆ. ಕೂದಲಿಗೆ ಎಣ್ಣೆ ಹಚ್ಚಿದ ನಂತ್ರ, ಬಾಚಣಿಕೆಯಿಂದ ಕೂದಲನ್ನು ಬಾಚಿಕೊಳ್ಳಬೇಡಿ. ಇದು ಕೂದಲಿನ ಬುಡಕ್ಕೆ ಒತ್ತಡ ಹೆಚ್ಚು ಮಾಡುತ್ತದೆ. ಇದ್ರಿಂದ ಉದುರುವ ಸಾಧ್ಯತೆಯಿರುತ್ತದೆ. ಕೂದಲಿಗೆ ಎಣ್ಣೆ ಹಚ್ಚಿದ ನಂತ್ರ ತುಂಬಾ ಸಮಯ ಬಿಡಬಾರದು. ಕೆಲವರು ಕೂದಲಿಗೆ ಎಣ್ಣೆ ಹಚ್ಚಿದ ನಂತ್ರ, ರಾತ್ರಿ ಪೂರ್ತಿ ಬಿಡುತ್ತಾರೆ. ಇದು ತಪ್ಪು. ಹೆಚ್ಚೆಂದ್ರೆ, ಎರಡು ಗಂಟೆ ಬಿಟ್ಟು ಕೂದಲನ್ನು ಸ್ವಚ್ಛಗೊಳಿಸಿ. ಎಣ್ಣೆ ಹಚ್ಚಿದ ನಂತ್ರ ಕೂದಲನ್ನು ಬಿಗಿಯಾಗಿ ಕಟ್ಟಬಾರದು. ಇದು ಕೂದಲಿನ ಬುಡದ ಮೇಲೆ ಒತ್ತಡ ಬೀಳುವಂತೆ ಮಾಡುತ್ತದೆ. ಇದು ಕೂದಲು ಉದುರಲು ಕಾರಣವಾಗುತ್ತದೆ.

## ರಾಶಿ ಭವಿಷ್ಯ



**ಜಯಶ್ರೀ.ಬಿ.ಆರ್**
ಖ್ಯಾತ ಜ್ಯೋತಿಷಿ
ದೂರವಾಣಿ–9964739507
www.jyotishyavaastu.com

**ಮೇಷ:** ಭೂಮಿ ವಿಷಯವಾಗಿ ಕಲಹ, ಶರೀರಕ್ಕೆ ಗಾಯ, ಅತಿಯಾದ ಆತ್ಮವಿಶ್ವಾಸ.

**ವೃಷಭ:** ರಾಜಕಾರಣಿಗಳಿಗೆ ಪ್ರತಿಷ್ಠೆ, ಸಾಧು-ಸಂತರ ದರ್ಶನ, ಮನಸ್ಸು ನಿಯಂತ್ರಣದಲ್ಲಿ ಇರುವುದಿಲ್ಲ.

**ಮಿಥುನ:** ಹೈನುಗಾರಿಕೆಯಲ್ಲಿ ಲಾಭ, ಕಾರ್ಮಿಕರಿಗೆ ಶುಭ, ದುಶ್ಚಟಗಳಿಂದ ತೊಂದರೆ.

**ಕಟಕ:** ಆಸ್ತಿ ಖರೀದಿಯಲ್ಲಿ ಎಚ್ಚರಿಕೆ, ವೈದ್ಯರಿಗೆ ಶುಭ, ರಾಜಕಾರಣಿಗಳಿಗೆ ಅಶುಭ.

**ಸಿಂಹ:** ಪಾಲುದಾರಿಕೆ ವ್ಯವಹಾರದಲ್ಲಿ ಲಾಭ, ಉದ್ಯೋಗದಲ್ಲಿ ಬದಲಾವಣೆ, ಸರ್ಕಾರದಿಂದ ಧನ ಸಹಾಯ.

**ಕನ್ಯಾ:** ಬಂಧುಗಳಿಂದ ಕಿರಿಕಿರಿ, ಆಹಾರ ವಸ್ತುಗಳ ಪೂರೈಕೆದಾರರಿಗೆ ಲಾಭ, ಬೆನ್ನುನೋವಿನ ತೊಂದರೆ.

**ತುಲಾ:** ವಿದ್ಯಾರ್ಥಿಗಳು ಶ್ರಮವಹಿಸಿ, ಆರೋಗ್ಯದಲ್ಲಿ ವ್ಯತ್ಯಾಸ, ಸ್ನೇಹಿತರಿಂದ ಸಹಾಯ.

**ವೃಶ್ಚಿಕ:** ಅನಾವಶ್ಯಕ ವಾದ-ವಿವಾದ, ಆರ್ಥಿಕತೆಯಲ್ಲಿ ಸುಧಾರಣೆ, ಆರೋಗ್ಯ ಉತ್ತಮವಾಗಿರುತ್ತದೆ.

**ಧನು:** ಹೈನುಗಾರಿಕೆಯಲ್ಲಿ ಸರಾಸರಿ, ವಿದ್ಯಾರ್ಥಿಗಳಿಗೆ ಅವಕಾಶಗಳು ಲಭ್ಯ, ಪ್ಲಾಸ್ಟಿಕ್ ಉದ್ದಿಮೆಯಲ್ಲಿ ನಷ್ಟ.

**ಮಕರ:** ವಕೀಲರಿಗೆ ಕೀರ್ತಿ ಲಭ್ಯ, ವಾಣಿಜ್ಯ ಅಧ್ಯಯನದಲ್ಲಿ ಶುಭ, ರಾಜಕಾರಣಿಗಳಿಗೆ ಅಶುಭ.

**ಕುಂಭ:** ದೀರ್ಘ ಪ್ರಯಾಣ, ದೂರದ ವ್ಯವಹಾರಗಳಲ್ಲಿ ಪ್ರಗತಿ, ಉತ್ತಮ ಧನಲಾಭ ಸಂಭವ.

**ಮೀನ:** ಅನಿರೀಕ್ಷಿತ ಧನ ಸಹಾಯ, ವಕೀಲರಿಗೆ ಶುಭ, ಹೈನುಗಾರಿಕೆಯಲ್ಲಿ ಲಾಭ.

## ಅಂತಾರಾಷ್ಟ್ರೀಯ ದಾದಿಯರ ದಿನ

ಪ್ರಪಂಚದಾದ್ಯಂತ ದಾದಿಯರು ಪ್ರತಿ ವರ್ಷ ಮೇ 12 ರಂದು ಅಂತರರಾಷ್ಟ್ರೀಯ ದಾದಿಯರ ದಿನವನ್ನು ಸ್ಮರಿಸುತ್ತಾರೆ. ಅವರಲ್ಲಿ ಕೆಲವರು ಬಾಲ್ಯದಲ್ಲಿ ಪ್ರೀತಿಯ ದಾದಿಯರನ್ನು ಹೊಂದಿದ್ದರು, ಇತರರು ನೀಲಿ ಪೊದೆಗಳನ್ನು ನೋಡಿ ಸುರುಳಿಯಾದರು. ಕೆಲವರು ಸಿಹಿ ಸ್ಮೈಲ್ಸ್ ಮತ್ತು ಮೃದುವಾದ ಅಭಿವ್ಯಕ್ತಿಗಳನ್ನು ಹೊಂದಿದ್ದರು, ಮತ್ತು ನಾವು ಬಾಗಿಲಿನಿಂದ ಹೊರನಡೆದಾಗ ಅವರು ನಮ್ಮ ಸತ್ಕಾರವನ್ನು ಎಂದಿಗೂ ಮರೆಯಲಿಲ್ಲ. ಇತರರು ಬೆಚ್ಚಗಿನ ನಗು ಮತ್ತು ದಯೆಯ ಮುಖಗಳನ್ನು ಹೊಂದಿದ್ದರೂ, ಕಿಟಕಿಯಿಂದ ಹೊರಗೆ ನೋಡುತ್ತಿರುವಾಗ ನಾವು ಚೂಪಾದ ಸಿರಿಂಜ್ನಿಂದ ಕಣ್ಣಿಗೆ ಚುಚ್ಚಿದ ದಿನವನ್ನು ಅದು ನಮಗೆ ನೆನಪಿಸಿತು. ಆದರೂ, ಎಲ್ಲವೂ ಒಳ್ಳೆಯದಕ್ಕಾಗಿ ಎಂದು ನಮಗೆ ತಿಳಿದಿದೆ. ದಾದಿಯರು ಆರೋಗ್ಯ ಕ್ಷೇತ್ರದ ಬೆನ್ನೆಲುಬಾಗಿದ್ದಾರೆ, ಸ್ಕಬ್ಗಳನ್ನು ಧರಿಸುತ್ತಾರೆ, ಅವರ ಜೇಬಿನಲ್ಲಿ ಸ್ಟೆತೊಸ್ಕೋಪ್ಗಳು ಮತ್ತು ವೈದ್ಯರ ಅತ್ಯಂತ ವಿಶ್ವಾಸಾರ್ಹ ಮಿತ್ರರಾಗಿದ್ದಾರೆ. ಪ್ರಾರಂಭಿಸಲು ನಿಮಗೆ ಸಹಾಯ ಮಾಡಲು ಹಲವಾರು ಸಂಪನ್ಮೂಲಗಳಿವೆ. ಮಾರ್ಗದರ್ಶಿಯು ನರ್ಸಿಂಗ್ ಶಾಲೆಯ ವೆಚ್ಚವನ್ನು ಮತ್ತು ಅದನ್ನು ಹೇಗೆ ಪಾವತಿಸಬೇಕೆಂದು ವಿವರಿಸುತ್ತದೆ ಮತ್ತು ಈ ಶುಶ್ರೂಷಾ ವಿದ್ಯಾರ್ಥಿವೇತನಗಳು ನಿಮಗೆ ಬೋಧನಾ ವೆಚ್ಚಗಳ ಮೇಲೆ ಉತ್ತಮ ಆರಂಭವನ್ನು ನೀಡಲು ಸಹಾಯ ಮಾಡುತ್ತದೆ. ದಾದಿಯರಿಗೆ ವಿದ್ಯಾರ್ಥಿ ಸಾಲ ಕ್ಷಮೆಯಿಂದ ನೀವು ಹೇಗೆ ಪ್ರಭಾವಿತರಾಗಬಹುದು ಎಂಬುದನ್ನು ಅರ್ಥಮಾಡಿಕೊಳ್ಳುವುದು ಸಹ ಯೋಗ್ಯವಾಗಿದೆ. ಯಾರನ್ನಾದರೂ ಕಾಳಜಿ ವಹಿಸುವುದು ಕಾಲಾನಂತರದಲ್ಲಿ ಬದಲಾಗಿದೆ. ಇದಕ್ಕಾಗಿ ಅಧಿಕೃತ ಶಿಕ್ಷಣ ಮತ್ತು ತರಬೇತಿಯು ಕೆಲವು ಶತಮಾನಗಳಿಂದ ಮಾತ್ರ ಲಭ್ಯವಿದೆ. ಒಬ್ಬ ಆರ್ದ್ರ ನರ್ಸ್ ಮತ್ತು ಸೂಲಗಿತ್ತಿ ಮಾತ್ರ ಮೊದಲು ಶುಶ್ರೂಷಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. 16 ನೇ ಶತಮಾನದವರೆಗೆ ಇದು ರೋಗಿಗಳನ್ನು ನೋಡಿಕೊಳ್ಳುವ ವ್ಯಕ್ತಿ ಎಂದು ವ್ಯಾಖ್ಯಾನಿಸಲ್ಪಟ್ಟಿತು, ಅದು ಈಗಿನಂತೆ.ಫ್ಲಾರೆನ್ಸ್ ನೈಟಿಂಗೇಲ್ ಅವರು ಈಗ ಸಮಕಾಲೀನ ಶುಶ್ರೂಷಾ ಕಾರ್ಯವಿಧಾನಗಳೆಂದು ಪರಿಗಣಿಸಲ್ಪಟ್ಟಿರುವುದನ್ನು ಸ್ಥಾಪಿಸಲು ಮೊದಲಿಗರು. ಅವಳು ಇಟಲಿಯ ಫ್ಲಾರೆನ್ಸ್ನಲ್ಲಿ ಜನಿಸಿದಳು ಮತ್ತು ಫ್ಲಾರೆನ್ಸ್ ಎಂಬ ಹೆಸರನ್ನು ನೀಡಲಾಯಿತು. ಅವಳು ಕ್ರಿಮಿಯನ್ ಯುದ್ಧದ ಸಮಯದಲ್ಲಿ ನರ್ಸ್ ಆಗಿದ್ದಳು ಮತ್ತು ಅವಳು ಮನೆಗೆ ಹಿಂದಿರುಗಿದಾಗ ಸಮಗ್ರ ಶುಶ್ರೂಷಾ ವ್ಯವಸ್ಥೆಯನ್ನು ರಚಿಸಲು ಅಲ್ಲಿ ಕಲಿತದ್ದನ್ನು ಬಳಸಿದಳು. ಯುದ್ಧದ ಸಮಯದಲ್ಲಿ ಅವಳು 'ದಿ ಲೇಡಿ ವಿತ್ ದಿ ಲ್ಯಾಂಪ್' ಎಂಬ ಅಡ್ಡಹೆಸರನ್ನು ಗಳಿಸಿದಳು ಏಕೆಂದರೆ ಅವಳು ರಾತ್ರಿಯಲ್ಲಿ ಸೈನಿಕರನ್ನು ಗಾಯಗೊಳಿಸುವುದರಲ್ಲಿ ಹೆಸರುವಾಸಿಯಾಗಿದ್ದಳು. ನೈಟಿಂಗೇಲ್ ತನ್ನ ಬರವಣಿಗೆಯ ಮೂಲಕ ನರ್ಸಿಂಗ್ ವಿಧಾನಗಳನ್ನು ಹಂಚಿಕೊಂಡ ಸಮೃದ್ಧ ಬರಹಗಾರ್ತಿ. ಅವರು ನುರಿತ ಸಂಖ್ಯಾಶಾಸ್ತ್ರಜ್ಞರಾಗಿದ್ದರು, ಅವರ ಸಂಶೋಧನೆಗಳನ್ನು ಪ್ರಸ್ತುತಪಡಿಸಿದರು ಮತ್ತು ಡೇಟಾ ಮತ್ತು ಚಾರ್ಟ್ಗಳನ್ನು ಬಳಸಿಕೊಂಡು ತೀರ್ಮಾನಗಳನ್ನು ರಚಿಸಿದರು. ಪೈ ಚಾರ್ಟ್ನ ಮೊದಲ ರೂಪಗಳಲ್ಲಿ ಒಂದನ್ನು ಅವಳಿಂದ ರಚಿಸಲಾಗಿದೆ. 1870 ರಲ್ಲಿ, ಅವರು ಮೊದಲ ಜಾತ್ಯತೀತ ನರ್ಸಿಂಗ್ ಶಾಲೆಯನ್ನು ಸ್ಥಾಪಿಸಿದರು. ಇದು ಲಂಡನ್ನ ಸೇಂಟ್ ಥಾಮಸ್ ಆಸ್ಪತ್ರೆಯ ಸಹಯೋಗದೊಂದಿಗೆ - ಇದು ಈಗ ಕಿಂಗ್ಸ್ ಕಾಲೇಜಿನ ಭಾಗವಾಗಿದೆ.



# ಮೋದಿ 75ನೇ ವರ್ಷಕ್ಕೆ ನಿವೃತ್ತಿ ಆಗಲ್ಲ

# ಗೃಹ ಸಚಿವ ಅಮಿತ್ ಶಾ ಹೇಳಿಕೆ



**ಹೈದರಾಬಾದ್:** ಪ್ರಧಾನಿ ನರೇಂದ್ರ ಮೋದಿ ಅವರು 75 ವರ್ಷ ತುಂಬಿದ ನಂತರ ನಿವೃತ್ತಿಯಾಗುವುದಿಲ್ಲ. ಅವರೇ ಮತ್ತೆ ಪ್ರಧಾನಿಯಾಗಿ ದೇಶ ಮುನ್ನಡೆಸಲು ಸಿದ್ಧತೆ ನಡೆಸುತ್ತಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶನಿವಾರ ಹೇಳಿದ್ದಾರೆ.

ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಜೈಲಿನಿಂದ ಬಿಡುಗಡೆಯಾದ ಒಂದು ದಿನದ ನಂತರ ಸುದ್ದಿಗೋಷ್ಠಿ ನಡೆಸಿ ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಈ ವೇಳೆ, ಇದೇ ವರ್ಷ ಸೆಪ್ಟೆಂಬರ್ ನಲ್ಲಿ ಪ್ರಧಾನಿ ಮೋದಿ ಅವರು 75ನೇ ವರ್ಷಕ್ಕೆ ಕಾಲಿಡುತ್ತಿದ್ದು, ಅವರ ಪಕ್ಷದ ನಿಯಮದ ಪ್ರಕಾರ 75 ವರ್ಷ ತುಂಬಿದವರು ನಿವೃತ್ತಿಯಾಗಬೇಕು ಅವರೇ 2014 ರಲ್ಲಿ ನಿಯಮ ಮಾಡಿದರು. ಹೀಗಾಗಿ ಮೋದಿ ಪ್ರಧಾನಿಯಾಗಿ ಮುಂದುವರೆಯಲು ಸಾಧ್ಯವಿಲ್ಲ. ಮೋದಿ ಬದಲು ಅಮಿತ್ ಶಾ ಪ್ರಧಾನಿಯಾಗುತ್ತಾರೆ. ಅಮಿತ್ ಶಾ ಪರವಾಗಿ ಮೋದಿ ಮತಯಾಚಿಸುತ್ತಿದ್ದಾರೆ ಎಂದು ಹೇಳಿದ್ದರು.

ಇಂದು ದೆಹಲಿ ಸಿಎಂ ಕೇಜ್ರಿವಾಲ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅಮಿತ್ ಶಾ, ಅರವಿಂದ್ ಕೇಜ್ರಿವಾಲ್ ಮತ್ತು ಕಂಪನಿ ಹಾಗೂ ಇಂಡಿಯಾ ಬ್ಲಾಕ್ಗೆ ನಾನು ಹೇಳಲು ಬಯಸುತ್ತೇನೆ, ಅಂತಹ ಯಾವುದೇ (75 ವರ್ಷಗಳ ಮಿತಿ ನಿಯಮ) ಬಿಜೆಪಿಯ ಸಂವಿಧಾನದಲ್ಲಿ ಇಲ್ಲ. ಮೋದಿ ಅವರು ತಮ್ಮ ಅಧಿಕಾರಾವಧಿಯನ್ನು ಪೂರ್ಣಗೊಳಿಸುತ್ತಾರೆ ಮತ್ತು ಮುಂದಿನ ಬಾರಿಯೂ ಅವರೇ ಪ್ರಧಾನಿಯಾಗಿ ಮುಂದುವರೆಯುತ್ತಾರೆ. ಈ ಬಿಜೆಪಿಯಲ್ಲಿ ಯಾವುದೇ ಗೊಂದಲವಿಲ್ಲ ಎಂದರು. ಸುಪ್ರೀಂ ಕೋರ್ಟ್ ನ ಮಧ್ಯಂತರ ಜಾಮೀನು ಕ್ಲೀನ್ ಚಿಟ್ ಎಂದು ಕೇಜ್ರಿವಾಲ್ ಭಾವಿಸಿದರೆ, ಅವರಿಗೆ ಕಾನೂನಿನ ಬಗ್ಗೆ ತಿಳುವಳಿಕೆ ಇಲ್ಲ ಎಂದರ್ಥ. ಅಬಕಾರಿ ನೀತಿ ಪ್ರಕರಣದಲ್ಲಿ ಅವರು ಆರೋಪಗಳಿಂದ ಮುಕ್ತರಾಗಿಲ್ಲ ಎಂದು ಅಮಿತ್ ಶಾ ತಿರುಗೇಟು ನೀಡಿದ್ದಾರೆ.

## ಪಲ್ಟಿಯಾದ ಲಾರಿಯಲ್ಲಿ 7 ಕೋಟಿ ರೂಪಾಯಿ ಪತ್ತೆ

**ಅಮರಾವತಿ:** ಪಲ್ಟಿಯಾದ ಲಾರಿಯಲ್ಲಿ ಬರೋಬ್ಬರಿ 7 ಕೋಟಿ ಹಣವನ್ನು ವಶಕ್ಕೆ ಪಡೆದ ಘಟನೆ ಆಂಧ್ರಪ್ರದೇಶದಲ್ಲಿ ನಡೆದಿದೆ. ಈ ಮೂಲಕ ಲೋಕಸಭಾ ಚುನಾವಣೆಗೂ ಮುನ್ನ ರಾಜ್ಯದಲ್ಲಿ ಎರಡನೇ ಬಾರಿ ದೊಡ್ಡ ಮೊತ್ತದ ಹಣವನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ವಾಹನ ವಿಜಯವಾಡದಿಂದ ವಿಶಾಖಪಟ್ಟಣಕ್ಕೆ ತೆರಳುತ್ತಿದ್ದಾಗ ಈ ಘಟನೆ ನಡೆದಿದೆ. ಪೂರ್ವ ಗೋದಾವರಿ ಪೊಲೀಸರು ವಾಹನದಿಂದ 7 ಬಾಕ್ಸ್ಗಳಲ್ಲಿ ತುಂಬಿದ್ದ 7 ಕೋಟಿ ರೂ. ಹಣವನ್ನು ವಶಪಡಿಸಿಕೊಂಡಿದ್ದಾರೆ. ನಲ್ಲಜರ್ಲ ಮಂಡಲದ ಅನಂತಪಲ್ಲಿ ಎಂಬಲ್ಲಿ ಲಾರಿಗೆ ಡಿಕ್ಕಿ ಹೊಡೆದು ಪಲ್ಟಿಯಾಗಿತ್ತು. ವಾಹನ ಪಲ್ಟಿಯಾಗುತ್ತಿದಂತೆಯೇ ಅದರಲ್ಲಿದ್ದ ಸುಮಾರು7 ರಟ್ಟಿನ ಡಬ್ಬಗಳನ್ನು ಒಂದು ಗೋಣಿಚೀಲದಿಂದ ಇನ್ನೊಂದು ಚೀಲಕ್ಕೆ ಹಾಕುತ್ತಿರುವುದನ್ನು ಗಮನಿಸಿದ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಸ್ಥಳಕ್ಕೆ ದೌಡಾಯಿಸಿದ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ವಶಪಡಿಸಿಕೊಂಡ ಮೊತ್ತ ಸುಮಾರು 7 ಕೋಟಿ ಎಂಬ ಮಾಹಿತಿ ಮೂಲಗಳಿಂದ ತಿಳಿದು ಬಂದಿದೆ. ಪಲ್ಟಿಯಾದ ವಾಹನದ ಚಾಲಕನಿಗೆ ಗಾಯಗಳಾಗಿದ್ದು, ಚಿಕಿತ್ಸೆಗಾಗಿ ಗೋಪಾಲಪುರಂ ಆಸ್ಪತ್ರೆಗೆ ರವಾನಿಸಲಾಗಿದೆ. ಈ ನಡುವೆ ಪೊಲೀಸರು ತನಿಖೆ ಆರಂಭಿಸಿದ್ದು, ನಗದು ಮೂಲವನ್ನು ಪತ್ತೆಹಚ್ಚಲು ಪ್ರಯತ್ನಿಸುತ್ತಿದ್ದಾರೆ. ಆಂಧ್ರಪ್ರದೇಶದಲ್ಲಿ ಮೇ 13ರಂದು ಚುನಾವಣೆ ನಡೆಯಲಿದೆ.



## ಜಿಯೋಫೈಬರ್, ಏರ್ ಫೈಬರ್ ಗ್ರಾಹಕರಿಗೆ 15 ಒಟಿಟಿ ಅಪ್ಲಿಕೇಷನ್ ಜತೆಗೆ ಪೋಸ್ಟ್ ಪೇಯ್ಡ್ ಪ್ಲಾನ್ 888 ಘೋಷಣೆ

**ನವದೆಹಲಿ:** ಜಿಯೋಫೈಬರ್ ಹಾಗೂ ಜಿಯೋ ಏರ್ ಫೈಬರ್ ಗ್ರಾಹರಿಗಾಗಿ ರಿಲಯನ್ಸ್ ಜಿಯೋದಿಂದ ಹೊಸ ಪೋಸ್ಟ್ ಪೇಯ್ಡ್ ಯೋಜನೆಯನ್ನು ಪರಿಚಯಿಸಲಾಗಿದೆ. ಯಾರು ಒಟಿಟಿ ಪ್ಲಾಟ್ ಫಾರ್ಮ್ ಗಳನ್ನು ಅತಿಹೆಚ್ಚು ಬಳಕೆ ಮಾಡುತ್ತೀರಿ, ಇಷ್ಟ ಪಡುತ್ತೀರಿ ಅಂಥವರಿಗೆ ಹೇಳಿಮಾಡಿಸಿದಂಥ ಯೋಜನೆ ಇದಾಗಿದ್ದು, ಪೋಸ್ಟ್ ಪೇಯ್ಡ್ ಒಟಿಟಿ ಜತೆಗೂಡಿ ಬರುತ್ತದೆ. ಇದರ ಅಡಿಯಲ್ಲಿ ಗ್ರಾಹಕರು ಹದಿನೈದು ಪ್ರೀಮಿಯಂ ಒಟಿಟಿ ಅಪ್ಲಿಕೇಷನ್ ಗಳನ್ನು ಪಡೆಯುತ್ತಾರೆ. ಇದರ ಜತೆಗೆ ಅನಿಯಮಿತ (ಅನ್ ಲಿಮಿಟೆಡ್) ಡೇಟಾ ಸಹ ದೊರೆಯುತ್ತಿದೆ. ಇದರಿಂದಾಗಿ ಗ್ರಾಹಕರು ತಮ್ಮ ಅಚ್ಚುಮೆಚ್ಚಿನ ಅಪ್ಲಿಕೇಷನ್ ಗಳಲ್ಲಿ ಯಾವಾಗ ಮತ್ತು ಎಲ್ಲಿ ಬೇಕಾದರೂ ಕಾರ್ಯಕ್ರಮಗಳ ವೀಕ್ಷಣೆ ಮಾಡಬಹುದು. ಅಂದ ಹಾಗೆ ಈ ಪ್ಲಾನ್ ಗೆ ತಿಂಗಳಿಗೆ 888 ರೂಪಾಯಿ ಆಗಲಿದ್ದು, ಜಿಯೋಫೈಬರ್ ಹಾಗೂ ಜಿಯೋ ಏರ್ ಫೈಬರ್ ಗ್ರಾಹರಿಗಾಗಿ ಲಭ್ಯವಿದೆ.

ಈ ಹೊಸ ಯೋಜನೆಯ ಅಡಿಯಲ್ಲಿ ಗ್ರಾಹಕರು 30 ಎಂಬಿಪಿಎಸ್ ವೇಗವನ್ನು ಪಡೆಯುತ್ತಾರೆ. ಇದರ ಜತೆಗೆ ನೆಟ್ಫ್ಲಿಕ್ಸ್ ಬೇಸಿಕ್ ಪ್ಲಾನ್, ಅಮೆಜಾನ್ ಪ್ರೈಮ್, ಜಿಯೋಸಿನಿಮಾ ಪ್ರೀಮಿಯಂ ರೀತಿಯ ಹದಿನೈದಕ್ಕೂ ಹೆಚ್ಚು ಪ್ರಮುಖ ಒಟಿಟಿ ಅಪ್ಲಿಕೇಷನ್ ಗಳು ದೊರೆಯುತ್ತವೆ. ಈ ಅಪ್ಲಿಕೇಷನ್ ನ ಸಬ್ ಸ್ಕ್ರಿಪ್ಷನ್ ದೊರೆಯುವುದು ಯೋಜನೆಯ ಜತೆಗೆ ಮಾತ್ರ. ಈ ಯೋಜನೆಯಮ್ಮು ಹೊಸ ಚಂದಾದಾರಷ್ಟೇ ಅಲ್ಲ, 10 ಅಥವಾ 30 ಎಂಬಿಪಿಎಸ್ ಯೋಜನೆಯನ್ನು ಈಗಾಗಲೇ ಬಳಸುತ್ತಿರುವ ಜಿಯೋದ ಈಗಿನ ಬಳಕೆದಾರರು ಸಹ ಪಡೆಯಬಹುದು.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕೆಂದರೆ, 888 ರೂಪಾಯಿಯ ಪೋಸ್ಟ್ಪೇಯ್ಡ್ ಯೋಜನೆ ಪ್ರತಿಯೊಬ್ಬರಿಗೂ ಎಲ್ಲರಿಗೂ ದೊರೆಯುತ್ತದೆ. ಇನ್ನು ಸದ್ಯಕ್ಕೆ ಪ್ರಿಪೇಯ್ಡ್ ಯೋಜನೆ ಹೊಂದಿರುವ ಗ್ರಾಹಕರು ಈ ಹೊಸ ಪೋಸ್ಟ್ ಪೇಯ್ಡ್ ಯೋಜನೆಗೆ ಅಪ್ ಗ್ರೇಡ್ ಮಾಡಬಹುದು.

ಇನ್ನೂ ಒಂದು ವಿಚಾರ ನಿಮಗೆ ಗೊತ್ತಿರಲಿ. ಇತ್ತೀಚೆಗೆ ಘೋಷಣೆಯಾದ ಜಿಯೋ ಐಪಿಎಲ್ ಧನ್ ಧನಾ ಧನ್ ಆಫರ್ ಕೂಡ ಈ ಯೋಜನೆಗೆ ಅನ್ವಯಿಸುತ್ತದೆ. ಜಿಯೋಫೈಬರ್ ಅಥವಾ ಏರ್ ಫೈಬರ್ ನ ಅರ್ಹ ಗ್ರಾಹಕರು ತಮ್ಮ ಜಿಯೋ ಹೋಮ್ ಬ್ರಾಡ್ ಬ್ಯಾಂಡ್ ಸಂಪರ್ಕದಲ್ಲಿ ಐವತ್ತು ದಿನ ರಿಯಾಯಿತಿ ಕ್ರೆಡಿಟ್ ವೋಚರ್ ಸಹ ಪಡೆಯಬಹುದು. ಈ ಪ್ಲಾನ್ ಮೇ 31, 2024ರ ವರೆಗೆ ಲಭ್ಯವಿರುತ್ತದೆ, ಜಿಯೋ ಡಿಡಿಡಿ ಕೊಡುಗೆಯನ್ನು ವಿಶೇಷವಾಗಿ ಟಿ20 ಋತುವಿಗಾಗಿ ವಿನ್ಯಾಸಗೊಳಿಸಲಾಗಿದೆ.




ಭಾರತದಲ್ಲಿ ಲೋಕಸಭೆ ಚುನಾವಣೆ ಕುರಿತು ನಿರಂತರವಾಗಿ ಪ್ರತಿಕ್ರಿಯಿಸುತ್ತಿರುವ ಪಾಕಿಸ್ತಾನದ ಮಾಜಿ ಸಚಿವ ಫವಾದ್ ಚೌಧರಿ, ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಗೆ ಜಾಮೀನು ಸಿಕ್ಕಿರುವುದನ್ನು ಶ್ಲಾಘಿಸಿದ್ದು, ಇದು ಪ್ರಧಾನಿ ನರೇಂದ್ರ ಮೋದಿಗೆ ಮತ್ತೊಂದು ಸೋಲು ಎಂದು ಹೇಳಿದ್ದಾರೆ.

# ಕೇಜ್ರಿವಾಲ್ ಗೆ ಜಾಮೀನು, ಮೋದಿಗೆ ಸೋಲು: ಪಾಕ್ ಮಾಜಿ ಸಚಿವ







**ಇಸ್ಲಾಮಾಬಾದ್:** ಭಾರತದಲ್ಲಿ ಲೋಕಸಭೆ ಚುನಾವಣೆ ಕುರಿತು ನಿರಂತರವಾಗಿ ಪ್ರತಿಕ್ರಿಯಿಸುತ್ತಿರುವ ಪಾಕಿಸ್ತಾನದ ಮಾಜಿ ಸಚಿವ ಫವಾದ್ ಚೌಧರಿ, ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಗೆ ಜಾಮೀನು ಸಿಕ್ಕಿರುವುದನ್ನು ಶ್ಲಾಘಿಸಿದ್ದು, ಇದು ಪ್ರಧಾನಿ ನರೇಂದ್ರ ಮೋದಿಗೆ ಮತ್ತೊಂದು ಸೋಲು ಎಂದು ಹೇಳಿದ್ದಾರೆ.

ಸುಪ್ರೀಂ ಕೋರ್ಟ್‌ನ ಮಧ್ಯಂತರ ಜಾಮೀನಿನ ನಂತರ ಕೇಜ್ರಿವಾಲ್ ತಿಹಾರ್ ಜೈಲಿನಿಂದ ಬಿಡುಗಡೆಯಾಗಿದ್ದರು. ಇದನ್ನು ಮುಂದಿಟ್ಟುಕೊಂಡು ಫವಾದ್ ಚೌಧರಿ ಇದು ಪ್ರಧಾನಿ ಮೋದಿ ಮತ್ತೊಂದು ಯುದ್ಧದಲ್ಲಿ ಸೋತಿದ್ದಾರೆ ಎಂದು ಹೇಳುವ ಮೂಲಕ ಭಾರತದ ಆಂತರಿಕ ವಿಷಯದಲ್ಲಿ ಮೂಗು ತೂರಿಸಿದ್ದಾರೆ.ನಾಗರಿಕ ಸಮಾಜ, ಬಾರ್ ಅಸೋಸಿಯೇಷನ್‌ಗಳು, ಮಾಧ್ಯಮ ಸಂಸ್ಥೆಗಳು ಮತ್ತು ಮಾನವ ಹಕ್ಕುಗಳ ಸಂಘಟನೆಗಳು ಸಂಪೂರ್ಣವಾಗಿ ಮೌನವಾಗಿವೆ ಎಂದು ಪಾಕಿಸ್ತಾನಿ ನಾಯಕ ತಮ್ಮದೇ ದೇಶದ ಕಾನೂನಿನ ಆಡಳಿತದ ಬಗ್ಗೆ ವಿಷಾದಿಸಿದರು.

ಇಸ್ಲಾಮಾಬಾದ್‌ನ ನ್ಯಾಯಾಧೀಶರ ಐತಿಹಾಸಿಕ ನಿಲುವಿನ ಪರಿಣಾಮವಾಗಿ ನ್ಯಾಯಾಂಗವು ಸ್ತಬ್ಧವಾಗಿದೆ. ನಾಗರಿಕ ಸಮಾಜ, ವಕೀಲರ ಸಂಘಗಳು, ಮಾಧ್ಯಮ ಸಂಸ್ಥೆಗಳು, ಮಾನವ ಹಕ್ಕುಗಳ ಸಂಘಟನೆಗಳು ಸಂಪೂರ್ಣವಾಗಿ ಮೌನವಾಗಿರುವುದು ಸಮಸ್ಯೆಯಾಗಿದೆ. ಕಾನೂನಿನ ಭವಿಷ್ಯವು ಅಪಾಯದಲ್ಲಿದೆ ಎಂದು ಅವರು ಮತ್ತೊಂದು ಎಕ್ಸ್ ಪೋಸ್ಟ್‌ನಲ್ಲಿ ಹೇಳಿದರು.

ಆಮ್ ಆದ್ಮಿ ಪಕ್ಷದ (ಎಎಪಿ) ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಅವರು 50 ದಿನಗಳಿಗಿಂತ ಹೆಚ್ಚು ಕಾಲ ಕಳೆದ ನಂತರ ಶುಕ್ರವಾರ ತಿಹಾರ್ ಜೈಲಿನಿಂದ ಹೊರಬಂದರು. ನಡೆಯುತ್ತಿರುವ ಲೋಕಸಭೆ ಚುನಾವಣೆಯಲ್ಲಿ ಪ್ರಚಾರಕ್ಕಾಗಿ ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ದೆಹಲಿ ಮದ್ಯದ ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಮಾರ್ಚ್ 21 ರಂದು ಜಾರಿ ನಿರ್ದೇಶನಾಲಯ (ಇಡಿ) ನಿಂದ ಬಂಧಿಸಲ್ಪಟ್ಟಿದ್ದ ಕೇಜ್ರಿವಾಲ್ ಅವರಿಗೆ ಜೂನ್ 1 ರವರೆಗೆ ಮಧ್ಯಂತರ ಜಾಮೀನು ನೀಡಲಾಗಿದೆ.

## ಕರೀನಾ ಕಪೂರ್ಗೆ ಕೋರ್ಟ್ ನೋಟಿಸ್

**ಭೂಪಾಲ್ :** ಗರ್ಭಧಾರಣೆಗೆ (ಪ್ರಗ್ನೆನ್ಸಿ) ಸಂಬಂಧಿಸಿದಂತೆ ಬರೆದ ಪುಸ್ತಕದ ಶೀರ್ಷಿಕೆಯಲ್ಲಿ 'ಬೈಬಲ್' ಪದ ಬಳಕೆ ಮಾಡಿದಕ್ಕಾಗಿ ಮಧ್ಯಪ್ರದೇಶ ಹೈಕೋರ್ಟ್ ಬಾಲಿವುಡ್ ನಟಿ ಕರೀನಾ ಕಪೂರ್ ಅವರಿಗೆ ನೋಟಿಸ್ ನೀಡಿದೆ. 2021ರಲ್ಲಿ 'ಕರೀನಾ ಕಪೂರ್ ಪ್ರೆಗ್ನೆನ್ಸಿ ಬೈಬಲ್: ದಿ ಅಲ್ಟಿಮೇಟ್ ಮ್ಯಾನ್ಯುಯಲ್ ಫಾರ್ ಮಾಮ್ಸ್-ಟು-ಬಿ' ಪುಸ್ತಕ ಬಿಡುಗಡೆಯಾಗಿದ್ದು, ಗರ್ಭಧಾರಣೆ ಸಂಬಂಧಿಸಿದ ಅನುಭವಗಳನ್ನು ಈ ಪುಸ್ತಕದಲ್ಲಿ ಹಂಚಿಕೊಂಡಿದ್ದರು. ಆದರೆ ಪುಸ್ತಕದ ಶೀರ್ಷಿಕೆ ವಿರುದ್ಧ ನ್ಯಾಯಾಲಯದ ಮೆಟ್ಟಿಲೇರಿದ ವಕೀಲ ಕ್ರಿಸ್ಟೋಫರ್ ಆಯಂಟನಿ, ಶೀರ್ಷಿಕೆಯಿಂದ 'ಬೈಬಲ್' ಪದವನ್ನು ತೆಗೆದುಹಾಕುವಂತೆ ಮನವಿ ಮಾಡಿದ್ದರು. ಅಲ್ಲದೇ ಇದು ಕ್ರಿಶ್ಚಿಯನ್ ಸಮುದಾಯದ ಭಾವನೆಗಳಿಗೆ ನೋವುಂಟು ಮಾಡಿದೆ ಎಂದು ತಿಳಿಸಿದ್ದರು. ಅರ್ಜಿ ವಿಚಾರಣೆ ಮಾಡಿದ ನ್ಯಾಯಮೂರ್ತಿ ಜಿ.ಎಸ್. ಅಹ್ಲುವಾಲಿಯಾ ಅವರಿದ್ದ ಏಕಸದಸ್ಯ ಪೀಠ ನೋಟಿಸ್ ಜಾರಿ ಮಾಡಿದೆ.



## ಪ್ರವಾಹಕ್ಕೆ ಅಫ್ಘಾನಿಸ್ತಾನ ತತ್ತರ

ಅಫ್ಘಾನಿಸ್ತಾನ: ಅಫ್ಘಾನಿಸ್ತಾನದಲ್ಲಿ ಭಾರೀ ಮಳೆಯಿಂದ ಪ್ರವಾಹ ಉಂಟಾಗಿದೆ. ಈ ಪ್ರವಾಹದಿಂದಾಗಿ ಸುಮಾರು 200ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ ಎಂದು ವಿಶ್ವಸಂಸ್ಥೆ ಶನಿವಾರ ತಿಳಿಸಿದೆ. ಉತ್ತರ ಅಫಘಾನಿಸ್ತಾನ ಭಾಗದಲ್ಲಿ ಕಳೆದೆರಡು ದಿನಗಳಿಂದ ಭಾರೀ ಮಳೆ ಸುರಿಯುತ್ತಿದ್ದು ನದಿಗಳಲ್ಲೇ ಉಕ್ಕಿ ಹರಿಯುತ್ತಿದೆ. ಜನವಸತಿ ಪ್ರದೇಶಗಳು ಸಂಪೂರ್ಣವಾಗಿ ಜಲಾವೃತವಾಗಿದ್ದು ಜನ ಜೀವನ ಅಸ್ತವ್ಯಸ್ತವಾಗಿದೆ. ಅಲ್ಲದೇ ಪ್ರವಾಹದಿಂದಾಗಿ ಸುಮಾರು ನೂರಾರು ಜನರು ಗಾಯಗೊಂಡಿದ್ದಾರೆ. ಇನ್ನು ಹಲವರು ಪ್ರವಾಹದಲ್ಲಿ ಬಂದ ಮಣ್ಣಿನಡಿಗೆ ಸಿಲುಕಿ ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದೆ. ಸದ್ಯ ರಾಷ್ಟ್ರೀಯ ಸೇವೆ ಮತ್ತು ಭದ್ರತಾ ಪಡೆಗಳು ಅವಶೇಷದಡಿ ಸಿಲುಕಿರುವ ಮೃತ ದೇಹಗಳನ್ನು ಹೊರ ತೆಗೆಯುವ ಕೆಲಸ ಮಾಡುತ್ತಿದ್ದಾರೆ.



# ಚಿಕಾಗೋದಲ್ಲಿ ಭಾರತೀಯ ವಿದ್ಯಾರ್ಥಿ ನಾಪತ್ತೆ

**ವಾಷಿಂಗ್ಟನ್:** 26 ವರ್ಷದ ಭಾರತ ಮೂಲದ ವಿದ್ಯಾರ್ಥಿಯೊಬ್ಬ ಮೇ .2ರಿಂದ ಅಮೆರಿಕದ ಚಿಕಾಗೋ ನಗರದಿಂದ ನಾಪತ್ತೆಯಾಗಿದ್ದು, ಕುಟುಂಬಸ್ಥರು ಕಂಗಾಲಾಗಿದ್ದಾರೆ.

ನಾಪತ್ತೆಯಾಗಿರುವ ವಿದ್ಯಾರ್ಥಿಯನ್ನು ಹೈದರಾಬಾದ್ ಮೂಲದ ರೂಪೇಶ್ ಚಂದ್ರ ಚಿಂತಕಿಂಡಿ (26 ವರ್ಷ) ಎನ್ನಲಾಗಿದ್ದು, ಈತ ಕಳೆದ ಮೇ 2 ರಿಂದ ನಾಪತ್ತೆಯಾಗಿದ್ದಾನೆ ಎಂದು ಹೇಳಲಾಗಿದೆ.

ಚಿಕಾಗೋದಲ್ಲಿರುವ ಕಾನ್ಸುಲೇಟ್ ಜನರಲ್ ಆಫ್ ಇಂಡಿಯಾ (ಸಿಜಿಐ) ಮತ್ತು ಸ್ಥಳೀಯ ಪೊಲೀಸರು ವಿಸ್ಕಾನ್ಸಿನ್‌ನ ಕಾನ್ಕಾರ್ಡಿಯಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿ ಚಿಂತಕಿಂಡಿಯನ್ನು ಪತ್ತೆಹಚ್ಚಲು ಪ್ರಯತ್ನಿಸುತ್ತಿದ್ದಾರೆ ಎಂದು ವರದಿಗಳು ತಿಳಿಸಿವೆ. ಇತ್ತೀಚಿನ ದಿನಗಳಲ್ಲಿ ಅಮೇರಿಕಾದಲ್ಲಿ ಭಾರತೀಯ ವಿದ್ಯಾರ್ಥಿಗಳು ಕಾಣೆಯಾಗುತ್ತಿರುವ ವರದಿಗಳು ಹೆಚ್ಚಾಗುತ್ತಿರುವ ಸಮಯದಲ್ಲೇ ಈ ಪ್ರಕರಣ ಬೆಳಕಿಗೆ ಬಂದಿದೆ.

## ತಾಯಿ, ಪತ್ನಿ, ಮೂವರು ಮಕ್ಕಳನ್ನು ಕೊಂದು ಉದ್ಯಮಿ ಆತ್ಮಹತ್ಯೆಗೆ ಶರಣು

**ಸೀತಾಪುರ:** ಉತ್ತರ ಪ್ರದೇಶದ ಸೀತಾಪುರದ ಉದ್ಯಮಿಯೊಬ್ಬರು ತನ್ನ ತಾಯಿ, ಪತ್ನಿ ಮತ್ತು ಮೂವರು ಅಪ್ರಾಪ್ತ ಮಕ್ಕಳು ಸೇರಿದಂತೆ ಕುಟುಂಬದ ಐವರನ್ನು ಕೊಲೆ ಮಾಡಿ, ಬಳಿಕ ತಾನೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಜಿಲ್ಲಾ ಪೊಲೀಸರ ಪ್ರಕಾರ, ಐವರನ್ನು ಕೊಂದ ಅನುರಾಗ್ ಸಿಂಗ್(45)ಗೆ ಕುಡಿತದ ಚಟ ಇತ್ತು.

ಮೃತರನ್ನು ಅನುರಾಗ್ ಸಿಂಗ್ ಅವರ ತಾಯಿ ಸಾವಿತ್ರಿ ದೇವಿ(60), ಅವರ ಪತ್ನಿ ಪ್ರಿಯಾಂಕಾ(40), ಮತ್ತು ಅವರ ಮೂವರು ಪುತ್ರಿಯರಾದ ಅಶ್ವಿನಿ (12), ಅಶ್ವಿ (10) ಮತ್ತು ಮಗ ಅದ್ವೈತ್ (6) ಎಂದು ಗುರುತಿಸಲಾಗಿದೆ. ಶನಿವಾರ ಬೆಳಗ್ಗೆ ಸೀತಾಪುರದ ರಾಂಪುರ ಪೊಲೀಸ್ ಠಾಣೆ ವ್ಯಾಪ್ತಿಯ ಪಾಲಾಪುರ ಗ್ರಾಮದಲ್ಲಿ ಈ ಘಟನೆ ವರದಿಯಾಗಿದೆ. ವ್ಯಕ್ತಿಯೊಬ್ಬ ತನ್ನ ನಿವಾಸದಲ್ಲಿ ತನ್ನ ಕುಟುಂಬ ಸದಸ್ಯರನ್ನು ಕೊಲ್ಲಲು ಯತ್ನಿಸುತ್ತಿರುವ ಬಗ್ಗೆ ಪೊಲೀಸರಿಗೆ ಮಾಹಿತಿ ಲಭಿಸಿದೆ.

ತಕ್ಷಣವೇ ಪೊಲೀಸ್ ತಂಡ ಸ್ಥಳಕ್ಕೆ ಧಾವಿಸಿದೆ. ಆದರೆ ಅಷ್ಟರೊಳಗೆ ಸರಣಿ ಕೊಲೆ ನಡೆದಿದೆ. ಇಬ್ಬರು ಅಪ್ರಾಪ್ತ ಮಕ್ಕಳ ಶವಗಳು ಮನೆಯ ಹೊರಗೆ ಮತ್ತು ಇತರರ ಶವ ಮನೆಯೊಳಗೆ ಪತ್ತೆಯಾಗಿವೆ ಎಂದು ಸೀತಾಪುರ ಪೊಲೀಸ್ ವರಿಷ್ಠಾಧಿಕಾರಿ ಚಕ್ರೇಶ್ ಮಿಶ್ರಾ ಅವರು ತಿಳಿಸಿದ್ದಾರೆ.

ಅನುರಾಗ್ ಮತ್ತು ಅವರ ಪತ್ನಿಯ ದೇಹದ ಮೇಲೆ ಮಾತ್ರ ಗುಂಡೇಟಿನ ಗಾಯಗಳು ಕಂಡುಬಂದಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತ್ಯಕ್ಷದರ್ಶಿಗಳ ಪ್ರಕಾರ, ತಾಯಿಯ ತಲೆಗೆ ಮತ್ತು ಮಕ್ಕಳಿಗೆ ಸುತ್ತಿಗೆಯಿಂದ ಹೊಡೆದು, ನಂತರ ಮನೆಯ ಎರಡನೇ ಮಹಡಿಯ ಬಾಲ್ಕನಿಯಿಂದ ನೆಲ ಮಹಡಿಗೆ ಎಸೆದಿದ್ದಾರೆ.

ಅನುರಾಗ್ ಸಿಂಗ್ ಕುಡಿತದ ಚಟ ಮತ್ತು ಮಾದಕ ವ್ಯಸನಿಯಾಗಿದ್ದ. ಹೀಗಾಗಿ ತನ್ನನ್ನು ವ್ಯಸನಮುಕ್ತ ಕೇಂದ್ರಕ್ಕೆ ಸೇರಿಸಲು ಉದ್ದೇಶಿಸಿದ್ದ ಕುಟುಂಬ ಸದಸ್ಯರೊಂದಿಗೆ ಜಗಳ ಮಾಡಿದ್ದಾನೆ ಎಂದು ಸೀತಾಪುರ ಎಸ್ಪಿ ಚಕ್ರೇಶ್ ಮಿಶ್ರಾ ಅವರು ಹೇಳಿದ್ದಾರೆ.

## ಪನ್ನೂನ್ ಹತ್ಯೆ ಆರೋಪ ಸಾಬೀತಾದ ಬಳಿಕ ಮಾತನಾಡುತ್ತೇವೆ

ವಾಷಿಂಗ್ಟನ್: ಖಾಲಿಸ್ತಾನ್ ಮುಖಂಡ ಗುರುಪತ್ವಂತ್ ಸಿಂಗ್ ಪನ್ನೂನ್ ಹತ್ಯೆ ಪ್ರಕರಣದ ಬಗ್ಗೆ ನಡೆಯುತ್ತಿರುವ ತನಿಖೆಯು ಕಾನೂನು ಪ್ರಕ್ರಿಯೆಯ ಭಾಗವಾಗಿದೆ ಮತ್ತು ಇನ್ನೂ ನ್ಯಾಯಾಧೀಶರ ಮುಂದೆ ಸಾಬೀತಾಗಿಲ್ಲ. ಆರೋಪ ಸಾಬೀತಾಗುವವರೆಗೆ ಈ ವಿಷಯದಲ್ಲಿ ಮಾತನಾಡುವುದಿಲ್ಲ ಎಂದು ಅಮೆರಿಕದ ವಿದೇಶಾಂಗ ಇಲಾಖೆ ಹೇಳಿದೆ.

ಭಾರತವು ಭಯೋತ್ಪಾದಕನೆಂದು ನಿಯೋಜಿಸಿರುವ ಪನ್ನೂನ್ ಅಮೆರಿಕ ಮತ್ತು ಕೆನಡಾದ ಅವಳಿ ಪೌರತ್ವ ಹೊಂದಿದ್ದಾನೆ. 'ಆಪಾದಿತ ವಿಷಯ ಅಥವಾ ಆರೋಪಗಳನ್ನು ಹೊಂದಿರುವ ಸಾರ್ವಜನಿಕ ದೋಷಾರೋಪಣೆ ಇದೆ. ಅದನ್ನು ಯಾರು ಬೇಕಾದರೂ ಓದಬಹುದು. ತೀರ್ಪುಗಾರರ ಎದುರು ಸಾಬೀತಾಗುವವರೆಗೆ ಈ ಬಗ್ಗೆ ಮಾತನಾಡುವುದಿಲ್ಲ' ಎಂದು ಅಮೆರಿಕದ ವಿದೇಶಾಂಗ ಇಲಾಖೆಯ ವಕ್ತಾರ ಮ್ಯಾಥ್ಯೂ ಮಿಲರ್ ಹೇಳಿದ್ದಾರೆ.

## ವೈಸಿಪಿ ಅಭ್ಯರ್ಥಿ ಪರ ಅಲ್ಲು ಅರ್ಜುನ್ ಪ್ರಚಾರ!

ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ವಿಜೇತ ನಟ ಅಲ್ಲು ಅರ್ಜುನ್ ಅವರು ನಂದ್ಯಾಲ ಹಾಲಿ ಶಾಸಕ ಹಾಗೂ ವೈಸಿಪಿ ಶಾಸಕಿ ಶಿಲ್ಪಾ ರವಿಚಂದ್ರ ಕಿಶೋರ್ ರೆಡ್ಡಿ ಮನೆಗೆ ಭೇಟಿ ನೀಡಿರುವುದು ಆಂಧ್ರ ಚುನಾವಣಾ ಪ್ರಚಾರಕ್ಕೆ ಮತ್ತಷ್ಟು ವೇಗ ತಂದಿದೆ.

ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ವಿಜೇತ ನಟ ಅಲ್ಲು ಅರ್ಜುನ್ ಅವರು ನಂದ್ಯಾಲ ಹಾಲಿ ಶಾಸಕ ಹಾಗೂ ವೈಸಿಪಿ ಶಾಸಕಿ ಶಿಲ್ಪಾ ರವಿಚಂದ್ರ ಕಿಶೋರ್ ರೆಡ್ಡಿ ಮನೆಗೆ ಭೇಟಿ ನೀಡಿರುವುದು ಆಂಧ್ರ ಚುನಾವಣಾ ಪ್ರಚಾರಕ್ಕೆ ಮತ್ತಷ್ಟು ವೇಗ ತಂದಿದೆ. ಒಂದೆಡೆ ಮೈತ್ರಿಕೂಟದ ಪರವಾಗಿ ಪವನ್ ಕಲ್ಯಾಣ್ ಕಣಕ್ಕಿಳಿಯುತ್ತಿದ್ದು, ಇದೇ ವೇಳೆ ಅಲ್ಲು ಅರ್ಜುನ್ ಮತ್ತು ಶಿಲ್ಪಾ ಮೋಹನ್ ರೆಡ್ಡಿ ಕುಟುಂಬಸ್ಥರಿಗೆ ಶುಭಾಶಯ ಕೋರುತ್ತಿರುವುದು ರಾಜಕೀಯ ಚರ್ಚೆಗೆ ಗ್ರಾಸವಾಗಿದೆ.



ಮೆಗಾಸ್ಟಾರ್ ಚಿರಂಜೀವಿ ಕುಟುಂಬಕ್ಕೆ ಸೇರಿದ ನಟ ಅಲ್ಲು ಅರ್ಜುನ್ ಚುನಾವಣೆ ಹತ್ತಿರ ಬರುತ್ತಿದ್ದಂತೆ ಸೋದರ ಮಾವ ಪವನ್ ಕಲ್ಯಾಣ್‌ಗೆ ಶಾಕ್ ನೀಡಿದ್ದಾರೆ. ಆಂಧ್ರ ಪ್ರದೇಶ ಚುನಾವಣೆಯಲ್ಲಿ ಎದುರಾಳಿಯಾಗಿರುವ ವೈಎಸ್‌ಆರ್‌ಸಿಪಿ ಪಕ್ಷದ ಅಭ್ಯರ್ಥಿ ಪರ ಪ್ರಚಾರ ಮಾಡುವ ಮೂಲಕ ಮೆಗಾ ಕುಟುಂಬಕ್ಕೆ ಶಾಕ್ ಕೊಟ್ಟಿದ್ದಾರೆ. ಚುನಾವಣಾ ಪ್ರಚಾರದ ಕೊನೆಯ ದಿನ ಒಂದೇ ಕುಟುಂಬದ ಇಬ್ಬರು ಸ್ಟಾರ್ ಹೀರೋಗಳು ಎರಡು ರಾಜಕೀಯ ಪಕ್ಷಗಳ ಅಭ್ಯರ್ಥಿಗಳನ್ನು ಭೇಟಿ ಮಾಡಲು ಹೊರಟಿರುವುದು ರಾಜಕೀಯ ಕೋಲಾಹಲಕ್ಕೆ ಕಾರಣವಾಗಿತ್ತು. ನಿನ್ನೆ ಅಲ್ಲು ಅರ್ಜುನ್ ಅವರು ಪವನ್ ಕಲ್ಯಾಣ್ ಜೊತೆ ಕಾಣಿಸಿಕೊಂಡಿದ್ದರು. ಇಂದು ವೈಸಿಪಿ ಶಾಸಕಿ ಶಿಲ್ಪಾ ರವಿಚಂದ್ರ ಜೊತೆ ಕಾಣಿಸಿಕೊಂಡಿದ್ದು ಈ ಎರಡು ಘಟನೆಗಳು ಆಂಧ್ರಪ್ರದೇಶ ಮತದಾರರನ್ನು ಗೊಂದಲಕ್ಕೀಡು ಮಾಡಿದಂತಿದೆ.

## ಪಾಕ್ ಡ್ರೋನ್ ಹೊಡೆದುರುಳಿಸಿದ ಬಿಎಸ್‌ಎಫ್

**ಸಾಂಬಾ:** ಜಮ್ಮು ಮತ್ತು ಕಾಶ್ಮೀರದ ಸಾಂಬಾ ಜಿಲ್ಲೆಯ ಅಂತರರಾಷ್ಟ್ರೀಯ ಗಡಿ ಬಳಿ ಪಾಕಿಸ್ತಾನದ ಡ್ರೋನ್ ಅನ್ನು ಗಡಿ ಭದ್ರತಾ ಪಡೆ (ಬಿಎಸ್ ಎಫ್) ಹೊಡೆದುರುಳಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಿಎಸ್‌ಎಫ್ ಪಡೆಗಳು ಶುಕ್ರವಾರ ತಡರಾತ್ರಿ ಪಾಕ್ ಗಡಿಯಲ್ಲಿ ಡ್ರೋನ್ ಹಾರಾಟ ನಡೆಸುತ್ತಿರುವುದನ್ನು ಪತ್ತೆ ಹಚ್ಚಿದ್ದರು. ಕೂಡಲೇ ಹಲವು ಸುತ್ತು ಗುಂಡು ಹಾರಿಸುವ ಮೂಲಕ ಡ್ರೋನ್ ಅನ್ನು ಹೊಡೆದುರುಳಿಸಿದ್ದಾರೆ.



## ಉತ್ತರ ಪ್ರದೇಶದಲ್ಲಿ ಮ್ಯಾಗಿ ಸೇವಿಸಿ ಬಾಲಕ ಸಾವು

ಉತ್ತರ ಪ್ರದೇಶದ ಪಿಲಿಭಿತ್ ಜಿಲ್ಲೆಯಲ್ಲಿ ಬಾಲಕನೊಬ್ಬ ಅನ್ನದೊಂದಿಗೆ ಮ್ಯಾಗಿ ಸೇವಿಸಿ ಸಾವನ್ನಪ್ಪಿದ್ದಾನೆ. ಅವರ ಕುಟುಂಬದ ಇತರ ಐದು ಸದಸ್ಯರನ್ನ ಆಸ್ಪತ್ರೆಗೆ ದಾಖಲಿಸಲಾಗಿದೆ.



ಅದೇ ದಿನ ರಾತ್ರಿ, ಸೀಮಾ ಅವರ ಪತ್ನಿ ಸೋನು, ಮಗ ರೋಹನ್, ವಿವೇಕ್, ಪುತ್ರಿಯರಾದ ಸಂಧ್ಯಾ, ಸಂಜನಾ ಮತ್ತು ಸಂಜು ಅವರ ಸ್ಥಿತಿ ಹದಗೆಟ್ಟಿತು.

ಮಾಹಿತಿಯ ಪ್ರಕಾರ, ಈ ಎಲ್ಲಾ ಜನರು ಮ್ಯಾಗಿ ಸೇವಿಸಿದ್ದರು, ನಂತರ ಎಲ್ಲರೂ ವಾಂತಿ ಮತ್ತು ಅತಿಸಾರ ಪ್ರಾರಂಭಿಸಿದರು. ಶುಕ್ರವಾರ ಬೆಳಿಗ್ಗೆ, ಎಲ್ಲರನ್ನೂ ಚಿಕಿತ್ಸೆಗಾಗಿ ಗ್ರಾಮದ ಕ್ಲಿನಿಕ್ಗೆ ದಾಖಲಿಸಲಾಯಿತು. ಕುಟುಂಬ ಸದಸ್ಯರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಸೀಮಾ ಅವರ ಇನ್ನೊಬ್ಬ ಮಗ ವಿವೇಕ್ ಅವರ ಸ್ಥಿತಿ ಸುಧಾರಿಸದ ಕಾರಣ, ಆತನನ್ನ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಕುಟುಂಬದ ಎಲ್ಲಾ ಸದಸ್ಯರು ಒಟ್ಟಿಗೆ ಅನಾರೋಗ್ಯಕ್ಕೆ ಒಳಗಾದ ಕಾರಣ ಭೀತಿ ಇತ್ತು. ಅನಾರೋಗ್ಯಕ್ಕೆ ಒಳಗಾದ ಎಲ್ಲಾ ಜನರಲ್ಲಿ ಆಹಾರ ವಿಷದ ಲಕ್ಷಣಗಳಿವೆ ಎಂದು ಸಿಎಚ್ಸಿಯ ಡಾ.ರಶೀದ್ ಹೇಳಿದರು.

# ಗೂಗಲ್‌ನಿಂದ ಮತ್ತಷ್ಟು ಉದ್ಯೋಗಿಗಳು ಕೆಲಸದಿಂದ ವಜಾ

2024ರ ಆರಂಭದಿಂದಲೂ, ಗೂಗಲ್ ನೂರಾರು ಉದ್ಯೋಗಿಗಳನ್ನು ವಜಾಗೊಳಿಸಿದೆ. ಅಷ್ಟೇ ಅಲ್ಲದೆ 2023ರಲ್ಲಿ 12,000 ಉದ್ಯೋಗಿಗಳ ಸಾಮೂಹಿಕ ವಜಾಗೊಳಿಸುವಿಕೆಯಂತಲ್ಲದೆ, ಈ ವರ್ಷದ ಕಡಿತವು ಕ್ರಮೇಣ ಮತ್ತು ಸಣ್ಣ ಬ್ಯಾಚ್ಗಳಲ್ಲಿ ಸಂಭವಿಸಿದೆ. ಇದರಿಂದಾಗಿ ಸಾವಿರಾರು ಜನರು ಉದ್ಯೋಗ ಕಳೆದುಕೊಂಡಿದ್ದಾರೆ. ಈ ಬೆನ್ನಲ್ಲೇ ಗೂಗಲ್ ಸಿಇಒ ಸುಂದರ್ ಪಿಚೈ ವಿವರವಾಗಿ ವಜಾಗೊಳಿಸುವಿಕೆ ಬಗ್ಗೆ ತಿಳಿಸಿದ್ದಾರೆ.

ಈ ವರ್ಷ ಗೂಗಲ್ನಲ್ಲಿ ಬರೋಬ್ಬರಿ 12,000 ಉದ್ಯೋಗಿಗಳನ್ನು ಕಂಪನಿಯು ವಜಾಗೊಳಿಸಿದೆ. ಸಿಎನ್ಬಿಸಿಯ ವರದಿಯ ಪ್ರಕಾರ, ಗೂಗಲ್ನಲ್ಲಿ ಉದ್ಯೋಗದ ಕಡಿತಕ್ಕೆ ಒಳಗಾದ ಮಾಜಿ ಉದ್ಯೋಗಿಗಳು ಆಲ್-ಹ್ಯಾಂಡ್ಸ್ ಮೀಟ್ನಲ್ಲಿ, ಗೂಗಲ್ ಸಿಇಒ ಸುಂದರ್ ಪಿಚೈ ಅವರನ್ನು ಉದ್ಯೋಗದಿಂದ ವಜಾ ಮಾಡಿದ್ದು ಏಕೆ? ಎಂದು ಪ್ರಶ್ನಿಸಿದ್ದಾರೆ.



ಉದ್ಯೋಗದಿಂದ ವಜಾಗೊಳಿಸುವಿಕೆಗಳು ಸೃಷ್ಟಿಸುವ ಅನಿಶ್ಚಿತತೆ ಮತ್ತು ಅಡ್ಡಿಗಳಿಗೆ ಅಂತ್ಯವನ್ನು ನೌಕರರು ಯಾವಾಗ ನಿರೀಕ್ಷಿಸಬಹುದು? ಎಂದು ಪಿಚೈ ಅವರನ್ನು ಪ್ರಶ್ನೆ ಮಾಡಲಾಯಿತು. ಈ ಹಿಂದೆ 2024 ರ ಮೊದಲಾರ್ಧದಲ್ಲಿ ಹೆಚ್ಚಿನ ಉದ್ಯೋಗ ವಜಾಗೊಳಿಸುವಿಕೆಗಳು ನಡೆಯುತ್ತವೆ ಎಂದು ಗೂಗಲ್ ಸಿಇಒ ಸುಂದರ್ ಪಿಚೈ ಹೇಳಿದರು. ಪ್ರಸ್ತುತ ಪರಿಸ್ಥಿತಿಗಳನ್ನು ಊಹಿಸಿದರೆ, ವರ್ಷದ ದ್ವಿತೀಯಾರ್ಧದಲ್ಲಿ ಇದರ ಪ್ರಮಾಣ ಚಿಕ್ಕದಾಗಿರುತ್ತದೆ. ವರ್ಷವಿಡೀ ಹೆಚ್ಚು ಉದ್ಯೋಗಿಗಳನ್ನು ನೇಮಿಸಿಕೊಳ್ಳುವ ಬಗ್ಗೆ ಗೂಗಲ್ ಬಹಳ, ಶಿಸ್ತುಬದ್ಧವಾಗಿರಬೇಕು ಎಂದು ಸುಂದರ್ ಪಿಚೈ ತಿಳಿಸಿದರು. ಹೊಸ ಕೆಲಸಗಳನ್ನು ಮಾಡಲು ನಮ್ಮಲ್ಲಿ ಸಾಕಷ್ಟು ಬೇಡಿಕೆಯಿದೆ ಮತ್ತು ನಾವು ಈ ಹಿಂದೆ ಹೆಚ್ಚುತ್ತಿರುವ ಹೆಡ್‌ಕೌಂಟ್ ಮೂಲಕ ಪ್ರತಿಫಲಿತವಾಗಿ ಆ ಕೆಲಸಗಳನ್ನು ಸಹ ಮಾಡುತ್ತಿದ್ದೆವು ಎಂದು ಪಿಚೈ ಹೇಳಿದರು.

## ಬೆರಳಿನ ಉಗುರುಗಳಿಂದ ಹೋರಾಡುತ್ತೇವೆ : ಇಸ್ರೇಲ್ ಪ್ರಧಾನಿ ನೆತನ್ಯಾಹು

**ಟೆಲ್‌ಅವೀವ್:** ಅಮೆರಿಕವು ಶಸ್ತ್ರಾಸ್ತ್ರ ಪೂರೈಕೆಯನ್ನು ನಿಲ್ಲಿಸಿದರೆ ನಾವು ನಮ್ಮ ಬೆರಳಿನ ಉಗುರುಗಳಿಂದ ಹೋರಾಟ ಮುಂದುವರಿಸುತೇವೆ. ಗಾಝಾದಲ್ಲಿನ ಯುದ್ಧದಲ್ಲಿ ಒಬ್ಬಂಟಿಯಾಗಿ ನಿಲ್ಲಲೂ ಹಿಂಜರಿಯುವುದಿಲ್ಲ. ಆದರೆ ಹಮಾಸ್ ವಿರುದ್ಧದ ಹೋರಾಟ ಮಾತ್ರ ಮುಂದುವರಿಯುತ್ತದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.



ದಕ್ಷಿಣ ಗಾಝಾದ ರಫಾ ನಗರದ ಮೇಲೆ ಬೃಹತ್ ಪ್ರಮಾಣದ ಆಕ್ರಮಣದ ಯೋಜನೆಗೆ ಇಸ್ರೇಲ್ ಚಾಲನೆ ನೀಡಿದರೆ ಆ ದೇಶಕ್ಕೆ ಅಮೆರಿಕದಿಂದ ಪೂರೈಕೆಯಾಗುವ ಕೆಲವು ಶಸ್ತ್ರಾಸ್ತ್ರಗಳನ್ನು ತಡೆಹಿಡಿಯುವುದಾಗಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಬುಧವಾರ ಹೇಳಿಕೆ ನೀಡಿದ್ದರು. 1948ರ ಅರಬ್-ಇಸ್ರೇಲ್ ಯುದ್ಧದ ಬಗ್ಗೆ ಉಲ್ಲೇಖಿಸಿದ ನೆತನ್ಯಾಹು 'ಆಗ ನಾವು 'ಹಲವರ ವಿರುದ್ಧ ಕೆಲವರಾಗಿದ್ದೆವು. ಆದರೆ ಈಗ ಹೆಚ್ಚು ಬಲಿಷ್ಠವಾಗಿದ್ದೇವೆ. ದೃಢಸಂಕಲ್ಪ ಮಾಡಿದ್ದೇವೆ. ನಮ್ಮ ಶತ್ರುಗಳನ್ನು, ನಮ್ಮನ್ನು ನಾಶಗೊಳಿಸಲು ಬಯಸುವವರನ್ನು ಸೋಲಿಸಲು ಒಗ್ಗಟ್ಟಿನಲ್ಲಿದ್ದೇವೆ. ಬೆರಳಿನ ಉಗುರುಗಳಿಂದಲೂ ನಾವು ಹೋರಾಡಬಲ್ಲೆವು. ಆದರೆ ನಮಗೆ ಬೆರಳಿನ ಉಗುರುಗಳ ಅಗತ್ಯ ಬೀಳದು. 1948ರ ಯುದ್ಧದಂತೆಯೇ ನಮ್ಮ ಚೈತನ್ಯ, ದೃಢಸಂಕಲ್ಪ ಮತ್ತು ದೇವರ ದಯೆಯಿಂದ ಗೆಲುವು ನಮ್ಮದಾಗಲಿದೆ ' ಎಂದು ಹೇಳಿದ್ದಾರೆ. ಅಮೆರಿಕ ಶಸ್ತ್ರಾಸ್ತ್ರ ಪೂರೈಕೆ ಸ್ಥಗಿತಗೊಳಿಸಿದರೂ ಅದರಿಂದ ಯುದ್ಧದ ಮೇಲೆ ತಕ್ಷಣಕ್ಕೆ ಯಾವುದೇ ಪರಿಣಾಮ ಬೀರುವ ಸಾಧ್ಯತೆಯಿಲ್ಲ ಎಂದು ವಿಶ್ಲೇಷಿಸಲಾಗಿದೆ.

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ತರ್ಲೆ ವಿಲೇಜ್ ನಿರ್ದೇಶಕ 'ಕುಂಟೆಬಿಲ್ಲೆ' ಆಡಲು ಶುರು



ಈ ಮೊದಲು ದಕ್ಷ ಯಜ್ಞ, ತರ್ಲೆ ವಿಲೇಜ್, ಋತುಮತಿ ಚಿತ್ರ ಗಳನ್ನು ನಿರ್ದೇಶನ ಮಾಡಿದ್ದ ಸಿದ್ದೇಗೌಡ ಜಿ.ಬಿ.ಎಸ್. ಅವರು ಕುಂಟೆಬಿಲ್ಲೆ ಸಿನಿಮಾ ನಿರ್ದೇಶನಕ್ಕೆ ಮುಂದಾಗಿದ್ದಾರೆ.ಯುವ ನಟ ಯದು ಮೊದಲ ಬಾರಿಗೆ ನಾಯಕರಾಗಿ ಸ್ಯಾಂಡಲ್ ವುಡ್ ಗೆ ಎಂಟ್ರಿ ಕೊಡುತ್ತಿದ್ದಾರೆ. ಹತ್ತಕ್ಕೂ ಹೆಚ್ಚು ಚಿತ್ರ ಮಾಡಿರುವ ಮೇಘ ಶ್ರೀ ನಾಯಕಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಪೋಷಕ ಪಾತ್ರಗಳಲ್ಲಿ ಕಿಶೋರ್, ಪವಿತ್ರ ಲೋಕೇಶ್, ಶಂಕರ್ ಅಶ್ವಥ್, ಚಂದ್ರಪ್ರಭ ಮೊದಲಾದವರು ನಟಿಸಲಿದ್ದಾರೆ.

ನಾವೆಲ್ಲಾ ಚಿಕ್ಕ ವಯಸ್ಸಿನಲ್ಲಿ ಆಡುತ್ತಿದ್ದ ಆಟ ಕುಂಟೆಬಿಲ್ಲೆ. ಅದೇ ಟೈಟಲ್ ಇಟ್ಟುಕೊಂಡು ಪ್ರೀತಿ, ನೋವು, ಕಾಮ ಎಲ್ಲವನ್ನೂ ಕಟ್ಟಿಕೊಡಲಿದ್ದೇವೆ ಎಂದು ನಿರ್ದೇಶಕ ಸಿದ್ದೇಗೌಡ ತಿಳಿಸಿದರು. ನಿರ್ಮಾಪಕ ಎಸ್.ಬಿ. ಶಿವು ಮಾತನಾಡಿ, ಜೀವಿತ ಕ್ರಿಯೇಷನ್ ನಿಂದ ಒಳ್ಳೆಯ ಸಿನಿಮಾ ಮಾಡಿದ್ದೇವೆ. ಯದು ಹೊಸ ಪ್ರತಿಭೆ ಆಗಿದ್ದು ಅವರನ್ನೇ ನಾಯಕರನ್ನಾಗಿ ಮಾಡಿಕೊಂಡಿದ್ದೇವೆ ಎಂದರು.

ಮತ್ತೊಬ್ಬ ನಿರ್ಮಾಪಕ ಕುಮಾರ್ ಗೌಡ ಅವರು ಮಾತನಾಡಿ, ನಿರ್ಮಾಣ ಕ್ಷೇತ್ರ ನನಗೆ ಹೊಸದು.30 ವರ್ಷದ ಹಿಂದೆ ನಾನೊಬ್ಬ ಕಲಾವಿದ ಆಗಬೇಕು ಎಂದು ಬೆಂಗಳೂರಿಗೆ ಹೋಗಿದ್ದವನು. ಆದರೆ ಅದು ಸಾಧ್ಯವಾಗಿರಲಿಲ್ಲ. ಈಗ ಅದನ್ನು ನನ್ನ ಮಗನ ಮೂಲಕ ಈಡೇರಿಸಿಕೊಳ್ಳುತ್ತಿದ್ದೇನೆ. ನನ್ನ ಮಗನಿಗೆ ರಂಗಭೂಮಿ ಕಡೆಗೆ ಆಸಕ್ತಿ ಇತ್ತು .ಇದೀಗ ವಿದ್ಯಾಭ್ಯಾಸ ಮುಗಿಸಿ ನಟನೆ ಕಡೆಗೆ ಬರುತ್ತಿದ್ದಾನೆ. ಈಗ ನಾನೇ ಮುಂದೆ ನಿಂತು ನಿರ್ದೇಶಕ ಸಿದ್ದೇಗೌಡ ಅವರ ಗರಡಿಗೆ ಬಿಟ್ಟಿದ್ದೇವೆ. ನನ್ನ ಮಗನಿಗೆ ಹೊಂದುವಂತ ಒಳ್ಳೆಯ ಕತೆ ಇದೆ.ಸಿನಿಮಾ ಚೆನ್ನಾಗಿ ಮೂಡಿಬರಲಿದೆ ಎನ್ನುವ ವಿಶ್ವಾಸ ವ್ಯಕ್ತಪಡಿಸಿದರು.

# ಸ್ಟೆಫಿ ಪಟೇಲ್ ಜೊತೆ ಕಾಣಿಸಿಕೊಂಡ ಸಿಂಹ



ಕನ್ನಡದ ಹೆಸರಾಂತ ನಟ ವಸಿಷ್ಠ ಸಿಂಹ ಲಂಡನ್‌ಗೆ ಹಾರಿದ್ದರು. ಲಂಡನ್ ಸುಂದರ ಸ್ಥಳಗಳಲ್ಲಿ ನಟಿ ಸ್ಟೆಫಿ ಪಟೇಲ್ ಜೊತೆ ಕಾಣಿಸಿಕೊಂಡಿದ್ದಾರೆ. ಅರೇ.. ಹರಿಪ್ರಿಯಾ ಜೊತೆ ಮದುವೆಯಾಗಿರೋ ವಸಿಷ್ಠ..ಆ ನಟಿಯ ಜೊತೆ ಅಲ್ಲೇಕೆ ಕಾಣಿಸಿಕೊಂಡರು ಅಂತ ಅಚ್ಚರಿ ಪಡಬೇಡಿ.ಈ ಜೋಡಿ ನಟನೆಯ ಲವ್ ಲಿ ಸಿನಿಮಾದ ಶೂಟಿಂಗ್ ಲಂಡನ್ ನಲ್ಲಿ ನಡೆದಿದೆ. ಹಾಡೊಂದರ ಚಿತ್ರೀಕರಣಕ್ಕಾಗಿ ಚಿತ್ರತಂಡ ಅಲ್ಲಿಗೆ ಹಾರಿತ್ತು.

ವಸಿಷ್ಠ ಸಿಂಹ ನಟನೆ ಅಂತ ಬಂದ್ರೆ, ರೋಸ್ ಹಿಡಿದು ಹೀರೋ ಆಗೋಕು ರೆಡಿ, ಲಾಂಗ್ ಹಿಡಿದು ವಿಲನ್ ಆಗೋಕೂ ಸೈ, ಅಷ್ಟೇ ಅಲ್ಲ ಗಾಯನಕ್ಕೂ ಸೈ ಎನಿಸಿಕೊಂಡಿರುವ ಕಂಚಿನ ಕಂಠದ ನಟ.ಶಿವಣ್ಣನ ಜೊತೆ ಟಗರು ನಲ್ಲಿ ಚಿಟ್ಟೆಯಾಗಿ ಮಿಂಚಿದ ವಸಿಷ್ಠ ಸಿಂಹ ಸ್ಟೈಲಿಶ್ ಲುಕ್ ನಲ್ಲಿ 'ಲವ್ ಲಿ' ಯಾಗಿ ಕಾಣಿಸಿಕೊಳ್ಳಲಿದ್ದಾರೆ.ಚಿತ್ರದ ಫಸ್ಟ್ ಲುಕ್ ಪೋಸ್ಟರ್, ಅಪ್ ಡೇಟ್ ಗಳು ಕೂಡ ಗಮನ ಸೆಳೆಯುತ್ತಿವೆ.

ವಸಿಷ್ಠ ಸಿಂಹನಿಗೆ ನಾಯಕಿಯಾಗಿ ಜಾರ್ಖಂಡ್ ಮೂಲದ ಸ್ಟೆಫಿ ಪಟೇಲ್ ಕಾಣಿಸಿಕೊಂಡಿದ್ದಾರೆ.ಹಿಂದಿ, ಕೊರಿಯನ್, ತಮಿಳು ಭಾಷೆಗಳ ಸಿನಿಮಾ ಮತ್ತು ವೆಬ್ ಸಿರೀಸ್ ಗಳಲ್ಲಿ ನಟಿಸಿರುವ ಸ್ಟೆಫಿ ಪಟೇಲ್ ಗೆ ಇದು ಮೊದಲ ಕನ್ನಡ ಸಿನಿಮಾ. 'ಲವ್ ಲಿ' ಚಿತ್ರಕ್ಕೆ ಚೇತನ್ ಕೇಶವ್ ಆಕ್ಷನ್ ಕಟ್ ಹೇಳುತ್ತಿದ್ದಾರೆ.ಇದೊಂದು ಕಮರ್ಶಿಯಲ್ ರೋಮ್ಯಾಂಟಿಕ್ ಲವ್ ಸ್ಟೋರಿ ಸಿನಿಮಾವಾಗಿದ್ದು, ರೌಡಿಸಂ ಕಥಾಹಂದರವೂ ಚಿತ್ರದಲ್ಲಿದೆ. ಚಿತ್ರವನ್ನು ಎಂ.ಆರ್ ರವೀಂದ್ರ, ಕುಮಾರ್ ನಿರ್ಮಿಸುತ್ತಿದ್ದು, ಹರೀಶ್ ಕೊಮ್ಮೆ ಸಂಕಲನ, ಅಶ್ವಿನ್ ಕೆನಡಿ ಕ್ಯಾಮೆರಾ ವರ್ಕ್, ಅನೂಪ್ ಸೀಳಿನ್ ಸಂಗೀತ ನಿರ್ದೇಶನ 'ಲವ್ ಲಿ' ಚಿತ್ರಕ್ಕಿದೆ.



# ಕರಾವಳಿ ಕಥೆ ಹೊತ್ತ ಅಧಿಪತ್ರ ಟೀಸರ್ ರಿಲೀಸ್

ಸಿನಿಮಾವೊಂದು ಆರಂಭವಾದ ಬಳಿಕ ಕ್ರಿಯಾಶೀಲತೆಯ ಹಾದಿಯಲ್ಲಿಯೇ ಪ್ರೇಕ್ಷಕರನ್ನು ಸೆಳೆಯೋದಿದೆಯಲ್ಲಾ?ಅದು ನಿಜಕ್ಕೂ ಸವಾಲಿನ ಸಂಗತಿ.ಈ ನಿಟ್ಟಿನಲ್ಲಿ ನೋಡುವುದಾದರೆ, ಅಧಿಪತ್ರ ಮೊದಲ ಪ್ರಯತ್ನದಲ್ಲಿಯೇ ಗೆದ್ದಂತಿದೆ. ಬಿಡುಗಡೆಯಾಗಿರುವ ಅಧಿಪತ್ರ ಟೀಸರ್ ಕುತೂಹಲವನ್ನು ಗರಿಗೆದರುವಂತೆ ಮಾಡಿದೆ.

ಕರಾವಳಿ ಭಾಗದ ಕಥೆ ಹೊತ್ತು ಬಂದಿರುವ ಅಧಿಪತ್ರ ಸಿನಿಮಾ ಮೊದಲ ತುಣುಕಿನಲ್ಲಿ ಕರಾವಳಿ ಭಾಗದ ವಿಶೇಷ ಆಚರಣೆ ಆಟಿ ಕಳಂಜಾ, ಯಕ್ಷಗಾನ, ಹುಲಿ ಕುಣಿತದ ಜೊತೆಗೆ ಪ್ರೇಕ್ಷಕರನ್ನು ಸೀಟಿನ ತುದಿಗೆ ಕುರಿಸುವ ಕಂಟೆಂಟ್ ಕೂಡ ಇದೆ.ಆದರೆ ಆ ಕಂಟೆಂಟ್ ಏನೂ ಅನ್ನೋದನ್ನು ಚಿತ್ರತಂಡ ಬಿಟ್ಟುಕೊಟ್ಟಿಲ್ಲ. ಖಾಕಿ ಖದರ್ ನಲ್ಲಿ ರೂಪೇಶ್ ಶೆಟ್ಟಿ ಅದ್ಭುತವಾಗಿ ಕಾಣಿಸಿಕೊಂಡಿದ್ದಾರೆ.ಮೊದಲ ಪ್ರಯತ್ನದಲ್ಲಿಯೇ ನಿರ್ದೇಶಕ ಚಯನ್ ಶೆಟ್ಟಿ ಗಟ್ಟಿ ಕಥೆಯೊಂದನ್ನು ಹೊತ್ತು ಬಂದಿರುವ ಸೂಚನೆ ಕೊಟ್ಟಿದ್ದಾರೆ.

'ಕಾಂತಾರ' ಸಿನಿಮಾದ ಖ್ಯಾತಿಯ ಪ್ರಕಾಶ್ ತುಮಿನಾಡು, ಎಂ.ಕೆ.ಮಠ, ರಘು ಪಾಂಡೇಶ್ವರ್, ದೀಪಕ್ ರೈ, ಕಾರ್ತಿಕ್ ಭಟ್, ಅನಿಲ್ ಉಪ್ಪಾಲ್, ಪ್ರಶಾಂತ್ ತಾರಾಬಳಗದಲ್ಲಿದ್ದು, ಗಿಚ್ಚಿ ಗಿಲಿಗಿಲಿ' ಖ್ಯಾತಿಯ ಜಾಹ್ನವಿ ನಾಯಕಿಯಾಗಿ ಬಣ್ಣ ಹಚ್ಚಿದ್ದಾರೆ.

ಕೆ.ಆರ್ ಸಿನಿಕಂಬೈನ್ಸ್ ಬ್ಯಾನರ್‌ನಡಿ ದಿವ್ಯಾ ನಾರಾಯಣ್, ಕುಲದೀಪ್ ರಾಘವ್ ಲಕ್ಷ್ಮೇ ಗೌಡ ಚಿತ್ರ ನಿರ್ಮಾಣ ಮಾಡಿದ್ದು, ಕಾರ್ತಿಕ್ ಶೆಟ್ಟಿ ಹಾಗೂ ಸತೀಶ್ ಶೆಟ್ಟಿ ಸಹ ನಿರ್ಮಾಣದಲ್ಲಿ ಹೆಗಲು ಕೊಟ್ಟಿದ್ದಾರೆ. ಶೂಟಿಂಗ್ ಮುಗಿಸಿರುವ ಚಿತ್ರತಂಡ ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿಯೇ ಬ್ಯುಸಿ ಆಗಿದೆ. ಇನ್ನೇನು ಕೆಲವೇ ದಿನಗಳಲ್ಲಿ ಬಿಡುಗಡೆ ದಿನಾಂಕ ಘೋಷಿಸಲಿದೆ.



ಆರ್‌ಸಿಬಿ ವಿರುದ್ಧದ ಪಂದ್ಯಕ್ಕೆ ಪಂತ್ ಔಟ್

# ಡೆಲ್ಲಿ ತಂಡಕ್ಕೆ ಹೊಸ ನಾಯಕ

ಕ್ರೀಡೆ



ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧದ ಐಪಿಎಲ್ ಪಂದ್ಯಕ್ಕೆ ಡೆಲ್ಲಿ ಕ್ಯಾಪಿಟಲ್ಸ್ ನಾಯಕ ರಿಷಭ್ ಪಂತ್ ಸೇವೆ ಅಲಭ್ಯವಾಗುವ ಹಿನ್ನಲೆಯಲ್ಲಿ ಬದಲಿ ನಾಯಕನನ್ನು ಫ್ರಾಂಚೈಸಿ ಘೋಷಿಸಿದೆ.

ಮೂರುಬಾರಿ ನಿಧಾನಗತಿಯ ಓವರ್ ರೇಟ್ ನಿಂದ ಐಪಿಎಲ್ ನಿಯಮ ಉಲ್ಲಂಘಿಸಿದ್ದಕ್ಕಾಗಿ ರಿಷಭ್ ಪಂತ್‌ಗೆ ಬಿಸಿಸಿಐ 30 ಲಕ್ಷ ರೂ. ದಂಡ ವಿಧಿಸಿದೆ. ಇದರೊಂದಿಗೆ ಒಂದು ಪಂದ್ಯದಿಂದ ಅಮಾನತುಗೊಳಿಸಿದೆ. ಈ ಹಿನ್ನಲೆಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಭಾನುವಾರದ ಪಂದ್ಯಕ್ಕೆ ಬದಲಿ ನಾಯಕನನ್ನು ಘೋಷಿಸಲಾಗಿದೆ.

ಸೂಪರ್ ಸಂಡೇ (ಮೇ 12) ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧದ ಪಂದ್ಯದಿಂದ ರಿಷಭ್ ಪಂತ್ ಹೊರಗುಳಿಯಲಿದ್ದಾರೆ. ಹಾಗಾಗಿ ಅಕ್ಷರ್ ಪಟೇಲ್ ಅವರಿಗೆ ತಂಡವನ್ನು ಮುನ್ನಡೆಸುವ ಜವಾಬ್ದಾರಿ ನೀಡಲಾಗುವುದು ಎಂದು ಕೋಚ್ ರಿಕಿ ಪಾಂಟಿಂಗ್ ಖಚಿತಪಡಿಸಿದ್ದಾರೆ. ಭಾನುವಾರ ಸಂಜೆ 7:30ರ ವೇಳೆಗೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇತ್ತಂಡಗಳು ಸೆಣಸಲಿವೆ.

**ಬ್ಯಾಟಿಂಗ್ ಬಲದ ಚಿಂತೆ:** ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಅಗ್ರ ಕ್ರಮಾಂಕದಲ್ಲಿ ಫ್ರೆಸರ್ ಮೆಕ್‌ಗಾರ್ಕ್, ಪೃಥ್ವಿ ಶಾ, ಅಭಿಷೇಕ್ ಪೋರೆಲ್ ಬ್ಯಾಟಿಂಗ್ ಬಲ ನೀಡುತ್ತಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಶಾಯ್ ಹೋಪ್, ರಿಷಭ್ ಪಂತ್, ಅಕ್ಷರ್ ಪಟೇಲ್ ಫಾರ್ಮ್‌ನಲ್ಲಿದ್ದರು. ಆದ್ರೆ ರಿಷಭ್ ಪಂತ್ ಅವರ ಅಲಭ್ಯತೆಯು ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್ ಬಲದ ಚಿಂತೆ ತಂದೊಡ್ಡಿದೆ. ಅಲ್ಲದೇ ಪ್ಲೇ ಆಫ್ ರೇಸ್‌ನಲ್ಲಿರುವ ಡೆಲ್ಲಿ ತಂಡಕ್ಕೆ ಗೆಲುವು ಕೈ ಹಿಡಿಯುತ್ತಾ ಎಂಬುದನ್ನ ಕಾದು ನೋಡಬೇಕಿದೆ.

**ದಂಡ ವಿಧಿಸಿದ್ದು ಏಕೆ?:** ಮೇ 7 ರಂದು ದೆಹಲಿಯ ಅರುಣ್ ಜೇಟ್ಲಿ ಸ್ಟೇಡಿಯಂನಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡ ನಿಧಾನಗತಿಯ ಬೌಲಿಂಗ್ ನಡೆಸಿತ್ತು. ಇದಕ್ಕಾಗಿ ಪಂತ್ ಅವರಿಗೆ 30 ಲಕ್ಷ ರೂ. ದಂಡದೊಂದಿಗೆ ಒಂದು ಪಂದ್ಯದಿಂದ ಅಮಾನತುಗೊಳಿಸಲಾಗಿದೆ. ಇದರೊಂದಿಗೆ ಇಂಪ್ಯಾಕ್ಟ್ ಪ್ಲೇಯರ್ ಸೇರಿದಂತೆ ಉಳಿದ 11 ಸದಸ್ಯರಿಗೆ ತಲಾ 12 ಲಕ್ಷ ರೂ. ಅಥವಾ ಆಯಾ ಪಂದ್ಯ ಶುಲ್ಕದ 50 ಪ್ರತಿಶತದಷ್ಟು ದಂಡ ವಿಧಿಸಲಾಗಿದೆ ಎಂದು ಐಪಿಎಲ್ ಮಂಡಳಿ ತಿಳಿಸಿದೆ.

**30 ಲಕ್ಷ ದಂಡ ಯಾಕೆ?:** ಐಪಿಎಲ್‌ನಲ್ಲಿ ಮೊದಲ ಬಾರಿ ನಿಧಾನಗತಿ ಬೌಲಿಂಗ್ ಮಾಡಿದರೆ ನಾಯಕನಿಗೆ 12 ಲಕ್ಷ ರೂ. ದಂಡವನ್ನು ವಿಧಿಸಲಾಗುತ್ತದೆ. 2ನೇ ಬಾರಿ ಈ ತಪ್ಪನ್ನು ಮಾಡಿದರೆ ನಾಯಕನಿಗೆ 24 ಲಕ್ಷ ರೂ. ದಂಡದ ಜೊತೆ ಆಟಗಾರರಿಗೂ ದಂಡ ವಿಧಿಸಲಾಗುತ್ತದೆ. 3ನೇ ಬಾರಿಗೆ ದಂಡ ವಿಧಿಸಿದರೆ 30 ಲಕ್ಷ ದಂಡದೊಂದಿಗೆ ಒಂದು ಪಂದ್ಯದಿಂದ ನಾಯಕನನ್ನು ಅಮಾನತುಗೊಳಿಸಲಾಗುತ್ತದೆ.

**ಪಂದ್ಯಕ್ಕೆ ಮೀಸಲಾದ ಸಮಯ ಎಷ್ಟು?:** ಐಪಿಎಲ್ ನಿಯಮದ ಪ್ರಕಾರ ಒಂದು ತಂಡ 20 ಓವರ್ ಗಳನ್ನು 90 ನಿಮಿಷದ ಒಳಗಡೆ ಮುಗಿಸಬೇಕು. ಈ ಅವಧಿಯಲ್ಲಿ ಓವರ್‌ಗಳನ್ನು ಪೂರ್ಣ ಮಾಡದೇ ಇದ್ದರೂ 20ನೇ ಓವರ್ ಅನ್ನು 90ನೇ ನಿಮಿಷದಲ್ಲೇ ಆರಂಭಿಸಬೇಕು. ಈ ನಿಯಮವನ್ನು ಮೊದಲ ಬಾರಿ ಉಲ್ಲಂಘಿಸಿದರೆ 12 ಲಕ್ಷ ರೂ. ದಂಡವನ್ನು ವಿಧಿಸಲಾಗುತ್ತದೆ. ಪ್ರತಿ ಪಂದ್ಯದಲ್ಲಿ 2 ನಿಮಿಷ 30 ಸೆಕೆಂಡಿನ 4 ಸ್ಟ್ರಟೆಜಿಕ್ ಟೈಮ್ ಔಟ್ ಬ್ರೇಕ್‌ಗಳು ಇರುತ್ತದೆ. ಮೊದಲ ಇನ್ನಿಂಗ್ಸ್‌ನಲ್ಲಿ ಬೌಲಿಂಗ್ ತಂಡ 6-9 ಓವರ್ ಮಧ್ಯೆ ಯಾವಾಗ ಬೇಕಾದರೂ ಪಡೆದುಕೊಳ್ಳಬಹುದು. 2ನೇ ಸ್ಟ್ರಟೆಜಿಕ್ ಟೈಮ್ ಔಟ್ ಅನ್ನು ಬ್ಯಾಟಿಂಗ್ ತಂಡ 13-16 ಓವರ್ ಮಧ್ಯೆ ಯಾವಾಗ ಬೇಕಾದರೂ ಪಡೆದುಕೊಳ್ಳಬಹುದು.

# ಪ್ಲೇ-ಆಫ್‌ಗೆ ಎಂಟ್ರಿ ಕೊಟ್ಟ ಕೆಕೆಆರ್



ಎರಡು ಬಾರಿ ಚಾಂಪಿಯನ್ ಆಗಿರುವ ಕೋಲ್ಕತ್ತಾ ನೈಟ್ ರೈಡರ್ಸ್ 17ನೇ ಆವೃತ್ತಿಯ ಐಪಿಎಲ್‌ನಲ್ಲಿ ಅಧಿಕೃತವಾಗಿ ಪ್ಲೇ-ಆಫ್‌ಗೆ ಎಂಟ್ರಿ ಕೊಟ್ಟಿದೆ. ತವರಿನಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಮುಂಬೈ ವಿರುದ್ಧ ಕೆಕೆಆರ್ 18 ರನ್‌ಗಳ ಜಯ ಸಾಧಿಸಿದೆ. 9 ಪಂದ್ಯಗಳ ಗೆಲುವಿನೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ನಂ.1 ಸ್ಥಾನಕ್ಕೇರಿದೆ.

ಮಳೆ ಪರಿಣಾಮವಾಗಿ ಮ್ಯಾಚ್ ತಡವಾಗಿ ಆರಂಭವಾಯಿತು. ಪಂದ್ಯಕ್ಕೂ ಮುನ್ನ ಮಳೆ ಬಂದ ಕಾರಣ ಇನ್ನಿಂಗ್ಸ್ ಅನ್ನು 16 ಓವರ್‌ಗಳಿಗೆ ನಿಗದಿಪಡಿಸಲಾಯಿತು. ಟಾಸ್ ಗೆದ್ದ ಮುಂಬೈ ಮೊದಲು ಬೌಲಿಂಗ್ ಆಯ್ದುಕೊಂಡಿತು.

ಕೋಲ್ಕತ್ತಾ ಬ್ಯಾಟಿಂಗ್‌ನಲ್ಲಿ ಆರಂಭಿಕ ಆಘಾತ ಎದುರಿಸಿತು. ಓಪನರ್ ಜೋಡಿ ಸುನಿಲ್ ನರೈನ್ (0) ಮತ್ತು ಫಿಲಿಪ್ ಸಾಲ್ಟ್ (6) ಅವರನ್ನು ತಂಡ ಬೇಗನೆ ಕಳೆದುಕೊಂಡಿತು. ಆದರೆ ವೆಂಕಟೇಶ್ ಅಯ್ಯರ್ 21 ಎಸೆತಗಳಲ್ಲಿ 42 ರನ್‌ಗಳ ನಿರ್ಣಾಯಕ ಪಾತ್ರವನ್ನು ವಹಿಸಿದರು. ನಾಯಕ ಶ್ರೇಯಸ್ ಅಯ್ಯರ್ ಕೇವಲ 7 ರನ್ ಗಳಿಸಿ ಔಟಾದರು.

ನಿತೀಶ್ ರಾಣಾ (33), ಆಂಡ್ರೆ ರಸೆಲ್ (24), ರಿಂಕು ಸಿಂಗ್ (20), ರಮಣ್‌ದೀಪ್ ಸಿಂಗ್ (17) ತಂಡದ ಪರವಾಗಿ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿ ಸವಾಲಿನ ಮೊತ್ತ ದಾಖಲಿಸಲು ನೆರವಾದರು. ಮುಂಬೈ ಪರ ಜಸ್ಪ್ರೀತ್ ಬುಮ್ರಾ, ಪಿಯೂಷ್ ಚಾವ್ಲಾ ತಲಾ 2 ಹಾಗೂ ನುವಾನ್ ತುಷಾರ, ಅಂಶುಲ್ ಕಾಂಬೋಜ್ ತಲಾ 1 ವಿಕೆಟ್ ಕಿತ್ತರು.

ಕೋಲ್ಕತ್ತಾ ನೀಡಿದ 158 ರನ್ ಗುರಿ ಬೆನ್ನತ್ತಿದ ಮುಂಬೈ ತಂಡಕ್ಕೆ ಇಶಾನ್ ಕಿಶನ್ 22 ಎಸೆತಗಳಿಗೆ 40 ರನ್ ಗಳಿಸಿ ಭದ್ರಬುನಾದಿ ಹಾಕಿಕೊಟ್ಟರು. ಆದರೆ ಇತರೆ ಆಟಗಾರರು ಬ್ಯಾಟಿಂಗ್ ವೈಫಲ್ಯ ಅನುಭವಿಸಿದರು. ರೋಹಿತ್ (19), ಸೂರ್ಯಕುಮಾರ್ ಯಾದವ್ (11) ಮಿಂಚಲಿಲ್ಲ. ತಿಲಕ್ ವರ್ಮಾ 17 ಎಸೆತಕ್ಕೆ 32 ರನ್ ಗಳಿಸಿ ಮುಂಬೈಗೆ ಗೆಲುವಿನ ಭರವಸೆ ಮೂಡಿಸಿದ್ದರು. ಆದರೆ ಯಾವೊಬ್ಬ ಬ್ಯಾಟರ್ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿಯದ ಕಾರಣ ಮುಂಬೈ ಸೋಲನುಭವಿಸಿತು. ಕೋಲ್ಕತ್ತಾ ಪರ ಹರ್ಷಿತ್ ರಾಣಾ, ವರುಣ್ ಚಕ್ರವರ್ತಿ, ಆಂಡ್ರೆ ರಸೆಲ್ ತಲಾ 2 ವಿಕೆಟ್ ಕಿತ್ತು ತಂಡದ ಗೆಲುವಿಗೆ ಆಸರೆಯಾದರು. ಸುನಿಲ್ ನರೈನ್ 1 ವಿಕೆಟ್ ಕಿತ್ತರು.

# ವೀಡಿಯೋ ವೈರಲ್ ಮಾಡಿದವರನ್ನು ಟ್ರೇಸ್ ಮಾಡೋದು ಕಷ್ಟ



**ಬೆಂಗಳೂರು:** ವೀಡಿಯೋ ವೈರಲ್ ಮಾಡಿದವರನ್ನು ಟ್ರೇಸ್ ಮಾಡೋದು ಕಷ್ಟ.ಈ ವೀಡಿಯೋ 2-3 ತಿಂಗಳ ಹಿಂದೆಯೇ ಬಿಡುಗಡೆ ಆಗಿತ್ತು ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ನಗರದಲ್ಲಿ ಮಾತನಾಡಿದ ಅವರು, ಸ್ಟೇಡಿಯಂ ಬಳಿಯೂ ಪೆನ್‌ಡ್ರೈವ್ ಸಿಕ್ಕಿದೆ.25 ಸಾವಿರ ಪೆನ್‌ಡ್ರೈವ್ ಅಂದರೆ ಉದ್ದೇಶ ಪೂರ್ವಕವಾಗಿಯೇ ವೀಡಿಯೋ ಬಿಡುಗಡೆ ಆಗಿರುತ್ತದೆ. ಆದರೆ ಮೊದಲು ವೀಡಿಯೋದಲ್ಲಿ ಇರುವ ವ್ಯಕ್ತಿಯ ಮೇಲಿನ ಕೇಸ್ ನಾವು ಫೋಕಸ್ ಮಾಡಬೇಕು.ಅದಾದ ಬಳಿಕ ವೀಡಿಯೋ ವೈರಲ್ ಮಾಡಿರೋರ ಕೇಸ್ ಕೂಡಾ ಗೊತ್ತಾಗುತ್ತದೆ. ವೀಡಿಯೋ ಯಾರೇ ಬಿಡುಗಡೆ ಮಾಡಿದರೂ ಅದು ತಪ್ಪೇ ಎಂದರು.

ಪ್ರಜ್ವಲ್ ರೇವಣ್ಣ ವೀಡಿಯೋ ರಿಲೀಸ್ ನಲ್ಲಿ ಬಿಜೆಪಿ ನಾಯಕರ ಕೈವಾಡ ಇದೆ.ಇದನ್ನ ದೇವರಾಜೇಗೌಡರೇ ಹೇಳಿದ್ದಾರೆ.ಪ್ರಜ್ವಲ್ ರೇವಣ್ಣ ಕೇಸ್‌ನಲ್ಲಿ ಹೀನಾಯ ಕೃತ್ಯ ಮಾಡಿದ್ದು, ವೀಡಿಯೋ ಮಾಡಿದ್ದು ಪ್ರಜ್ವಲ್. ವಿಡಿಯೋ ಕದ್ದಿದ್ದು ಡ್ರೈವರ್.ಕದ್ದ ವಿಡಿಯೋ ಕೊಟ್ಟಿದ್ದು ಬಿಜೆಪಿ ನಾಯಕ ದೇವರಾಜೇಗೌಡ. ವೀಡಿಯೋ ಕೊಟ್ಟಿದ್ದ ಬಿಜೆಪಿ ನಾಯಕನಿಗೆ.ಇದರಲ್ಲಿ ಕಾಂಗ್ರೆಸ್ ಕೈವಾಡ ಎಲ್ಲಿದೆ?ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ಕೈವಾಡ ಎಲ್ಲಿದೆ ಎಂದು ಪ್ರಶ್ನಿಸಿದರು.

ಬಿಜೆಪಿ-ಜೆಡಿಎಸ್ ಅವರು ಪೆನ್‌ಡ್ರೈವ್ ಹಂಚಿದ್ದರ ಬಗ್ಗೆ ಮಾತ್ರ ಮಾತಾಡ್ತಿದ್ದಾರೆ.ಮನೆ ಮಗ ಇಂತಹ ಘಟನೆ ಮಾಡಿದ್ದಾನೆ ಅಂತ ಯಾರು ಮಾತಾಡ್ತಿಲ್ಲ. ಆಡಿಯೋದಲ್ಲಿ ನಾನು ಕೇಳಿದೆ. ಇದರಲ್ಲಿ ಬಿಜೆಪಿ ವರಿಷ್ಠರಿಗೆ ಎಲ್ಲ ಗೊತ್ತಿತ್ತು ಅಂತ ಹೇಳಿದ್ದಾರೆ. ಎಲ್ಲಾ ಗೊತ್ತಿದ್ದರೂ ಯಾಕೆ ಟಿಕೆಟ್ ಕೊಟ್ಟರು.ಮಾಜಿ ಪ್ರಧಾನಿ ಕ್ಷೇತ್ರದಲ್ಲಿ ಚರ್ಚೆ ಆಗದೇ ಟಿಕೆಟ್ ಕೊಟ್ರಾ?ಯಾರು ದಾರಿ ತಪ್ಪಿದ ಮಗನ ಬಗ್ಗೆ ಮಾತಾಡ್ತಿಲ್ಲ. ಯಾಕೆ ಟಿಕೆಟ್ ಕೊಟ್ರಿ ಅಂತ ಹೇಳ್ತಿಲ್ಲ. ಯಾಕೆ ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ಅವರನ್ನ ನೇಣಿಗೆ ಹಾಕ್ತಿದ್ದೀರಾ?ಎಲ್ಲ ಗೊತ್ತಿದ್ದರು ಯಾಕೆ ಟಿಕೆಟ್ ಕೊಟ್ಟಿದ್ರಿ. ಇದರ ಹಿಂದಿನ ಸಂಚು ಏನು ಎಂದು ಕೇಳಿದರು.

ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ಅವರನ್ನ ಲಾಕ್ ಮಾಡಿ, ಸಿಬಿಐ ಕೇಸ್ ಕೊಟ್ಟು ಅರೆಸ್ಟ್ ಮಾಡೊ ಪ್ಲ್ಯಾನ್ ಮಾಡಿದ್ರಾ?ಕುಮಾರಸ್ವಾಮಿ ಅವರು ಇದಕ್ಕೆ ಉತ್ತರ ಕೊಡಬೇಕು.ಯಾಕೆ ವಿಜಯೇಂದ್ರ, ಅಶೋಕ್ ಇದರ ಬಗ್ಗೆ ಮಾತಾಡ್ತಿಲ್ಲ. ಹುಬ್ಬಳ್ಳಿ ಕೇಸ್‌ನಲ್ಲಿ ತೋರಿಸಿದ್ದ ಮಹತ್ವ ಈ ಕೇಸ್‌ನಲ್ಲಿ ಯಾಕೆ ತೋರಿಸ್ತಿಲ್ಲ. ಯಾಕೆ ಇದೂವರೆಗೂ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದು ಮಾಡಿಲ್ಲ?ಕೇಂದ್ರ ಸರ್ಕಾರವೇ ಪಾಸ್‌ಪೋರ್ಟ್ ರದ್ದು ಮಾಡಿ ಅಂತಾ ಕ್ರಮ ತೆಗೆದುಕೊಳ್ಳಬಹುದು ಅಲ್ಲವಾ?ಈ ಕೇಸ್‌ನಲ್ಲಿ ಕೇಂದ್ರ ಸರ್ಕಾರ ಏನ್ ಮಾಡ್ತಿದೆ.ಅವರು ಹಾಲಿ ಎಂಪಿ.ಕೇಂದ್ರ ಸರ್ಕಾರ ಏನ್ ಕ್ರಮ ಮಾಡ್ತಿದೆ ಹೇಳಲಿ.ಕೇವಲ ಪೇಪರ್ ಹೇಳಿಕೆ ಕೊಟ್ರೆ ಸಾಕಾ?ನಮ್ಮ ಮೇಲೆ ಗೂಬೆ ಕೂರಿಸೋದು ಬಿಟ್ಟು ಯಾವಾಗ ಕ್ರಮ ಮಾಡ್ತೀರಾ ಅಂತ ಕೇಂದ್ರದ ವಿರುದ್ಧ ಕಿಡಿಕಾರಿದರು.

ಎಸ್‌ಐಟಿಯಿಂದ ಸಂತ್ರಸ್ತರ ಮೇಲೆ ಒತ್ತಡ ಹಾಕ್ತಿರೋ ಆರೋಪ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಎಸ್‌ಐಟಿ ಅವರು ಸಂತ್ರಸ್ತರಿಗೆ ಕಾನ್ಫಿಡೆನ್ಸ್ ಬಿಲ್ಡ್ ಮಾಡಬೇಕು.ಈ ಕೆಲಸ ಎಸ್‌ಐಟಿ ಮಾಡ್ತಿದೆ. ಸಿಬಿಐಗೆ ಒಪ್ಪಿಸೋಕೆ ಯಾಕೆ ಆತುರ.ಮೊದಲು ಪ್ರಾಥಮಿಕ ತನಿಖೆ ಆಗಲಿ.ಪರೇಸ್ ಮೆಸ್ತಾ ಕೇಸ್, ಡಿವೈಎಸ್ಪಿ ಗಣಪತಿ ಕೇಸ್‌ನಲ್ಲಿ ಏನ್ ಆಯ್ತು ನಾವು ಕೊಟ್ಟ ತನಿಖೆಯೇ ಅವರು ಒಪ್ಪಿರೋದು.ಮೊದಲು ಪ್ರಾಥಮಿಕ ತನಿಖೆ ಮಾಹಿತಿ ಬರಲಿ.ಯಾಕೆ ಸಿಬಿಐ ತನಿಖೆ ಕೊಡಬೇಕು.ಯಾಕೆ ಕೇಸ್ ಮುಚ್ಚಿ ಹಾಕೋಕಾ?ಜೆಡಿಎಸ್ ಬಳಿ ಏನಾದ್ರು ದಾಖಲೆ ಇದ್ದರೆ ಕೊಡಲಿ.ಜೆಡಿಎಸ್ ಅವರು ಪ್ರಜ್ವಲ್ ಪರ ಮಾತಾಡ್ತಿದ್ದಾರೆ.ಪ್ರಜ್ವಲ್‌ಗೆ ಶಿಕ್ಷೆ ಆಗಬೇಕು ಅಂತಾ ಮಾತಾಡ್ತಿಲ್ಲ. ಕೇಸ್ ದಿಕ್ಕು ತಪ್ಪಿಸೋ ಕೆಲಸ ಮಾಡೋದು ಬೇಡ ಎಂದರು.

ದೇವರಾಜೇಗೌಡರನ್ನ ದೂರಿನ ಮೇಲೆ ಅರೆಸ್ಟ್ ಮಾಡಿದ್ದಾರೆ.ದೇವರಾಜೇಗೌಡ ಅವರೇ ಬಿಜೆಪಿ ನಾಯಕರ ಹೆಸರು ಹೇಳಿರೋದು.ಸಿಟಿ ರವಿ, ವಿಜಯೇಂದ್ರ ಬಳಿ ಆಡಿಯೋ ಇದ್ದರೆ ಸುದ್ದಿಗೋಷ್ಠಿ ಮಾಡಿ ಬಿಡುಗಡೆ ಮಾಡಲಿ.ಏನೇ ಮಾಹಿತಿ ಇದ್ದರೂ ಕೊಡಲಿ.ದೇವರಾಜೇಗೌಡ ಬಂಧನ ರಾಜಕೀಯ ಉದ್ದೇಶಕ್ಕೆ ಅಲ್ಲ. ಅತ್ಯಾಚಾರ ಕೇಸ್ ಬಂದಿತ್ತು. ಅರೆಸ್ಟ್ ಮಾಡಿರೋದು.ಈ ಕೇಸ್‌ನಲ್ಲೂ ಅರೆಸ್ಟ್ ಮಾಡಬಾರದಾ ಎಂದು ಬಂಧನ ಸಮರ್ಥನೆ ಮಾಡಿಕೊಂಡರು.

ವಿಡಿಯೋ ಲೀಕ್‌ನಲ್ಲಿ ರಾಹುಲ್, ಡಿಕೆ ಅರೆಸ್ಟ್ ಆಗ್ತಾರೆ ಎಂಬ ದೇವರಾಜೇಗೌಡ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಫಿಕ್ಸ್ ಮಾಡೋಕೆ ಮಾಡ್ತಿದ್ದಾರೆ. ದೇವರಾಜೇಗೌಡರೇ ಬಿಜೆಪಿ ನಾಯಕರು ನನ್ನ ಹಿಂದೆ ಇದ್ದಾರೆ ಅಂತ ಹೇಳಿದ್ದಾರೆ. ಡಿಕೆ ಶಿವಕುಮಾರ್, ದೇವರಾಜೇಗೌಡ ಜೊತೆ ಮಾತಾಡೋ ಆಡಿಯೋ ನಾನು ಕೇಳಿಲ್ಲ. 30 ಸೆಕೆಂಡ್ ಆಡಿಯೋ ಕೇಳಿದ್ದೇನೆ. ಅದರಲ್ಲಿ ಏನಿಲ್ಲ. ಈ ಕೇಸ್ ಗೆ ಅಮಿತ್ ಶಾ ಡೈರೆಕ್ಟರ್. ನಿರ್ಮಾಪಕರು ಜೆಡಿಎಸ್ ಅವರು ಇರಬಹುದು.ನಾಯಕ ತಮ್ಮ ಮನೆ ಮಗ ಅಂತಾ ಇವರು ಹೇಳ್ತಿಲ್ಲ ಎಂದರು.

# ವಕೀಲ ದೇವರಾಜೇಗೌಡ ಬಂಧನಕ್ಕೆ ಆರ್ ಅಶೋಕ್ ಖಂಡನೆ



**ಬೆಂಗಳೂರು:** ವಕೀಲ, ಬಿಜೆಪಿ ಮುಖಂಡ ದೇವರಾಜೇಗೌಡ ಬಂಧನವನ್ನು ಪ್ರತಿಪಕ್ಷ ನಾಯಕ ಆರ್ ಅಶೋಕ್ ಖಂಡಿಸಿದ್ದಾರೆ.

ಬೆಂಗಳೂರು ಬಿಜೆಪಿ ಕಚೇರಿಯಲ್ಲಿ ಮಾತಾಡಿದ ಅಶೋಕ್, ದೇವರಾಜೇಗೌಡ ಬಂಧನ ಸರಿಯಲ್ಲ. ಪೆನ್‌ಡ್ರೈವ್ ಬಿಡುಗಡೆ ಮಾಡಿದ ಬಗ್ಗೆ ಸಾಕ್ಷಿಯನ್ನು ಸಿಬಿಐಗೆ ನೀಡುವುದಾಗಿ ದೇವರಾಜೇಗೌಡ ಹೇಳಿದ್ರು. ಆದರೆ ಅವರನ್ನ ಬಂಧಿಸಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ ಶಿವಕುಮಾರ್ ಹೆಸರು ಹೇಳದಂತೆ ಧಮ್ಕಿ ಹಾಕಿದ್ದಾರೆ.ಈ ಪ್ರಕರಣದಲ್ಲಿ ಸರ್ಕಾರ ಖುಖಿ ಅನ್ನು ದುರ್ಬಳಕೆ ಮಾಡಿಕೊಂಡಿದೆ. ಸರ್ಕಾರದ ನಡೆ ಹೀಗೆ ಮುಂದುವರಿದರೆ ನಾವು ಸುಮ್ಮನೆ ಇರಲ್ಲ ಎಂದು ಆರ್ ಅಶೋಕ್ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಬರ ಇದೆ, ಮಳೆ ಬಂದ ನಂತರ ರೈತರ ಸಹಾಯಕ್ಕೆ ಸರ್ಕಾರ ಹೋಗಿಲ್ಲ. ರಸಗೊಬ್ಬರ ಸೇರಿ ಇತರ ಸೌಲಭ್ಯಗಳನ್ನು ಸರ್ಕಾರ ಒದಗಿಸಬೇಕು. ಆದರೆ ಸರ್ಕಾರಕ್ಕೆ ಪ್ರಜ್ವಲ್ ಪ್ರಕರಣವೇ ಬೇಕಾಗಿದೆ, ಬೇರೆ ಏನೂ ಬೇಕಾಗಿಲ್ಲ ಎಂದು ಅಶೋಕ್ ವಾಗ್ದಾಳಿ ನಡೆಸಿದ್ರು.

ಪೆನ್ ಡ್ರೈವ್ ಪ್ರಕರಣ ಎರಡನೇ ಹಂತದ ಚುನಾವಣೆಗೆ ಡ್ಯಾಮೇಜ್ ಮಾಡಿಲ್ಲ. ಎಲ್ಲೂ ಸಹ ಅದು ಪ್ರಭಾವ ಬೀರಿಲ್ಲ. ಉತ್ತರ ಕರ್ನಾಟಕ ಭಾಗ ಆಗಿರುವುದಕ್ಕೆ ಯಾವುದೇ ಸಮಸ್ಯೆ ಆಗಿಲ್ಲ ಎಂದು ಇದೇವೇಳೆ ಅಶೋಕ್ ತಿಳಿಸಿದರು.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com